ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 1 ಗುರುವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

46

ಸಂಪುಟ: 46 | ಸಂಚಿಕೆ: 254 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮೈಸೂರಿನಲ್ಲಿ ಹರ್ಷೋಲ್ಲಾಸದ ನಡುವೆ
ಹೊಸ ವರ್ಷ 2026ಕ್ಕೆ ಸ್ವಾಗತ



ಮೈಸೂರಿನ ಹೋಟೆಲ್‌ವೊಂದರಲ್ಲಿ ಯುವ ಜನಾಂಗ ಡ್ಯಾನ್ಸ್ ಮೂಲಕ ಹೊಸ ವರ್ಷಾಚರಣೆಯಲ್ಲಿ ತೊಡಗಿರುವುದು.

ಮೈಸೂರು,ಡಿ.31(ಪಿಎಂ)– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ನೂತನ ವರ್ಷ '2026' ಅನ್ನು ಸಡಗರ–ಸಂಭ್ರಮದಿಂದ ಸ್ವಾಗತಿಸಲಾಯಿತು. ನಗರದೆಲ್ಲೆಡೆ ಬುಧವಾರ ರಾತ್ರಿ 12 ಗಂಟೆಯಾಗುತ್ತಿದ್ದಂತೆ 'ಹ್ಯಾಪಿ ನ್ಯೂ ಇಯರ್' ಹರ್ಷೋದ್ಗಾರ ಮೊಳಗಿತು.

'ಹ್ಯಾಪಿ ನ್ಯೂ ಇಯರ್', 'ಹೊಸ ವರ್ಷದ ಶುಭಾಷಯಗಳು' ಎಂದು ಪರಸ್ಪರ ಹಸ್ತಲಾಘವ ಮಾಡಿಕೊಂಡು ಸಂಭ್ರಮಿಸುವ ದೃಶ್ಯ ನಗರದಲ್ಲಿ ರಾತ್ರಿ ಸಾಮಾನ್ಯವಾಗಿತ್ತು. ಬೆಳಗ್ಗೆಯಿಂದಲೇ ಹೊಸ ವರ್ಷ ಆಚರಣೆಗೆ ಸಿದ್ಧತೆ ನಡೆಸಲಾಗಿತ್ತು. ಈ ಪೈಕಿ ಚಿನ್ನಾಭರಣದೊಂದಿಗೆ ಹೊಸ ಬಟ್ಟೆ ಖರೀದಿಸಿ ಅನೇಕರು ಹೊಸ ವರ್ಷಾಚರಣೆ ನಡೆಸಿದರು.

ರಾತ್ರಿ 11 ಗಂಟೆಯಾಗುತ್ತಿದ್ದಂತೆ ಮೈಸೂರು ನಗರದ ಹೃದಯ ಭಾಗದಲ್ಲಿ ಹೆಚ್ಚಾಗಿ ಯುವ ಜನರು ಹಾಗೂ ಎಲ್ಲಾ ವಯೋಮಾನದವರು ಸಮಾವೇಶಗೊಂಡು ಹೊಸ ವರ್ಷ ಸ್ವಾಗತಿಸಲು ಅಣಿಯಾಗಿದ್ದರು. 12 ಗಂಟೆಯಾಗುತ್ತಿದ್ದಂತೆ ಅವರ ಸಂಭ್ರಮ ಮುಗಿಲು ಮುಟ್ಟಿತು. ಬೈಕ್, ಸ್ಕೂಟರ್ ಮತ್ತು ಕಾರುಗಳಲ್ಲಿ ಸುತ್ತಾಡಿದ ಯುವ ಜನರು, ವಿದ್ಯುತ್ ದೀಪಗಳಿಂದ ಝಗಮಗಿಸುತ್ತಿದ್ದ ಅರಮನೆ ಎದುರು ನಿಂತು ಫೋಟೋ, ಸೆಲ್ಫಿ ತೆಗೆದು ಕೊಂಡು ಸಂಭ್ರಮಿಸಿದರು. ವಿದ್ಯುತ್ ದೀಪಗಳಿಂದ ಅಲಂಕೃತಗೊಂಡಿದ್ದ ನಗರದ ಸ್ಟಾರ್ ಹೋಟೆಲ್, ರೆಸಾರ್ಟ್, ಕ್ಲಬ್, ಪಬ್‌ಗಳಲ್ಲಿ ಡ್ಯಾನ್ಸ್, ಮೋಜು–ಮಸ್ತಿಯೊಂದಿಗೆ ನೂತನ ವರ್ಷವನ್ನು ಬರಮಾಡಿಕೊಳ್ಳಲಾಯಿತು. ಇಲ್ಲಿ ಹೆಚ್ಚಾಗಿ ಯುವ ಜನರ ಮೋಜು ಕಳೆಗಟ್ಟಿತ್ತು. ಇವರೊಂದಿಗೆ ಎಲ್ಲಾ ವಯೋಮಾನದವರು ಕುಣಿದು ಕುಪ್ಪಳಿಸಿ ಸಂಭ್ರಮಿಸಿದರು. ಹೊಸ ವರ್ಷಕ್ಕೆಂದೇ ನೃತ್ಯ, ಸಂಗೀತ, ಗಾಯನ ಸೇರಿದಂತೆ ಸಾಂಸ್ಕೃತಿಕ, ಮನರಂಜನಾ ಕಾರ್ಯಕ್ರಮಗಳು ಇಲ್ಲೆಲ್ಲಾ ನಡೆಯುವ ಮೂಲಕ ಹೊಸ ವರ್ಷದ ಹರುಷ ಕಳೆಗಟ್ಟಿತ್ತು. ನಾನಾ ಬಗೆಯ ಭರ್ಜರಿ ಊಟದೊಂದಿಗೆ ಮದ್ಯ ಸೇವನೆಯ ಸಂಭ್ರಮವೂ ರಂಗೇರಿತ್ತು. ಎಲ್ಲೆಡೆ ನೂತನ ವರ್ಷ ಆರಂಭವಾಗುತ್ತಿದ್ದಂತೆ ಕೇಕ್ ಕತ್ತರಿಸಿ ಸಂಭ್ರಮಿಸಲಾಯಿತು. ■ 6ನೇ ಪುಟಕ್ಕೆ

ಕೋಗಿಲು ಅಕ್ರಮ ನಿರ್ಮಾಣ ತೆರವು ಪ್ರಕರಣ
ಸಂತ್ರಸ್ತರಿಗೆ ನಾಳೆ ಮನೆಗಳ ವಿತರಣೆ




ಬೆಂಗಳೂರು, ಡಿ.31– ಯಲಹಂಕ ಸಮೀಪದ ಕೋಗಿಲು ಬಡಾವಣೆಯಲ್ಲಿ ಅಕ್ರಮ ಮನೆಗಳ ತೆರವು ಹಿನ್ನೆಲೆಯಲ್ಲಿ ಅರ್ಹ ಸಂತ್ರಸ್ತರಿಗೆ 2026ರ ಜನವರಿ 2ಕ್ಕೆ ಮನೆ ವಿತರಣೆ ಮಾಡಲಾಗುವುದು ಎಂದು ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ತಿಳಿಸಿದ್ದಾರೆ.

ಬುಧವಾರ ಈ ಸಂಬಂಧ ಪ್ರಕಟಣೆ ನೀಡಿರುವ ಅವರು, ಕೋಗಿಲು ಬಡಾವಣೆಯಲ್ಲಿ ಅಕ್ರಮ ಮನೆಗಳ ತೆರವು ಪ್ರಕರಣದ ಹಿನ್ನೆಲೆಯಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಹಾಗೂ ರಾಜೀವ್ ಗಾಂಧಿ ವಸತಿ ನಿಗಮ ವತಿಯಿಂದ ಪರ್ಯಾಯವಾಗಿ ಶಾಶ್ವತ ವಸತಿ ವ್ಯವಸ್ಥೆ ಮಾಡಿಕೊಡುವ ಬಗ್ಗೆ ದಾಖಲೆ ಪರಿಶೀಲನೆ ■ 6ನೇ ಪುಟಕ್ಕೆ

ಆನ್‌ಲೈನ್ ಕಂದಾಯ ಕೋರ್ಟ್ ವ್ಯವಸ್ಥೆ

- ಕಂದಾಯ ಸಚಿವ ಕೃಷ್ಣಬೈರೇಗೌಡ ಮಾಹಿತಿ
- ಈ ನೂತನ ವ್ಯವಸ್ಥೆಯಿಂದ ಜನಸ್ನೇಹಿ, ಪಾರದರ್ಶಕತೆ
- ಇನ್ನು ಮುಂದೆ ಎಲ್ಲಾ ದಾಖಲೆಗಳು ಆನ್‌ಲೈನ್‌ನಲ್ಲೇ ಲಭ್ಯ



ಬೆಂಗಳೂರು, ಡಿ.31(ಕೆಎಂಶಿ)– ಉಪವಿಭಾಗಾಧಿಕಾರಿಗಳು ನ್ಯಾಯಾಲಯದ ಅಧಿಕಾರ ವ್ಯಾಪ್ತಿ ಮೀರಿ ಆದೇಶ ನೀಡುವುದನ್ನು ತಡೆಗಟ್ಟಲು ಹಾಗೂ ಪಾರದರ್ಶಕ ನ್ಯಾಯದಾನಕ್ಕೆ ಆನ್‌ಲೈನ್ ಕಂದಾಯ ನ್ಯಾಯಾಲಯ ವ್ಯವಸ್ಥೆ ಜಾರಿಗೆ ತರಲಾಗುತ್ತಿದೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ತಿಳಿಸಿದ್ದಾರೆ.

ಕಂದಾಯ ನ್ಯಾಯಾಲಯಗಳನ್ನು ಜನಸ್ನೇಹಿ ಹಾಗೂ ಪಾರದರ್ಶಕಗೊಳಿಸುವ ಉದ್ದೇಶದಿಂದ ನೂತನ ವ್ಯವಸ್ಥೆ ಜಾರಿಗೆ ತರಲಾಗುತ್ತಿದೆ ಎಂದು ಇಲಾಖಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಂದಾಯ ನ್ಯಾಯಾಲಯಗಳಲ್ಲಿ ಆರ್‌ಸಿಸಿಎಂಎಸ್ ಸೇರಿದಂತೆ ಡಿಜಿಟೈಜೇಷನ್ ಮುಖಾಂತರ ಆದೇಶ ನೀಡುವ ವ್ಯವಸ್ಥೆಗೆ ಚಾಲನೆ ನೀಡಿದ್ದು, ಜನಸಾಮಾನ್ಯರು ಸರ್ಕಾರಿ ಕಚೇರಿಗಳಿಗೆ ಅಲೆಯುವುದಕ್ಕೆ ಪೂರ್ಣ ವಿರಾಮ ನೀಡಬೇಕು ಎಂಬ ಉದ್ದೇಶದಿಂದ ಇ–ಆಡಳಿತಕ್ಕೆ ಹೆಚ್ಚು ಒತ್ತು ನೀಡಲಾಗಿದೆ.

ಕಂದಾಯ ಇಲಾಖೆ ಕಾರ್ಯವೈಖರಿಯಲ್ಲಿ ಪಾರದರ್ಶಕತೆ, ಭೂ ಸುರಕ್ಷಾ ಯೋಜನೆ ಮೂಲಕ ಎಲ್ಲಾ ಭೂದಾಖಲೆಗಳನ್ನು ಆನ್‌ಲೈನ್‌ನಲ್ಲೇ ಪಡೆಯುವುದಕ್ಕೆ ಅವಕಾಶ ನೀಡಲಾಗಿದೆ.

ಕಂದಾಯ ನ್ಯಾಯಾಲಯಗಳಿಗೆ ವಾದಿ–ಪ್ರತಿವಾದಿಗಳು ಅಲೆಯುವ ಬದಲು ಆನ್‌ಲೈನ್ ಮೂಲಕ ಕಲಾಪಗಳಲ್ಲಿ ಭಾಗವಹಿಸುವ ಸುಲಭ ವ್ಯವಸ್ಥೆ ಮಾಡಲಾಗಿದೆ. ಪಾರದರ್ಶಕತೆ, ನಾಗರಿಕರ ಅನುಕೂಲತೆ ಮತ್ತು ಸಬಲೀಕರಣ ಹೆಚ್ಚಿಸಲು ಕರ್ನಾಟಕ ಪೈಲಟ್ ಆಧಾರದ ಮೇಲೆ ಕಂದಾಯ ನ್ಯಾಯಾಲಯಗಳ ನೇರ ಪ್ರಸಾರ ಪರಿಚಯಿಸಲಿದೆ.

ಇದು ಜನ ಕೇಂದ್ರಿತ ಮತ್ತು ಪಾರದರ್ಶಕ ಆಡಳಿತದತ್ತ ಮಹತ್ವದ ಹೆಜ್ಜೆಯಾಗಿದ್ದು, ಕಂದಾಯ ನ್ಯಾಯಾಲಯ ವಿಚಾರಣೆಗಳ ನೇರ ಪ್ರಸಾರಕ್ಕೆ ಸರ್ಕಾರ ಆದೇಶ ಹೊರಡಿಸಿದೆ. ಪ್ರಕರಣಗಳ ಕಕ್ಷಿದಾರರು ನ್ಯಾಯಾಲಯದ ■ 6ನೇ ಪುಟಕ್ಕೆ

ಹೊಸ ವರ್ಷದ ಶುಭಾಶಯ



ನಮ್ಮೆಲ್ಲಾ ಓದುಗರು, ಜಾಹೀರಾತುದಾರರು, ಚಂದಾದಾರರು, ಅಭಿಮಾನಿಗಳು, ಪತ್ರಿಕಾ ವಿತರಕರು ಹಾಗೂ ನಾಡಿನ ಸಮಸ್ತರಿಗೆ ಹೊಸ ವರ್ಷ 2026ರ ಹಾರ್ದಿಕ ಶುಭಾಶಯಗಳು.

–ವ್ಯವಸ್ಥಾಪಕರು.
'ಮೈಸೂರು ಮಿತ್ರ'

ರಾಜ್ಯದ ಅಕ್ರಮ ವಾಸಿಗಳ ಹೊರಹಾಕುವ ಕೆಲಸ ಕ್ಷಿಪ್ರಗತಿಯಲ್ಲಿ ಸಾಗಿದೆ

ಅನುಮಾನಾಸ್ಪದ ವ್ಯಕ್ತಿಗಳ ವಿಚಾರಣೆಗಾಗಿ ನಿರ್ಧಾರ



ಬೆಂಗಳೂರು, ಡಿ.31(ಕೆಎಂಶಿ)– ಬಾಂಗ್ಲಾ ಸೇರಿದಂತೆ ಯಾವುದೇ ರಾಷ್ಟ್ರದ ಪ್ರಜೆಗಳು ಕರ್ನಾಟಕದಲ್ಲಿ ಅನಧಿಕೃತವಾಗಿ ನೆಲೆಸಿದ್ದರೆ ಅಂತಹವರನ್ನು ಪತ್ತೆ ಹಚ್ಚಿ ಹೊರಹಾಕುವ ಕೆಲಸ ಕ್ಷಿಪ್ರಗತಿಯಲ್ಲಿ ನಡೆಯುತ್ತಿದೆ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ್ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅನುಮಾನಾಸ್ಪದ ವ್ಯಕ್ತಿಗಳ ವಿಚಾರಣೆ ನಡೆಸಿ, ಅವರನ್ನು ಕಾನೂನಾತ್ಮಕವಾಗಿ ಭಾರತದ ಗಡಿಗೆ ಬಿಡುವ ಕೆಲಸ ನಡೆದಿದೆ.

ಅಕ್ರಮ ವಲಸಿಗರಾಗಿ ಬಂದು ಅಪರಾಧ ಚಟುವಟಿಕೆಯಲ್ಲಿ ತೊಡಗಿಸಿಕೊಂಡವರ ವಿರುದ್ಧ ಪ್ರಕರಣ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಲಾಗಿದೆ. ಕೆಲವು ಅನುಮಾನಾಸ್ಪದ ವ್ಯಕ್ತಿಗಳ ಬ್ಯಾಂಕ್ ಖಾತೆಗಳನ್ನು ಮುಟ್ಟುಗೋಲು ಹಾಕಿಕೊಂಡು, ದಾಖಲೆಗಳನ್ನು ಪೊಲೀಸರು ಪರಿಶೀಲಿಸುತ್ತಿದ್ದಾರೆ.

ನಗರಗಳಲ್ಲಷ್ಟೇ ಅಲ್ಲದೆ, ದೊಡ್ಡ ದೊಡ್ಡ ಉದಿಮೆಗಳು ಮತ್ತು ಕಾಫಿ ತೋಟಗಳಲ್ಲಿ ಬಾಂಗ್ಲಾ ಪ್ರಜೆಗಳು ನೆಲೆಸಿದ್ದಾರೆಂಬ ಮಾಹಿತಿ ಬರುತ್ತಿವೆ. ಇದನ್ನು ಗಮನದಲ್ಲಿಟ್ಟುಕೊಂಡು ವಿವಿಧ ಉದ್ದಿಮೆಗಳು, ತೋಟದ ಮಾಲೀಕರು ತಮ್ಮಲ್ಲಿರುವ ನೌಕರರ ಬಗ್ಗೆ ಪೂರ್ಣ ಮಾಹಿತಿಯನ್ನು ಸ್ಥಳೀಯ ಪೊಲೀಸ್ ಠಾಣೆಗಳಿಗೆ ನೀಡುವಂತೆ ಆದೇಶಿಸಲಾಗಿದೆ.

ಇಲಾಖೆ ಅಧಿಕಾರಿಗಳು ಹಠಾತ್ ಭೇಟಿ ನೀಡಿ ಸಂಶಯಾಸ್ಪದ ವ್ಯಕ್ತಿಗಳ ಗುರುತಿನ ಚೀಟಿ ಮತ್ತು ದಾಖಲೆಗಳನ್ನು ಪರಿಶೀಲಿಸುತ್ತಿದ್ದಾರೆ.

ಬೆಂಗಳೂರು ನಗರ ಸೇರಿದಂತೆ ಕೆಲವು ಪಟ್ಟಣಗಳ ಸರ್ಕಾರಿ ಜಾಗದಲ್ಲಿ ಗುಂಪು ಗುಂಪಾಗಿ ಬೀಡುಬಿಟ್ಟಿರುವ ಅಕ್ರಮ ವಲಸಿಗರ ದಾಖಲೆ ಪರಿಶೀಲನೆ ಕಾರ್ಯವೂ ನಡೆದಿದೆ ಎಂದರು. ಅಕ್ರಮ ವಲಸಿಗರು ಡ್ರಗ್ಸ್ ದಂಧೆಯಲ್ಲಿ ತೊಡಗಿಸಿಕೊಂಡಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದು, ಇದನ್ನು ಏಕಕಾಲದಲ್ಲಿ ನಿಯಂತ್ರಿಸಲು ಕಾರ್ಯಾಚರಣೆ ನಡೆದಿದೆ ಎಂದರು.

ಡಾ.ರಾಜ್‌ಕುಮಾರ್ ರಸ್ತೆ ಅಭಿವೃದ್ಧಿ ನೆನೆಗುದಿಗೆ



ಮೈಸೂರು ಟೆರೇಸಿಯನ್ ಕಾಲೇಜು ಸಿಗ್ನಲ್(ಯರಗನಹಳ್ಳಿ ಜಂಕ್ಷನ್) ಬಳಿಯ ಡಾ.ರಾಜ್‌ಕುಮಾರ್ ರಸ್ತೆಯ ನೈಜಸ್ಥಿತಿ.

ಮೈಸೂರು,ಡಿ.31–ಮೈಸೂರಿನ ಡಾ.ರಾಜ್ ಕುಮಾರ್ ರಸ್ತೆಗೆ ಪೂರ್ಣಪ್ರಮಾಣದ ಅಭಿವೃದ್ಧಿ ಭಾಗ್ಯ ಇನ್ನೂ ಕೂಡಿಬಂದಿಲ್ಲ.

ಕನ್ನಡದ ಮೇರು ನಟ ಡಾ.ರಾಜ್ ಕುಮಾರ್ ಹೆಸರಿನಲ್ಲಿರುವ ಈ ರಸ್ತೆಯ ದುರಸ್ತಿ ಬಗ್ಗೆ ಆಡಳಿತ ವ್ಯವಸ್ಥೆ ಯಾಕಿಷ್ಟು ಅಸಡ್ಡೆ ತೋರುತ್ತಿದೆ ಎಂಬುದೇ ಜನರಲ್ಲಿರುವ ಯಕ್ಷಪ್ರಶ್ನೆಯಾಗಿದೆ.

ಟೆರೇಷಿಯನ್ ಕಾಲೇಜು ಸಿಗ್ನಲ್ (ಯರಗನಹಳ್ಳಿ ಜಂಕ್ಷನ್) ಬಳಿಯಿಂದ ಸ್ವಲ್ಪ ದೂರ ಸಾಗುತ್ತಿದ್ದಂತೆ ರಾಜ್ ಕುಮಾರ್ ರಸ್ತೆಯ ನೈಜಸ್ಥಿತಿ ಎದುರಾಗುತ್ತದೆ. ಸುಮಾರು 1 ಕಿಲೋ ಮೀಟರ್‌ವರೆಗೆ ರಸ್ತೆ ಸಂಪೂರ್ಣ ಹಾಳಾಗಿದೆ. ಬೃಹತ್ ಹೊಂಡಗಳು ನಿರ್ಮಾಣವಾಗಿವೆ. ಇಲ್ಲಿ ವಾಹನ ಸಂಚಾರ ಸವಾಲಾಗಿ ಪರಿಣಮಿಸಿದೆ. ಕ್ಷಣ ಕ್ಷಣಕ್ಕೂ ಧೂಳು ಮೇಲೆದ್ದು ನಿವಾಸಿಗಳು, ವ್ಯಾಪಾರಿಗಳ ಆರೋಗ್ಯಕ್ಕೂ ಸಂಚಕಾರ ಉಂಟಾಗಿದೆ. ಹಲವು ಬಡಾವಣೆಗಳನ್ನು ಸಂಪರ್ಕಿಸುವ ಪ್ರಮುಖ ರಸ್ತೆಯ ಅಧ್ವಾನದ ಬಗ್ಗೆ ಯಾರೂ ಗಮನಹರಿಸುತ್ತಿಲ್ಲ. ಬನ್ನೂರು ರಸ್ತೆ ಜಂಕ್ಷನ್‌ನಿಂದ ಉದಯಗಿರಿ ಮಹದೇವಪುರ ರಸ್ತೆವರೆಗಿನ ಸುಮಾರು 4 ಕಿಲೋ ಮೀಟರ್ ರಾಜ್‌ಕುಮಾರ್ ರಸ್ತೆಯಲ್ಲಿ 1 ಕಿಲೋ ಮೀಟರ್‌ನಷ್ಟು ಮಾತ್ರ ಸಂಪೂರ್ಣ ಹಾಳಾಗಿದೆ. ಈ ಭಾಗದ ನಿವಾಸಿಗಳು, ವ್ಯಾಪಾರಿಗಳು ನತದೃಷ್ಟರಾಗಿದ್ದೇವೆ ಎಂದು ಜನ ಬೇಸರ ವ್ಯಕ್ತಪಡಿಸಿದ್ದಾರೆ.

ನಗರದ ಉತ್ತರ ಹಾಗೂ ದಕ್ಷಿಣದ ಹಲವು ಬಡಾವಣೆಗಳನ್ನು ಸಂಪರ್ಕಿಸುವ ಈ ರಸ್ತೆಯಲ್ಲಿ ನಿರಂತರವಾಗಿ ವಾಹನ ಸಂಚಾರವಿರುತ್ತದೆ. ಈ ರಸ್ತೆಯಲ್ಲಿ ಹಲವು ಶಾಲಾ–ಕಾಲೇಜುಗಳಿರುವುದರಿಂದ ಹೆಚ್ಚಿನ ಸಂಖ್ಯೆಯ ಮಕ್ಕಳು ಓಡಾಡುತ್ತಾರೆ. ಇಕ್ಕೆಲಗಳಲ್ಲಿ ಹಲವು ಅಂಗಡಿಗಳಿವೆ. ಪ್ರತಿ ವಾಹನ ಸಾಗಿದಾಗಲೂ ಧೂಳು ಮೇಲೆದ್ದು, ಸುತ್ತಮುತ್ತ ಹರಡುತ್ತದೆ. ನಿವಾಸಿಗಳು, ವ್ಯಾಪಾರಿಗಳು ಹಾಗೂ ವಾಹನ ಸವಾರರ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ.

ಜನರ ಫಜೀತಿ

ನಿತ್ಯ ಈ ರಸ್ತೆಯಲ್ಲಿ ಅಪಘಾತಗಳು ಸಂಭವಿಸುತ್ತವೆ. ದ್ವಿಚಕ್ರ ವಾಹನ ಸವಾರರು ಹೊಂಡ ತಪ್ಪಿಸಲಾಗದೆ ಆಯತಪ್ಪಿ ಬಿದ್ದು, ಗಾಯಗೊಳ್ಳುತ್ತಿದ್ದಾರೆ. ವಾಹನಗಳ ಟೈರ್ ಅಂಚಿಗೆ ಸಿಕ್ಕಿ ಚಿಮ್ಮುವ ಕಲ್ಲುಗಳಿಂದ ಗಾಯಗೊಂಡಿರುವ ಘಟನೆಯೂ ನಡೆದಿದೆ. ಬೇಸಿಗೆ ಮತ್ತು ಚಳಿಗಾಲದಲ್ಲಿ ಧೂಳು, ಮಳೆಗಾಲದಲ್ಲಿ ಕೆಸರುಮಯ. ವರ್ಷವಿಡೀ ಒಂದಿಲ್ಲೊಂದು ಸವಾಲು ಎದುರಾಗುತ್ತದೆ. ನಮ್ಮ ಗೋಳು ಅರಣ್ಯರೋಧನವಾಗಿದೆ. ಯಾರೂ ನಮ್ಮ ನೋವಿಗೆ ಸ್ಪಂದಿಸುತ್ತಿಲ್ಲ ಎಂದು ಸ್ಥಳೀಯರು ಅಲವತ್ತುಕೊಂಡಿದ್ದಾರೆ.

ಮೈಸೂರು ಯಾದವಗಿರಿ ರೈಲ್ವೆ ಹಳಿ ಪಕ್ಕ ಆಕಸ್ಮಿಕ ಬೆಂಕಿ

ಏಕಾಂಗಿಯಾಗಿ ನಂದಿಸಿ ಅಪಾಯ ತಪ್ಪಿಸಿದ ಯುವಕ




ಮೈಸೂರಿನ ಮೇಟಗಳ್ಳಿ ನಿವಾಸಿ ಪ್ರಜ್ವಲ್ ಬೆಂಕಿ ನಂದಿಸುತ್ತಿರುವುದು.

ಮೈಸೂರು,ಡಿ.31(ಆರ್‌ಕೆ)–ಯುವಕ ನೋರ್ವ ಸಮಯ ಪ್ರಜ್ಞೆ ಮೆರೆದು ರೈಲ್ವೆ ಹಳಿ ಪಕ್ಕ ಆರ್ಭಟಿಸುತ್ತಿದ್ದ ಬೆಂಕಿ ನಂದಿಸಿ, ಅಪಾಯ ತಪ್ಪಿಸಿದಂತಹ ಪ್ರಸಂಗ ಮೈಸೂರಿನ ಯಾದವಗಿರಿ ರೈಲ್ವೆ ಟ್ರ್ಯಾಕ್ ಬಳಿ ಮಂಗಳವಾರ ಸಂಜೆ ಸಂಭವಿಸಿದೆ.

ಮೈಸೂರಿನ ಮೇಟಗಳ್ಳಿ ನಿವಾಸಿ, 18ರ ಪ್ರಾಯದ ಯುವಕ ಪ್ರಜ್ವಲ್, ಈ ಸಾಹಸ ಮೆರೆದು ಸಾರ್ವಜನಿಕರ ಮೆಚ್ಚುಗೆಗೆ ಪಾತ್ರನಾಗಿದ್ದಾನೆ. ರೈಲ್ವೆ ಟ್ರ್ಯಾಕ್ ಪಕ್ಕದಲ್ಲಿ ಮೇಟಗಳ್ಳಿ ಕಡೆಯಿಂದ ಯಾದವಗಿರಿ ಕಡೆ ಬರುತ್ತಿದ್ದ ಪ್ರಜ್ವಲ್‌ಗೆ ಅಂಡರ್ ಬ್ರಿಡ್ಜ್ ಸಮೀಪ ಬೆಳೆದು ನಿಂತಿದ್ದ ಹುಲ್ಲು ಹಾಗೂ ಗಿಡಗಂಟಿಗೆ ಬೆಂಕಿಬಿದ್ದು, ಜ್ವಾಲೆ ದಗದಗಿಸುತ್ತಿದ್ದುದು ಕಂಡು ಬಂದಿದೆ.

ತಕ್ಷಣ ಕಾರ್ಯ ಪ್ರವೃತ್ತನಾದ ಆತ ಸಮೀಪದ ಪಂಕ್ಚರ್ ಅಂಗಡಿಯಿಂದ ಕ್ಯಾನ್‌ನಲ್ಲಿ ನೀರು ತಂದು ಬೆಂಕಿ ನಂದಿಸಲಾರಂಭಿಸಿದ್ದಾನೆ. ಅಲ್ಲದೆ ಸುತ್ತಮುತ್ತಲಿನ ಮನೆಗಳಲ್ಲಿಯೂ ನೀರು ಕೇಳಿ ತಂದು ಸುಮಾರು 1 ಗಂಟೆಗೂ ಹೆಚ್ಚು ಕಾಲ ಶ್ರಮಿಸಿ ಬೆಂಕಿ ನಂದಿಸಿದ್ದಾನೆ. ಆದರೆ, ಆ ವೇಳೆ ಅದೇ ಮಾರ್ಗದಲ್ಲಿ ಹೋಗುತ್ತಿದ್ದ ಜನ ಮಾತ್ರ ಇದನ್ನು ಕಂಡೂ ಕಾಣದಂತೆ ತೆರಳುತ್ತಿದ್ದರು. ಆದರೆ ಪ್ರಜ್ವಲ್ ಮಾತ್ರ ತನ್ನ ಪ್ರಯತ್ನವನ್ನು ನಿಲ್ಲಿಸಲಿಲ್ಲ. ಹಾಗಾಗಿ ಬೆಂಕಿ ಬೇರೆಡೆ ಹರಡಿ ಸಂಭವಿಸಬಹುದಾದ ಅಪಾಯ ತಪ್ಪಿದೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಯುವಕನ ಸಮಯ ಪ್ರಜ್ಞೆ ಮತ್ತು ಧೈರ್ಯವನ್ನು ಸ್ಥಳೀಯರು ಶ್ಲಾಘಿಸಿದ್ದಾರೆ. ಅಲ್ಲದೇ ರೈಲ್ವೆ ರಕ್ಷಣಾ ಪಡೆ (ಆರ್‌ಪಿಎಫ್) ಇನ್ಸ್‌ಪೆಕ್ಟರ್ ದಿನೇಶ್ ಕುಮಾರ್ ಅವರು ಪ್ರಜ್ವಲ್‌ನ ಜವಾಬ್ದಾರಿಯನ್ನು ಪ್ರಶಂಸಿಸಿದ್ದು, ರೈಲ್ವೆ ಇಲಾಖೆಯಿಂದ ನೀಡಲಾಗುವ ಶೌರ್ಯ ಪ್ರಶಸ್ತಿಗೆ ಯುವಕನ ಹೆಸರು ಶಿಫಾರಸ್ಸು ಮಾಡುವುದಾಗಿ ತಿಳಿಸಿದ್ದಾರೆ.

ವೈಕುಂಠ ಏಕಾದಶಿ ವಿಶೇಷ ಪೂಜೆ...



ವೈಕುಂಠ ಏಕಾದಶಿ ಪ್ರಯುಕ್ತ ಇಲವಾಲ ಹೋಬಳಿಯ ದಡದಕಲ್ಲಹಳ್ಳಿ ಉದ್ಭವ ಮೂರ್ತಿ ಶ್ರೀ ವೆಂಕಟರಮಣ ಸ್ವಾಮಿ ದೇವಸ್ಥಾನಕ್ಕೆ ಶಾಸಕ ಜಿ.ಟಿ.ದೇವೇಗೌಡರು ಕುಟುಂಬ ಸಮೇತ ತೆರಳಿ ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ಮುಖಂಡರಾದ ವೀರಭದ್ರಸ್ವಾಮಿ, ಲೋಕೇಶ್, ಗ್ರಾಪಂ ಮಾಜಿ ಅಧ್ಯಕ್ಷ ಯೋಗಮೂರ್ತಿ ಇತರರಿದ್ದರು.

ಮೈಸೂರಲ್ಲಿ ಅಪಾಯಕ್ಕೆ ಕಾದಿರುವ ಇಂಟರ್ನೆಟ್ ಕೇಬಲ್‌ಗಳು

- ಕಂಬಗಳಲ್ಲಿ ಅಳವಡಿಸಿರುವ ಕೇಬಲ್‌ಗಳು ತುಂಡಾಗಿ ಆತಂಕ
- ಇದನ್ನು ಸರಿಪಡಿಸುವವರು ಯಾರು ?



ಇಂಟರ್ನೆಟ್ ಕೇಬಲ್‌ಗಳು ತುಂಡಾಗಿ ನೇತಾಡುತ್ತಿರುವುದು.


ಮೈಸೂರು, ಡಿ.31(ಜಿಎ)–ಮೈಸೂರು ನಗರದಾದ್ಯಂತ ಇಂಟರ್ನೆಟ್ ಕೇಬಲ್‌ಗಳು ಅಪಾಯಕ್ಕೆ ಆಹ್ವಾನ ನೀಡುತ್ತಿದ್ದು, ವಾಹನ ಸವಾರರು, ಪಾದಚಾರಿಗಳು ಆಂತಕದಲ್ಲಿ ಸಂಚರಿಸುವಂತಾಗಿದೆ.

ನಗರದ ರಾಮ ವಿಲಾಸ ರಸ್ತೆಯಲ್ಲಿರುವ ಬನುಮಯ್ಯ ಚೌಕದ 4 ದಿಕ್ಕಿನಲ್ಲಿರುವ ವಿದ್ಯುತ್ ಕಂಬಗಳಿಗೆ ಅಳವಡಿಸಿರುವ ಇಂಟರ್ನೆಟ್ ಕೇಬಲ್‌ಗಳು ಇಂದು ಬೆಳಗ್ಗೆ ತುಂಡಾಗಿ ವಾಹನ ಸವಾರರು ಸಂಚರಿಸಲು ಪರದಾಡಿದರು. ರಾಮ ವಿಲಾಸ ರಸ್ತೆಯ ಮೂಲಕ ಬರುವ ಭಾರೀ ವಾಹನಗಳು ಬನುಮಯ್ಯ ಚೌಕದಿಂದ ಸಂತೇಪೇಟೆಗೆ ವಸ್ತುಗಳನ್ನು ಸರಬರಾಜು ಮಾಡಲು ನಿತ್ಯವೂ ಸಂಚರಿಸುತ್ತವೆ. ಈ ವೇಳೆ ವಾಹನಗಳ ಎತ್ತರವಿದ್ದಾಗ ಇಂಟರ್ನೆಟ್ ಕೇಬಲ್‌ಗಳು ಲಾರಿಗಳಿಗೆ ಸಿಲುಕಿ ತುಂಡಾಗಿ ಕೆಲಕಾಲ ವಾಹನಗಳ ಸಂಚಾರದಲ್ಲಿ ವ್ಯತ್ಯಯ ಉಂಟಾಗುತ್ತದೆ.

ಬನುಮಯ್ಯ ಚೌಕದಿಂದ ಸುತ್ತಲೂ ಹಣ್ಣು–ತರಕಾರಿ ಮಾರಾಟ ಮಾಡುವುದರಿಂದ ಪಾದಚಾರಿಗಳು ಇಲ್ಲಿ ಖರೀದಿ ಮಾಡುವುದು ಸಾಮಾನ್ಯ. ಕೆಲವು ಸಮಯ ಈ ರೀತಿ ಕೇಬಲ್‌ಗಳು ತುಂಡಾದ ಸಂದರ್ಭದಲ್ಲಿ ಹಣ್ಣು–ತರಕಾರಿ ಖರೀದಿ ಮಾಡುವವರು ಮತ್ತು ಮಾರಾಟ ಮಾಡುವವರು ಆತಂಕಕ್ಕೆ ಒಳಗಾಗುತ್ತಿದ್ದಾರೆ. ಇದನ್ನು ಸರಿಪಡಿಸಿ, ಅನಾಹುತವಾಗುವುದನ್ನು ಸರಿಪಡಿಸುವವರು ಯಾರು?

ವಾರದಲ್ಲಿ ಅನೇಕ ಬಾರಿ ಇದೇ ರೀತಿ ಇಂಟರ್ನೆಟ್ ಕೇಬಲ್ ಸೇರಿದಂತೆ ಇಲ್ಲಿರುವ ಅನೇಕ ಕೇಬಲ್‌ಗಳು ಭಾರೀ ವಾಹನಗಳಿಗೆ ತಗುಲಿ ತುಂಡಾಗುತ್ತಿವೆ. ಕೆಲವು ಬಾರಿ ನಾವೇ ಕೇಬಲ್‌ಗಳನ್ನು ತೆಗೆದು ವಾಹನ ಸಂಚಾರಕ್ಕೆ ಅನುವು ಮಾಡಿಕೊಡುತ್ತೇವೆ. ನಂತರ ಕೇಬಲ್‌ಗೆ ಸಂಬಂಧಪಟ್ಟವರು ಮತ್ತೆ ಜೋಡಿಸಿ ಹೋಗುತ್ತಾರೆ. ಒಟ್ಟಾರೆ ಇಲ್ಲಿ ಸಂಚರಿಸಲು ಆತಂಕವಾಗುತ್ತದೆ ಎಂದು ಹಣ್ಣು–ತರಕಾರಿ ಮಾರಾಟಗಾರರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಕ್ಯಾಲೆಂಡರ್ ಬಿಡುಗಡೆ



ಹುಣಸೂರು ತಾಲೂಕು ಶಿವಾರ್ಚಕರ ಸಂಘದ 2026ನೇ ವರ್ಷದ ಕ್ಯಾಲೆಂಡರ್ ಅನ್ನು ಮೈಸೂರಿನ ತ್ರಿಪುರ ಸುಂದರಿ ದೇವಸ್ಥಾನದಲ್ಲಿ ಬಿಡುಗಡೆ ಮಾಡಲಾಯಿತು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಬಿ.ಚಂದ್ರಶೇಖರ್, ಉಪಾಧ್ಯಕ್ಷ ಮಲ್ಲೇಶ್, ಕಾರ್ಯದರ್ಶಿ ಮಂಜುನಾಥ್, ಸಹ ಕಾರ್ಯದರ್ಶಿ ಬಸವರಾಜು ನಿರ್ದೇಶಕರಾದ ಹರೀಶ್, ಶಿವರಾಜ್, ತಮ್ಮಯ್ಯ ಎನ್.ಸತೀಶ್, ಪ್ರತಾಪ್, ಹರೀಶ್, ಕುಮಾರ್, ಮಹದೇವಪ್ರಸಾದ್, ಮಲ್ಲಿಕಾರ್ಜುನಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ಗಿಗ್ ಕಾರ್ಮಿಕರ ಹೋರಾಟಕ್ಕೆ ಎಐಡಿವೈಓ ಬೆಂಬಲ

ಮೈಸೂರು,ಡಿ.31(ಎಂಕೆ)–ಗಿಗ್ ಹಾಗೂ ಪ್ಲಾಟ್‌ಫಾರ್ಮ್ ಕಾರ್ಮಿಕರ ದೇಶವ್ಯಾಪಿ ಪ್ರತಿಭಟನೆಗೆ ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಸೇಶನ್ (ಎಐಡಿವೈಓ) ಬೆಂಬಲ ನೀಡಿದೆ.

ದಿನೇ ದಿನೆ ಹದಗೆಡುತ್ತಿರುವ ಕೆಲಸದ ಪರಿಸ್ಥಿತಿಗಳು, ನ್ಯಾಯಯುತ ವೇತನದ ನಿರಾಕರಣೆ, ಸುರಕ್ಷತೆಯ ಕೊರತೆ ಮತ್ತು ಸಾಮಾಜಿಕ ಭದ್ರತೆಯ ಅಲಭ್ಯತೆಯನ್ನು ವಿರೋಧಿಸಿ, ಇ–ಕಾಮರ್ಸ್ ಮತ್ತು ಫುಡ್ ಡೆಲಿವರಿ ಕಂಪನಿಗಳಾದ ಸ್ವಿಗ್ಗಿ, ಝೊಮ್ಯಾಟೊ, ಜೆಪ್ಟೊ, ಬ್ಲಿಂಕಿಟ್, ಅಮೆಜಾನ್ ಮತ್ತು ಫ್ಲಿಪ್ ಕಾರ್ಟ್ ಸಂಸ್ಥೆಗಳ ಲಕ್ಷಾಂತರ ಡೆಲಿವರಿ ಹಾಗೂ ಗಿಗ್ ಕಾರ್ಮಿಕರ ಪ್ರತಿಭಟನೆ ಎಐಡಿವೈಓ ಬೆಂಬಲ ಸೂಚಿಸಿದೆ ಎಂದು ಜಿಲ್ಲಾ ಕಾರ್ಯದರ್ಶಿ ಎಸ್.ಸುಮ ತಿಳಿಸಿದ್ದಾರೆ.

ಭಾರತದ ಡಿಜಿಟಲ್ ಆರ್ಥಿಕತೆಯ ಬೆನ್ನೆಲುಬಾಗಿರುವ ಗಿಗ್ ಹಾಗೂ ಪ್ಲಾಟ್‌ಫಾರ್ಮ್ ಕಾರ್ಮಿಕರು, ಲಕ್ಷಾಂತರ ಜನರಿಗೆ ಅಗತ್ಯ ವಸ್ತುಗಳು ಮತ್ತು ಸೇವೆಗಳನ್ನು ಒದಗಿಸುತ್ತಿದ್ದಾರೆ. ಅವರಿಗೆ ನ್ಯಾಯಸಮ್ಮತ ಕೂಲಿ ನೀಡಬೇಕು. ಅಪಾಯಕಾರಿ ಅತಿ ವೇಗದ 10 ಮಿನಿಟ್ ಡೆಲಿವರಿ ನಿಯಮವನ್ನು ಅಂತ್ಯಗೊಳಿಸಬೇಕು. ಕಾರಣವಿಲ್ಲದೆ ಖಾತೆಗಳನ್ನು ತಡೆ ಹಿಡಿಯುವ ಪದ್ಧತಿ ರದ್ದಾಗಬೇಕು ಹಾಗೂ ಸೂಕ್ತ ಕಾರ್ಮಿಕ ಹಕ್ಕುಗಳಿಗೆ ಮಾನ್ಯತೆ ನೀಡಬೇಕು ಎಂದು ಆಗ್ರಹಿಸಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವುದನ್ನು ಖಂಡಿಸಿ ಮೈಸೂರು ಕನ್ನಡ ವೇದಿಕೆಯಿಂದ ಪ್ರತಿಭಟನೆ

ಮೈಸೂರು, ಡಿ.31(ಜಿಎ)–ರಾಜ್ಯದಲ್ಲಿ ಅಪರಾಧ ಪ್ರಕರಣಗಳು ಹೆಚ್ಚಾಗಿ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವುದನ್ನು ಖಂಡಿಸಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.



ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವುದನ್ನು ಖಂಡಿಸಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.

ರಾಜ್ಯದ ಕಾನೂನು ಸುವ್ಯವಸ್ಥೆ ದಿನೇ ದಿನೇ ಹದಗೆಡುತ್ತಿದ್ದು ಜನರು ಆತಂಕಕ್ಕೀಡಾಗಿದ್ದಾರೆ. ಒಂದು ಕಾಲದಲ್ಲಿ ದಕ್ಷಿಣ ಭಾರತದ ಸುರಕ್ಷತೆಯ ಭದ್ರಕೋಟೆ ಎಂದು ಹೆಸರುವಾಸಿಯಾಗಿದ್ದ ಕರ್ನಾಟಕದಲ್ಲಿ ಇಂದು ಕಾನೂನು ಸುವ್ಯವಸ್ಥೆ ಹದೆಗೆಟ್ಟು ಉತ್ತರ ಭಾರತದ ರೀತಿಯಲ್ಲಿ ಕೊಲೆ, ದರೋಡೆ, ಡಕಾಯಿತಿ, ಮಾದಕ ವಸ್ತುಗಳ ಚಟುವಟಿಕೆಗಳು ಹೆಚ್ಚಾಗುತ್ತಿರುವುದು ಭದ್ರತಾ ವೈಫಲ್ಯವನ್ನು ಎತ್ತಿ ತೋರುತ್ತದೆ. ಗೃಹ ಇಲಾಖೆ, ಪೊಲೀಸ್ ಇಲಾಖೆ, ಗುಪ್ತಚರ ಇಲಾಖೆ ಮೇಲೆ ನಿಯಂತ್ರಣ ಕಳೆದುಕೊಂಡಿರುವ ಭಾವನೆ ಜನರಲ್ಲಿ ಮೂಡಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಠಾಣೆಗಳಲ್ಲಿ ಪ್ರತಿ ತಿಂಗಳು ಮಾಸಿಕ ಸಭೆ ಕರೆದು ಆಯಾ ಠಾಣೆ ವ್ಯಾಪ್ತಿಯ ಚಟುವಟಿಕೆ ಬಗ್ಗೆ ಮೊಹಲ್ಲಾ ವಾಸಿ ಹಾಗೂ ಗ್ರಾಮಗಳ ಮುಖಂಡರೊಂದಿಗೆ ಠಾಣಾಧಿಕಾರಿಗಳು ವಿಚಾರ ವಿನಿಮಯ ಮಾಡಿಕೊಳ್ಳುತ್ತಿದ್ದರು. ವಿಪರ್ಯಾಸವೆಂದರೆ ಇತ್ತೀಚಿನ ದಿನಗಳಲ್ಲಿ ಇವೆಲ್ಲ ಕಣ್ಮರೆಯಾಗಿರುವುದು ರಾಜ್ಯದ ಭದ್ರತಾ ದೃಷ್ಟಿಯಿಂದ ದುರ್ದೈವದ ಸಂಗತಿ. ರಾಜ್ಯದ ಗೃಹ ಇಲಾಖೆ ನಿದ್ರಾವಸ್ಥೆಯಿಂದ ಎದ್ದು ಸಾರ್ವಜನಿಕರ ಆಸ್ತಿ–ಪಾಸ್ತಿ ಜೀವದ ದೃಷ್ಟಿಯಿಂದ ಸಂಬಂಧಪಟ್ಟ ಠಾಣಾಧಿಕಾರಿಗಳಿಗೆ ಕಾನೂನು ಸುವ್ಯವಸ್ಥೆ ಬಗ್ಗೆ ಖಡಕ್ ನಿರ್ಣಯ ತೆಗೆದುಕೊಳ್ಳಲು ಸೂಚನೆ ನೀಡಬೇಕು. ಅಪರಾಧ ಕೃತ್ಯಗಳಿಗೆ ಕಡಿವಾಣ ಹಾಕಬೇಕು ಎಂದು ಆಗ್ರಹಿಸಿದರು.

ಜ.3ರಂದು ಮಹಾ ಮೃತ್ಯುಂಜಯ ಹೋಮ

ಮೈಸೂರು, ಡಿ.31– ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಜನವರಿ 3ರ ಶನಿವಾರದಂದು ಹುಣ್ಣಿಮೆ ಪ್ರಯುಕ್ತ ಮಹಾ ಮೃತ್ಯುಂಜಯ ಹೋಮ ಮತ್ತು ಮೇಷ, ಸಿಂಹ, ಕರ್ಕಾಟಕ, ಕುಂಭ, ಮೀನ ರಾಶಿಯವರಿಗೆ ಶನಿಮಹಾಶಾಂತಿ ಮತ್ತು ಬಾಧಾ ನಿವಾರಕ ಮಹಾ ಸುದರ್ಶನ ಹೋಮ ಕುಜ ಶಾಂತಿ ಸ್ವಯಂ ವರಾಪಾರ್ವತಿ ಹೋಮ ಏರ್ಪಡಿಸಲಾಗಿದೆ. ಬೆಳಿಗ್ಗೆ 9.30ಕ್ಕೆ ಪ್ರಾರಂಭವಾಗಿ 12.30ಕ್ಕೆ ಪೂರ್ಣಾಹುತಿ. ಹೆಚ್ಚಿನ ವಿವರಗಳಿಗೆ ಮೈ ಕುಮಾರ್ ಜಾತಕ ವಿಮರ್ಶಕರು 98451 83392, 9342183392 ಸಂಪರ್ಕಿಸಬಹುದು.

ಮೈಸೂರು ವಿವಿ ಪ್ರಸಾರಾಂಗದ ರಿಯಾಯ್ತಿ ಪುಸ್ತಕ ಮೇಳ ಜ.31ರವರೆಗೆ ವಿಸ್ತರಣೆ

ಮೈಸೂರು, ಡಿ.31(ಎಂಕೆ)– ಮೈಸೂರು ವಿಶ್ವವಿದ್ಯಾನಿಲಯ ಪ್ರಸಾರಂಗದ 'ಪುಸ್ತಕೋತ್ಸವ–2025' ಅಂಗವಾಗಿ ಹಮ್ಮಿಕೊಂಡಿರುವ 'ವಿಶೇಷ ರಿಯಾಯ್ತಿ ಪುಸ್ತಕ ಮಾರಾಟ ಮೇಳ'ವನ್ನು ಜ.31ರವರೆಗೆ ವಿಸ್ತರಣೆ ಮಾಡಲಾಗಿದೆ.

ಡಿ.8ರಿಂದ ಆರಂಭವಾದ ವಿಶೇಷ ರಿಯಾಯ್ತಿ ಪುಸ್ತಕ ಮೇಳಕ್ಕೆ ಸಾರ್ವಜನಿಕರು, ಪುಸ್ತಕ ಪ್ರಿಯರು, ವಿದ್ಯಾರ್ಥಿಗಳಿಂದ ದೊರೆತ ಅಭೂತಪೂರ್ವ ಸ್ಪಂದನೆ ಹಾಗೂ ಹೊಸ ವರ್ಷಾಚರಣೆ ಹಿನ್ನೆಲೆ 1 ತಿಂಗಳ ಕಾಲ ವಿಸ್ತರಿಸಲಾಗಿದೆ ಎಂದು ಪ್ರಸಾರಾಂಗ ನಿರ್ದೇಶಕ ಪ್ರೊ.ಎಂ.ನಂಜಯ್ಯ ಹೊಂಗನೂರು ತಿಳಿಸಿದ್ದಾರೆ. ಕೌಟಿಲ್ಯ ರಚಿತ ಮೂಲ ಅರ್ಥಶಾಸ್ತ್ರ ಕೃತಿ ಸೇರಿದಂತೆ ಮೌಲ್ಯಯುತ ಗ್ರಂಥಗಳು, ಹೆಸರಾಂತ ಸಾಹಿತಿಗಳ ಕೃತಿಗಳು ಓದುಗರನ್ನು ಸೆಳೆಯುತ್ತಿದ್ದು, ಕಳೆದೊಂದು ತಿಂಗಳ ಅವಧಿಯಲ್ಲಿ ರಿಯಾಯ್ತಿ ಮೇಳಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಹಾಗಾಗಿ ಓದುಗರನ್ನು ಮತ್ತಷ್ಟು ವಿವಿ ಆವರಣಕ್ಕೆ ಕರೆಸಿಕೊಳ್ಳುವ ಹಾಗೂ ಪುಸ್ತಕ ಓದುವ ಸಂಸ್ಕೃತಿಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಮೇಳವನ್ನು ವಿಸ್ತರಿಸಲಾಗಿದೆ.

ಉರಿಲಿಂಗ ಪೆದ್ದಿ ಮಠದ ಪೀಠಾಧ್ಯಕ್ಷರು ನಾನೇ; ಶಿವಲಿಂಗಸ್ವಾಮಿ ಎಂಬುವರ ಆರೋಪ ಸುಳ್ಳು

ಜ್ಞಾನಪ್ರಕಾಶ ಸ್ವಾಮೀಜಿ ಸ್ಪಷ್ಟನೆ

ಮೈಸೂರು, ಡಿ.31 (ಎಂಟಿವೈ)– ಕಲ್ಬುರ್ಗಿ ಜಿಲ್ಲೆಯ ಸೇಡಂ ತಾಲೂಕಿನ ಉರಿಲಿಂಗ ಪೆದ್ದೀಶ್ವರ ಸಂಸ್ಥಾನ ಮಠ ಹಾಗೂ ಮೈಸೂರಿನ ಗಾಂಧಿನಗರದಲ್ಲಿನ ಉರಿಲಿಂಗ ಪೆದ್ದಿ ಶಾಖಾ ಮಠಕ್ಕೆ ನಾನೇ ಪೀಠಾಧ್ಯಕ್ಷರಾಗಿದ್ದು, ಮಠಕ್ಕೆ ಸಂಬಂಧ ಪಡದೇ ಇರುವ ಶಿವಲಿಂಗಸ್ವಾಮಿ ಎಂಬುವವರು ಮಠ ಕುರಿತು ಇಲ್ಲದ ಆರೋಪ ಮಾಡುತ್ತಿದ್ದಾರೆ ಎಂದು ಉರಿಲಿಂಗ ಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಸ್ಪಷ್ಟಪಡಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚೆಗಷ್ಟೆ ತಾವು ಕೂಡ್ಲಾದಲ್ಲಿನ ಮಠದ ಪೀಠಾಧಿಕಾರಿ ಎಂದು ಹೇಳಿಕೊಂಡು ಶಿವಲಿಂಗಸ್ವಾಮಿ ಎಂಬುವವರು, ಉರಿಲಿಂಗ ಪೆದ್ದಿ ಮಠ ಹಾಗೂ ಪೀಠಾಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸುತ್ತಿರುವ ನನ್ನ ಮೇಲೆ ಸುಳ್ಳು ಆರೋಪ ಮಾಡಿದ್ದಾರೆ. ಮಠಕ್ಕೆ ಸಂಬಂಧ ಪಡದೇ ಇರುವ ಶಿವಲಿಂಗಸ್ವಾಮಿಯನ್ನು ಈ ಹಿಂದೆಯೇ ಮಠದ ಸದಸ್ಯ ಸ್ಥಾನದಿಂದ ತೆಗೆದು ಹಾಕಿರುವುದರಿಂದ ಇದೀಗ ಮಠದ ಮೇಲೆ ಸುಳ್ಳು ಆರೋಪ ಮಾಡುತ್ತಿದ್ದಾರೆ. ಅವರ ಆರೋಪದಲ್ಲಿ ಯಾವುದೇ ಹುರುಳಿಲ್ಲ ಎಂದರು.

ಕಳೆದ 30 ವರ್ಷಗಳಿಂದ ಶಿವಲಿಂಗ ಸ್ವಾಮಿ ಮಠದ ವಿರುದ್ಧ ಸುಳ್ಳು ಆರೋಪ ಮಾಡುತ್ತ ನ್ಯಾಯಾಲಯ ಹಾಗೂ ಪೊಲೀಸ್ ಠಾಣೆಗಳನ್ನು ಸುತ್ತುತ್ತಿದ್ದಾರೆ. ಇಂತಹ ದಾವೆಗಳಿಂದಾಗಿ ಸಂಸ್ಥಾನ ಮಠಕ್ಕೆ ಸುಮಾರು 10 ಕೋಟಿ ನಷ್ಟವಾಗಿದೆ. ಮಠದ 4ನೇ ಪೀಠಾಧ್ಯಕ್ಷರಾಗಿದ್ದ ಲಿಂಗೈಕ್ಯ ಡಾ. ನಂಜುಂಡಸ್ವಾಮಿ ಅವರು ಟ್ರಸ್ಟ್ ಹಾಗೂ ಭಕ್ತರ ಸಮ್ಮುಖದಲ್ಲಿ ತಮ್ಮನ್ನು 5ನೇ ಉತ್ತರಾಧಿಕಾರಿ ಎಂದು ಘೋಷಿಸಿ, ಉಯಿಲು ಬರೆಯಿಸಿ ಸಹಿ ಸಹ ಹಾಕಿದ್ದಾರೆ. ಇದಲ್ಲದೆ, ಕಾಲವಾಗುವುದಕ್ಕೂ ಮೊದಲು ಅವರು ತಮ್ಮ ರುಮಾಲನ್ನು ತಮ್ಮ ತಲೆಗೆ ತೊಡಿಸಿ ತಮ್ಮನ್ನು ಪೀಠಾಧ್ಯಕ್ಷರೆಂದು ಘೋಷಿಸಿದ್ದರು. ಇದು 2024ರ ಡಿ.8ರಂದು ವಿವಿಧ ಪತ್ರಿಕೆಗಳಲ್ಲಿ ಚಿತ್ರ ಸಮೇತ ಪ್ರಕಟವಾಗಿದೆ ಎಂದು ತಿಳಿಸಿದರು.



ಜ್ಞಾನಪ್ರಕಾಶ ಸ್ವಾಮೀಜಿ

ಮೈಸೂರು ಜಿಲ್ಲೆಯ ದುದ್ದಗೆರೆ ಗ್ರಾಮದ 26 ಎಕರೆ ಜಮೀನಿನಿಂದ 1941 ರಿಂದ ಇಲ್ಲಿಯವರೆಗೂ ಶ್ರೀಮಠಕ್ಕೆ ಒಂದು ಪೈಸೆ ಲಾಭ ಆಗಿಲ್ಲ. ಅಭಿವೃದ್ಧಿಗೆ ಬಳಸಿಕೊಳ್ಳಲೂ ಸಾಧ್ಯವಾಗಿಲ್ಲ. ಅಲ್ಲದೆ ಸದರಿ ಜಮೀನು ಶಿವಶಂಕರಯ್ಯ ಬಿನ್ ಮಹದೇವಮ್ಮ ಎಂಬುವರ ಹೆಸರಿನಲ್ಲಿ ಖಾತೆ ಇದೆ. ಮಠದ ಆಸ್ತಿ ದುರ್ಬಳಕೆ ಆಗದಿರಲೆಂಬ ಕಾರಣದಿಂದ ಮಠದ ಅಭಿವೃದ್ಧಿಗೆ ನೆರವಾಗಲೆಂದು ಹಾಗೂ ಮಠದ ವತಿಯಿಂದ ಮುಂದಿನ ದಿನಗಳಲ್ಲಿ ಆರಂಭಿಸುವ ಶಿಕ್ಷಣ ಸಂಸ್ಥೆಗೆ ಉಪಯುಕ್ತವಾಗಿರುವ ಪರ್ಯಾಯ ಭೂಮಿಯನ್ನು ಈಗಾಗಲೇ ನೀಡಿರುವುದರಿಂದಾಗಿ ಅವರಿಗೆ ಎನ್‌ಓಸಿ ನೀಡಲಾಗಿದೆ. ಇದರಲ್ಲಿ ಯಾವುದೇ ಅವ್ಯವಹಾರ ನಡೆದಿಲ್ಲ ಎಂದು ಸ್ಪಷ್ಟಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಸೋಮಯ್ಯ ಮಲೆಯೂರು, ವಿಷಕಂಠ, ಸಿದ್ದರಾಮ ಶಿವಯೋಗಿ ಸ್ವಾಮಿ, ಬಸವನಾಗಿದೇವ ಶರಣರು ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

01.1.2026 ಗುರುವಾರ, ಮಳೆ ನಕ್ಷತ್ರ: ಮೂಲ, 29.12.2025 ರಿಂದ 10.01.2026
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಶುಕ್ಲ ಪಕ್ಷ,
ತಿಥಿ: ತ್ರಯೋದಶಿ, ನಕ್ಷತ್ರ: ರೋಹಿಣಿ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

- **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜಾ, ಲಕ್ಷಾರ್ಚನಾ, ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಭಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ, ರಾಘವೇಂದ್ರನಗರ.
- **ನನ್ನವ್ವ ಸಾಂಸ್ಕೃತಿಕ ಕಲಾತಂಡ :** ಕನ್ನಡ ರಾಜ್ಯೋತ್ಸವ, ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ ಕುರಿತು ರಾಜ್ಯ ಮಟ್ಟದ ಕವಿಗೋಷ್ಠಿ, ಉದ್ಘಾಟನೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಧ್ಯಕ್ಷತೆ : ಕರ್ನಾಟಕ ಸುಗಮ ಸಂಗೀತ ಪರಿಷತ್ ಅಧ್ಯಕ್ಷ ಡಾ. ನಾಗರಾಜು ವಿ. ಭೈರಿ, ಪುಷ್ಪಾರ್ಚನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಕವಿಗೋಷ್ಠಿ ಅಧ್ಯಕ್ಷತೆ : ರಾಷ್ಟ್ರ ಪ್ರಶಸ್ತಿ ಪುರಸ್ಕೃತ ವಿಶ್ರಾಂತ ಶಿಕ್ಷಕ ಅಲ್ಲೆ ಡಾ. ನಾ. ಗಂಗಾಧರಪ್ಪ, ಉಪಸ್ಥಿತರು : ಶಿಕ್ಷಣ ಇಲಾಖೆ ನಿವೃತ್ತ ಸಹಾಯಕ ನಿರ್ದೇಶಕ ಶ್ರೀಕಂಠೇಶ್ ಪರಿಸರ ಪ್ರಿಯ, ಸ್ಥಳ: ನಮನ ಕಲಾಮಂಟಪ, ಬೆಳಗ್ಗೆ 11ಕ್ಕೆ.
- **ಕರ್ನಾಟಕ ಸೇನಾ ಪಡೆ :** ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ, ಉಪಸ್ಥಿತರು : ಪ್ರೊ. ಭಾಷ್ಯಂ ಸ್ವಾಮೀಜಿ, ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಹಿರಿಯ ಸಮಾಜ ಸೇವಕ ಡಾ. ರಘುರಾಂ ವಾಜಪೇಯಿ, ರಾಜ್ಯ ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಜಿ. ಗಂಗಾಧರ್, ಎಸ್. ಜಯಪ್ರಕಾಶ್, ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ. ಲಿಂಗರಾಜು, ಡಾ. ಎಂ.ಬಿ. ಮಂಜೇಗೌಡ, ಬಿ.ಹೆಚ್. ಗೋವಿಂದೇಗೌಡ, ಎಂ.ಎನ್. ದೊರೆಸ್ವಾಮಿ, ಲಕ್ಷ್ಮೀನಾರಾಯಣ ಶೆಣೈ, ಜಯಣ್ಣ, ಡಾ. ಶಾಂತರಾಜೇ ಅರಸ್, ಸ್ಥಳ: ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದ ಆವರಣ, ವಿಜಯನಗರ 1ನೇ ಹಂತ, ಬೆಳಗ್ಗೆ 11.30ಕ್ಕೆ.
- **ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ :** ನೂತನ ದಿನದರ್ಶಿಕೆ ಬಿಡುಗಡೆ ಹಾಗೂ ಡಾ. ಶಾಮನೂರು ಶಿವಶಂಕರಪ್ಪ ಅವರಿಗೆ ಭಾವಪೂರ್ಣ ನುಡಿನಮನ, ಸಾನ್ನಿಧ್ಯ : ಜ್ಯೋತಿಷಿ ವಿಷ್ಣು ಸಾಲಿಗ್ರಾಮ ಸ್ವಾಮೀಜಿ, ಪುಷ್ಪಾರ್ಚನೆ : ಡಾ. ಕೆ. ರಘುರಾಂ ವಾಜಪೇಯಿ, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಧ್ಯಕ್ಷತೆ : ಕರ್ನಾಟಕ ರಾಜ್ಯ ಶಿವಾರ್ಚಕ ಸಂಘದ ಗೌರವಾಧ್ಯಕ್ಷ ಅಂಬಳೆ ಶಿವಣ್ಣ, ಪ್ರಧಾನ ನುಡಿ : ಸಾಹಿತಿ ಡಾ. ಕೆ. ಲೀಲಾಪ್ರಕಾಶ್, ಉಪಸ್ಥಿತರು : ಶ್ರೀಮತಿ ತನುಜ ಮಹೇಶ್, ರಾಜು ಕಾರ್ಯ, ಸುಪ್ರೀತ್, ಸ್ಥಳ: ಜಿಲ್ಲಾ ಪತ್ರಕರ್ತರ ಭವನ, ಮಧ್ಯಾಹ್ನ 12.15ಕ್ಕೆ.
- **ಶ್ರೀ ನಟರಾಜ ಹಿರಿಯ ಪ್ರಾಥಮಿಕ ಶಾಲೆ :** ವಾರ್ಷಿಕೋತ್ಸವ, ಸಾನ್ನಿಧ್ಯ : ಶ್ರೀ ಚಿದಾನಂದ ಸ್ವಾಮೀಜಿ, ಮುಖ್ಯ ಅತಿಥಿಗಳು : ಪತ್ರಕರ್ತೆ ಶ್ರೀಮತಿ ರಶ್ಮಿ ಕೋಟಿ, ಸಮಾರೋಪ ಭಾಷಣ : ಬಿಇಓ ಎಸ್.ಸಿ. ಶಿವಮೂರ್ತಿ, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಸ್ಥಳ: ಶ್ರೀ ನಟರಾಜ ಸಭಾಂಗಣ, ಮಧ್ಯಾಹ್ನ 3.30ಕ್ಕೆ.
- **ಸಾಧನ ಮಂದಿರ, ಮೈಸೂರು :** ವಿಶೇಷ ತರಬೇತಿ ಶಿಬಿರ ಹಾಗೂ ಸರಸ್ವತಿ ಪೂಜೆ, ಸಾನ್ನಿಧ್ಯ: ಪೂಜ್ಯ ಸ್ವಾಮಿ ಹಂಸಾನಂದ, ಸಂಜೆ 4 ರಿಂದ ಶ್ರೀ ವೆಂಕಟೇಶ್ವರ ದೇವಸ್ಥಾನ, ಸಿದ್ಧಾರ್ಥನಗರ; ಸಂಜೆ 5.15 ರಿಂದ ಬಲಮುರಿ ವಿನಾಯಕ ದೇವಸ್ಥಾನ, ಸಿದ್ಧಾರ್ಥ ಬಡಾವಣೆ, ಸಂಜೆ 6.30 ರಿಂದ ಗೀತಾ ಶಿಶು ಶಿಕ್ಷಣ ಸಂಘ, ಸಿದ್ದಾರ್ಥ ಬಡಾವಣೆ.
- **ಜನ ಚೈತನ್ಯ ಫೌಂಡೇಷನ್ :** ನೂತನ ವರ್ಷದ ದಿನದರ್ಶಿಕೆ ಬಿಡುಗಡೆ ಸಮಾರಂಭ, ಉಪಸ್ಥಿತರು : ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಡಾ. ರಘುರಾಂ ವಾಜಪೇಯಿ, ಡಾ. ನಾಗರಾಜ್ ವಿ. ಭೈರಿ, ಪಿ. ಗೋಪಾಲಕೃಷ್ಣ, ಬಿ.ಸಿ. ಸುಂದರೇಶ್, ಅಧ್ಯಕ್ಷತೆ : ಫೌಂಡೇಷನ್ ಅಧ್ಯಕ್ಷ ಆರ್. ಲಕ್ಷ್ಮಣ್, ಸ್ಥಳ: ಜನ ಚೈತನ್ಯ ಫೌಂಡೇಷನ್ ಕಚೇರಿ ಆವರಣ, ವಿದ್ಯಾರಣ್ಯಪುರಂ, ಸಂಜೆ 4.30ಕ್ಕೆ.
- **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ಶ್ರೀ ಮಹಾಜನ ಸಭಾ ಟ್ರಸ್ಟ್ :** ತಿರುಪ್ಪಾವೈ ಪಾರಾಯಣ, ಡಾ. ಎನ್.ಕೆ. ರಾಮಶೇಷನ್ ಅವರಿಂದ ಶ್ರೀ ಗೋದಾದೇವಿ ವಿರಚಿತ ತಿರುಪ್ಪಾವೈ ಪ್ರವಚನ, ಸ್ಥಳ: ಶ್ರೀ ಮಹಾಜನ ಸಭಾ ಟ್ರಸ್ಟ್ ಆವರಣ, ಶ್ರೀ ರಾಮಮಂದಿರ, ಕಾಂತರಾಜ ರಸ್ತೆ, ಕೃಷ್ಣಮೂರ್ತಿಪುರಂ, ಸಂಜೆ 6.30 ರಿಂದ.

ಸುತ್ತೂರಿನಲ್ಲಿಂದು, ನಂಜನಗೂಡು ತಾಲೂಕು

- **ಜಗದ್ಗುರು ಶ್ರೀ ವೀರಸಿಂಹಾಸನ ಮಹಾ ಸಂಸ್ಥಾನ ಮಠ:** ಧನುರ್ಮಾಸದ ವಿಶೇಷ ಪೂಜೆ, ಸ್ಥಳ: ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ, ಶ್ರೀ ಮಹೇಶ್ವರ ಸನ್ನಿಧಿ, ಶ್ರೀ ವೀರಭದ್ರೇಶ್ವರ, ಶ್ರೀ ಸೋಮೇಶ್ವರ, ಶ್ರೀ ನಾರಾಯಣಸ್ವಾಮಿ ದೇವಸ್ಥಾನ, ಸುತ್ತೂರು ಶ್ರೀಕ್ಷೇತ್ರ, ಬೆಳಗ್ಗೆಯಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಹಸಿರು ಹೊನ್ನು, 8.30 ಕನ್ನಡ ಚಿತ್ರಗೀತೆಗಳು, 9.00 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಮೈಸೂರು ಎಂ. ನಾಗರಾಜ್ ರವರ ನಿರ್ದೇಶನದಲ್ಲಿ ನಿಲಯದ ಕಲಾವಿದರಿಂದ ವಾದ್ಯವೃಂದ, 11.00 ಮಿಶ್ರಮಾಧುರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು–ಪ್ರೇಮಲತಾ ದಿವಾಕರ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ಸಂಧ್ಯರಾಗ, 6.50 ಕೃಷಿರಂಗ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ–ಪರೀಕ್ಷೆಗೆ ಸಿದ್ಧರಾಗೋಣ ಬನ್ನಿ– ದ್ವಿತೀಯ ಪಿ.ಯು.ಸಿ. ಪರೀಕ್ಷಾ ಸಿದ್ಧತಾ ಬಾನುಲಿ ಸರಣಿ ಕಾರ್ಯಕ್ರಮ, ವಿಷಯ–ಪ್ರಥಮ ಭಾಷೆ ಕನ್ನಡ, ಭಾಗವಹಿಸುತ್ತಾರೆ ಮಂಡ್ಯಜಿಲ್ಲೆ, ಪಾಂಡವಪುರ ತಾಲೂಕು, ಚಿನಕುರಳಿಯ ಎಸ್.ಟಿ.ಜಿ. ಪ್ರಥಮ ದರ್ಜೆ ಕಾಲೇಜಿನ ಕನ್ನಡ ಉಪನ್ಯಾಸಕರಾದ ವಿ. ಶ್ರೀಧರ್, ಪ್ರಸ್ತುತಿ–ದಿಗ್ವಿಜಯ್ .ಬಿ., 9.30 ಕರ್ನಾಟಕ ಶಾಸ್ತ್ರೀಯ ಸಂಗೀತ–ಡೆಲ್ಲಿ ವಿ. ಮುತ್ತುಕುಮಾರ್ – ಹಾಡುಗಾರಿಕೆ, 10.00 ಆಕಾಶವಾಣಿ ಸಂಗೀತ್ ಸಮ್ಮೇಳನ–2025, ಪ್ರದೀಪ್ ಶೇಖರ್ ಮೊಹಪಾತ್ರ – ಕೊಳಲುವಾದನ

CHANGE OF NAME

I, SATEESH Kollur, s/o Shiva sharanappa Kollur, #2366, 10th Main, 5th Cross, Vijaya nagar 2nd Stage, Mysore have Changed My Name from Sateesh Kollur to Sateesh for all future Purpose.

Sd/- Sateesh

ಕರ್ನಾಟಕ ಸರ್ಕಾರ

ಕೃಷಿ ಇಲಾಖೆ

ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ತಿ.ನರಸೀಪುರ ತಾಲ್ಲೂಕು

ದೂರವಾಣಿ ಸಂಖ್ಯೆ: 08227-261435 ಇಮೇಲ್ ವಿಳಾಸ: adatnpur@rediffmail.com

ಸಂಖ್ಯೆ:ಸ.ಕೃ.ನಿ/ತಿ.ನಪು/ಲೆಕ್ಕ-2/ವಾ.ಬಾ/ ಮ.ಟೆಂ.ಪ್ರ/2025-26 ದಿನಾಂಕ: 30-12-2025

ಮರು ಟೆಂಡರ್ ಪ್ರಕಟಣೆ

ವಿಷಯ: ಹೊರಗುತ್ತಿಗೆ ಆಧಾರದ ಮೇಲೆ ಈ ಕಛೇರಿಗೆ ವಾಹನ ಸೇವೆ ಒದಗಿಸಲು ದರಪಟ್ಟಿ ಕರೆಯುವ ಬಗ್ಗೆ.

ಉಲ್ಲೇಖ: 1) ಮಾನ್ಯ ಕೃಷಿ ನಿರ್ದೇಶಕರು ಕೃಷಿ ಆಯುಕ್ತರ ಕಾರ್ಯಾಲಯ ಬೆಂಗಳೂರು ರವರ ಪತ್ರ ಸಂಖ್ಯೆ:ಸಾಮಾನ್ಯ/ವಾ-2/ಬಾಡಿಗೆ ವಾಹನ/ಮುಂದುವರಿಕೆ/65/13-14 /1034263 ದಿನಾಂಕ: 21-04-2025.

2) ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: ಸ.ಕೃ.ನಿ/ತಿ.ನಪು/ಲೆಕ್ಕ-2/ವಾ.ಬಾ/ಟೆಂ.ಪ್ರ/2025-26. ದಿ: 5-12-2025.

2025-2026 ನೇ ಸಾಲಿಗೆ ಸಹಾಯಕ ಕೃಷಿ ನಿರ್ದೇಶಕರು ತಿ-ನರಸೀಪುರ ರವರಿಗೆ ತಾಲ್ಲೂಕಿನಲ್ಲಿ ಇಲಾಖಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಸಂಬಂಧ ಪ್ರವಾಸ ಕೈಗೊಳ್ಳಲು ಹೊರಗುತ್ತಿಗೆ ಆಧಾರದ ಮೇಲೆ ಒಂದು ವಾಹನದ (ಕಾರು) ಅವಶ್ಯಕತೆ ಇದ್ದು ಉಲ್ಲೇಖ (2) ರಲ್ಲಿ ಅಧಿಕೃತ (ನೋಂದಾಯಿತ) ಟ್ರಾವೆಲ್ ಏಜೆನ್ಸಿಗಳಿಂದ ವಾಹನ ಸರಬರಾಜು ಮಾಡಲು ಟೆಂಡರ್ ಕರೆದಿದ್ದು, ತಾಂತ್ರಿಕ ದೋಷದಿಂದ ಟೆಂಡರ್ ರದ್ದಾದ ಕಾರಣ ಮರು ಟೆಂಡರ್ ಕರೆಯಲಾಗಿದ್ದು, ಟೆಂಡರ್ ನಲ್ಲಿ ಭಾಗವಹಿಸಬಯಸುವ ಟೆಂಡರ್‌ದಾರರು (ಟ್ರಾವೆಲ್ ಏಜೆನ್ಸಿಗಳು) ಮೊಹರು ಮಾಡಿದ ಲಕೋಟೆಯಲ್ಲಿ ದರಪಟ್ಟಿಯನ್ನು ನಿಬಂಧನೆಗಳಿಗೆ ಒಳಪಟ್ಟು ಆಹ್ವಾನಿಸಲಾಗಿದೆ.

1.	ಟೆಂಡರ್ ಅರ್ಜಿ ಬೆಲೆ	ರೂ. 200/-
2.	ಟೆಂಡರ್ ಅರ್ಜಿ ವಿತರಿಸುವ ದಿನಾಂಕ	ದಿನಾಂಕ: 31-12-2025 ರಿಂದ ದಿನಾಂಕ: 12-01-2026 ರವರೆಗೆ ಅಪರಾಹ್ನ 3.00 ಗಂಟೆಯೊಳಗೆ
3.	ಭರ್ತಿ ಮಾಡಿದ ಟೆಂಡರ್ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ	16-01-2026
4.	ಟೆಂಡರ್ ತೆರೆಯುವ ದಿನಾಂಕ:	17-01-2026
5.	ಟೆಂಡರ್ ತೆರೆಯುವ ಸ್ಥಳ: ಸಮಯ	ಸಹಾಯಕ ಕೃಷಿ ನಿರ್ದೇಶಕರ ಕಛೇರಿ ತಿ.ನರಸೀಪುರ
6.	ಇ.ಎಂ.ಡಿ. ಮೊಬಲಗು (ಡಿ.ಡಿ.) (ಒಂದು ವಾಹನಕ್ಕೆ)	ರೂ. 8,500/-
7.	ಡಿ.ಡಿ. ತೆಗೆಯಬೇಕಾದ ವಿಳಾಸ	ಸಹಯಾಕ ಕೃಷಿ ನಿರ್ದೇಶಕರ ಕಛೇರಿ, ತಿ. ನರಸೀಪುರ

ಸಹಾಯ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ತಿ-ನರಸೀಪುರ ಇವರ ಹೆಸರಿನಲ್ಲಿ ರೂ. 200/- ನೀಡಿ ಟೆಂಡರ್ ಅರ್ಜಿಯನ್ನು ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ತಿ-ನರಸೀಪುರ ಇವರಿಂದ ಪಡೆಯಬಹುದು, ಟೆಂಡರಿನ ಷರತ್ತುಗಳ ಇನ್ನಿತರೆ ವಿವರಗಳನ್ನು ಈ ಕಛೇರಿ ವತಿಯಿಂದ ಪಡೆಯಬಹುದಾಗಿರುತ್ತದೆ.

ಸಹಿ/- ಸಹಾಯಕ ಕೃಷಿ ನಿರ್ದೇಶಕರು, ತಿ ನರಸೀಪುರ

PUBLIC NOTICE

Notice is hereby issued to the General Public that Sri. Raghavendra B S/O. Sri. Basavaraju residing at # 53, 40 feet Road, 3rd Cross, Raghava Nagar, Mysore Road, Near Kashi Eshwar Temple, Bengaluru - 560 026 has agreed to Sell the Schedule Property to my client/s. Any person/s asserting any right, title, interest or claim, pending litigation or demand of any nature in or upon the schedule property or any part thereof, the same may be brought to the notice of the undersigned along with documentary evidence at # L-50/2A, 1st Floor, Ashoka Road, Mysuru -570 001 within FIFTEEN (15) days from the date of this Public Notice, failing which such claim/s shall be considered to have been waived and/or given up and my client/s shall be entitled to complete the sale transaction that there are no claims of whatsoever nature with respect of the schedule property.

SCHEDULE

ALL THAT PIECE AND PARCEL OF RESIDENTIAL PROPERTY BEARING NO. 263, E-KHATA NO. 63-4-603-449, MEASURING EAST TO WEST 38 FEET AND NORTH TO SOUTH 40 FEET, COMPRISING OF BUILDING ON GROUND FLOOR, SITUATED AT SHEELA MARGA, 13TH CROSS, SIDDARTHA NAGAR, NAZARBAD MOHALLA, MYSURU & BOUNDED ON :-EAST BY : ROAD, WEST BY:PROPERTY BEARING NO. 262, NORTH BY PROPERTY BEARING NO. 264, SOUTH BY : ROAD

Sd/- M. SANJAY JAIN
B.B.M., LL.B., CCL, CMJFS. Advocate,
L, 50/2A, 1st Floor, Ashoka Road, Mysore-570001
Email:msj186@yahooo.co.in
Mob: 93414-64636
Place: Mysuru, Date: 31/12/2025

9ನೇ ವರ್ಷದ ಪುಣ್ಯಸ್ಮರಣೆ



ನಿಧನ: 01.01.2017

ಶ್ರೀಮತಿ ಜಯಮ್ಮ

ಎಂ. ನಿರ್ವಾಣಪ್ಪ ಅವರ ಧರ್ಮಪತ್ನಿ
ನಂ. 137, 2ನೇ ಕ್ರಾಸ್,
1ನೇ ಹಂತ, ನಂದಿನಿ ಬಡಾವಣೆ, ಮೈಸೂರು

ಸದಾ ನಿಮ್ಮ ನೆನಪಿನೊಂದಿಗೆ ಮಕ್ಕಳಾದ ಹೆಚ್.ಎನ್.ಪರಮೇಶ್ವರಪ್ಪ ಇಂ॥ ಹೆಚ್.ಎನ್.ಮಂಜುನಾಥ, ಹೆಚ್.ಎನ್. ಸರೋಜ, ಹೆಚ್.ಎನ್. ಪುಷ್ಪಲತಾ ಹಾಗೂಕುಟುಂಬವರ್ಗ

11ನೇ ವರ್ಷದ ಸವಿನೆನಪು



ಎಸ್. ಸಿದ್ದರಾಜು

(ಮಣಿ) ಸಜ್ಜೆಹುಂಡಿ

ನೀವು ನಮ್ಮನ್ನಗಲಿ ಇಂದಿಗೆ 11 ವರ್ಷ ಕಳೆದರೂ ನಿಮ್ಮ ನೆನಪಿನಲ್ಲಿರುವ. ತಂದೆ: ಸುಬ್ಬಣ್ಣ, ತಾಯಿ: ಜಯಲಕ್ಷ್ಮಿ, ಪತ್ನಿ: ಶಾರದ, ಮಗಳು ರಕ್ಷ.ಎಸ್ ಹಾಗೂ ಕುಟುಂಬವರ್ಗದವರು ಎಂ ಬ್ಲಾಕ್ ಸ್ನೇಹಿತರು ಸಜ್ಜೆಹುಂಡಿ ಗ್ರಾಮಸ್ಥರು

IN THE COURT OF THE HON'BLE FIRST ADDITIONAL SENIOR CIVIL JUDGE AND CJM AT MYSURU

O.S. No. 349 / 2024

Plaintiff : Bank of India, Jayapura Branch, H.D. Kote Road, Mysuru. **Represented by its Branch Manager, Smt. Rajeswari .C,** Aged about 37 years.

\- V/s. -

Defendant : P. Shreyas, Aged about 35 years, **Son of Sri. Prabhu .A.S. Proprietor of M/s. S.P. Engineering Works,** No. C-427, Hebbal Industrial Area, Mysuru.

Also available at : House No. 141/N, R.S. Main Road, 3rd Cross, Behind Sujatha Tent, Kumbara Koppal, Metagalli, Mysuru - 570016.

PAPER PUBLICATION

Take Notice that the Plaintiff has preferred the present suit as against the Defendant seeking for relief of recovery of money. This notice is caused to intimate the Defendant, that the above suit is posted for appearance of the Defendant before this **Hon'ble Court on 30.01.2026 at 11.00 a.m.** In the event of failure of the Defendant to appear on the said date, the matter will be proceeded ex-parte.

Give under my hand the seal of the Court This **11th day of December 2025.**

By Order of the Court
Sd/- (Shreistedar)
In the Court of the Hon'ble First Additional Senior Civil Judge and CJM at Mysuru.

ಪತ್ರಿಕಾ ಪ್ರಕಟಣೆ

ಮೈಸೂರು ಸಿಟಿ, ಹೆಬ್ಬಾಳು ಬಡಾವಣೆ 2ನೇ ಹಂತದಲ್ಲಿರುವ 12x9 ಮೀಟರ್ ಅಳತೆಯ ನಿವೇಶನ ಸಂಖ್ಯೆ: 1825 ಯ ಸ್ವತ್ತು ಮೈಸೂರು ಸಿಟಿ, ಮೇಟಗಳ್ಳಿ, ಹಳೇಪೊಲೀಸ್ ಸ್ಟೇಷನ್ ರಸ್ತೆ, ಮನೆ ನಂ. 161 ರಲ್ಲಿ ವಾಸವಾಗಿರುವ ಸುರೇಶ್ ಬಿನ್ ಈರಯ್ಯ ರವರಿಗೆ ಸೇರಿದ ಸ್ವಯಾರ್ಜಿತವಾದ ಸ್ವತ್ತಾಗಿದ್ದು, ಸದರಿ ಸ್ವತ್ತನ್ನು ನನ್ನ ಕಕ್ಷಿದಾರರಾದ ಪ್ರಸಾದ್ ಎನ್ ಬಿನ್ ನಂಜುಂಡೇಗೌಡ (ಮೊ. ಸಂಖ್ಯೆ: 7483206967 / 9731813333) ರವರು ಶುದ್ಧಕ್ರಯಕ್ಕೆ ಪಡೆಯಲು ಇಚ್ಛಿಸಿ, ದಿನಾಂಕ: 05.12.2025 ರಂದು ಕ್ರಯದ ಕರಾರನ್ನು ಮಾಡಿಕೊಂಡಿರುತ್ತಾರೆ.

ಸದರಿ ಸ್ವತ್ತಿನ ಶುದ್ಧಕ್ರಯಪತ್ರವನ್ನು ದಿನಾಂಕ: 16.01.2026 ರಂದು ನೋಂದಾವಣಿ ಮಾಡಿಕೊಳ್ಳಲು ತಯಾರಿದ್ದು, ಸದರಿ ಸ್ವತ್ತಿನ ಬಗ್ಗೆ ಯಾರಿಗಾದರೂ ಯಾವುದೇ ರೀತಿ ತಂಟೆ ತಕರಾರು, ಹಕ್ಕು ಭಾದ್ಯತೆ, ಕ್ಲೇಮು, ವಗೈರೆಗಳು ಇದ್ದಲ್ಲಿ ಈ ದಿನದಿಂದ 7 ದಿನಗಳ ಅವಧಿಯ ಒಳಗಾಗಿ ನನಗೆ ಕರೆ ಮಾಡಿ ತಿಳಿಸಬೇಕಾಗಿ ಸೂಚನೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ಹೆಬ್ಬಾಳು ಬಡಾವಣೆ 2ನೇ ಹಂತದಲ್ಲಿರುವ 12X9 ಮೀಟರ್ ಅಳತೆಯ ನಿವೇಶನ ಸಂಖ್ಯೆ: 1825 ಸ್ವತ್ತಿನ ಸಂಖ್ಯೆ: 34-10-925-931, ಮೈಸೂರು ಸಿಟಿ ಕಾರ್ಪೋರೇಷನ್ ದಾಖಲೆಗಳ ಪ್ರಕಾರ ಸ್ವತ್ತಿನ ಸಂಖ್ಯೆ: 1825 ಅಳತೆ ಪೂ.ಪ. 12.00 ಮೀಟರ್, ಉ.ದ. 9.00 ಒಟ್ಟು 108.00 ಚದರ ಮೀಟರ್ ಅಳತೆಯುಳ್ಳ ಖಾಲಿ ನಿವೇಶನದ ಪೂರ್ತಾ ಸ್ವತ್ತು. ಇದಕ್ಕೆ ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ,
ಪಶ್ಚಿಮಕ್ಕೆ: ನಿವೇಶನ ಸಂಖ್ಯೆ: 1822,
ಉತ್ತರಕ್ಕೆ: ನಿವೇಸನ ಸಂಖ್ಯೆ: 1826,
ದಕ್ಷಿಣಕ್ಕೆ: ನಿವೇಶನ ಸಂಖ್ಯೆ: ಐ-214,

ಸಹಿ/- ಎಸ್.ಎನ್. ಹೇಮಲತ ಎಲ್‌ಎಲ್‌ಎಂ.
ವಕೀಲರು & ನೋಟರಿ
ಅಭಿಷೇಕ್ ಸರ್ಕಲ್, ಮೈಸೂರು- 570017
ಮೊ.ನಂ. 8951506020

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷೀದಾರರು ಈ ಕೆಳಗೆ ವಿವರಿಸಲಾದ ಷೆಡ್ಯೂಲ್ ಸ್ವತ್ತನ್ನು ಅವುಗಳ ಮಾಲೀಕರಿಂದ ಅಂದರೆ, 1) ದಿವಂಗತ ಪರ್ವೀನ್ ತಾಜ್ ಅವರ ಪತಿ **ಶ್ರೀ ಸಯ್ಯದ್ ಇಕ್ಬಾಲ್ ಮತ್ತು ಇತರರು; 2) ದಿವಂಗತ ಸಬೂಲಾಲ್ ಎ. ಅವರ ಪತ್ನಿ ಶ್ರೀಮತಿ. ನಜ್ಮುನ್ನಿಸಾ** ಮತ್ತು ಇತರರಿಂದ ಖರೀದಿಸಲು ಒಪ್ಪಿಕೊಂಡಿರುತ್ತಾರೆ. ಷೆಡ್ಯೂಲ್ ಸ್ವತ್ತಿಗೆ O.S. ನಂ. 282/2013 ರ ತೀರ್ಪಿನನ್ವಯ ನೀಡಲಾದ [Final Decree Proceedings] FDP ನಂ. 06/2016 ಮತ್ತು FDP ನಂ. 07/2018 ರ ಆದೇಶವನ್ನು **ಶ್ರೀ ಸಯ್ಯದ್ ಇಕ್ಬಾಲ್ ಶ್ರೀಮತಿ ನಜ್ಮುನ್ನಿಸಾ ರವರು ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು,** ಇವರಲ್ಲಿ **ದಾವೆ ಸಂಖ್ಯೆ. RFA 1757/2025 (ಪಿಎಆರ್)** ಸಲ್ಲಿಸಿದ್ದು, ಘನ ನ್ಯಾಯಾಲಯವು ಸದರಿ **RFA 1757/2025** ನ್ನು ಪುರಸ್ಕರಿಸಿದೆ. ಪ್ರಸ್ತುತ ವಿಚಾರಣಾ ಹಂತದಲ್ಲಿದೆ. ಆದುದರಿಂದ ಷೆಡ್ಯೂಲ್ ಸ್ವತ್ತಿನ ಮಲೀಕರು ಈ ಮೂಲಕ ಸ್ಪಷ್ಟಪಡಿಸುವುದೇನೆಂದರೆ, ಖಾಸಗಿ ವ್ಯಕ್ತಿಗಳು ಷೆಡ್ಯೂಲ್ ಸ್ವತ್ತಿನ ಅಸಲಿ ಮಾಲೀಕತ್ವವನ್ನು ಋಣಭಾರ ಪ್ರಮಾಣ ಪತ್ರ ಮತ್ತು ಆರ್.ಟಿ.ಸಿ. [ಪಹಣಿ] ದಾಖಲೆಗಳಿಂದ ಗುರುತಿಸಲಾಗದೇ, ಕೇವಲ FDP ಆದೇಶವನ್ನು ಪರಿಗಣಿಸಿ, ಯಾವುದೇ ಕರಾರು, ಒಪ್ಪಂದ, ವ್ಯವಹಾರಗಳನ್ನು ಈಗಾಗಲೇ ಕಾರ್ಯಗತವಾಗಿದ್ದಲ್ಲಿ ಅಥವಾ ಅಂತಹ ಅಪೇಕ್ಷೆಗಳಿದ್ದಲ್ಲಿ, ಅಂತಹ ವ್ಯವಹಾರ ಅಥವಾ ಅದರಿಂದಾಗುವ ಸಮಸ್ಯೆಗಳಿಗೆ/ ಕಷ್ಟ-ನಷ್ಟ, ವೆಚ್ಚ, ಹಾನಿಗಳಿಗೆ ತಾವೇ ಏಕೈಕ ಹೊಣೆಗಾರ / ಸಂಪೂರ್ಣ ಜವಾಬ್ದಾರರಾಗಿರುತ್ತೀರಿ. ಪ್ರೌಢಿಮೆಯಿಲ್ಲದ ನಿಮ್ಮ ವ್ಯವಹಾರಗಳಿಂದ ಉಂಟಾಗುವ ಯಾವುದೇ ನಷ್ಟ, ಹಾನಿ, ದಾವೆ, ವಿವಾದ, ನ್ಯಾಯಾಂಗ ವ್ಯಾಜ್ಯ ಅಥವಾ ಪರಿಣಾಮಗಳಿಗೆ ಮಾಲೀಕರಾಗಲೀ ಅಥವಾ ಪ್ರಸ್ತಾವಿತ ಖರೀದಿದಾರರಾಗಲೀ ಯಾವುದೇ ರೀತಿಯಲ್ಲಿ ಹೊಣೆಗಾರರಾಗಿರುವುದಿಲ್ಲ ಎಂದು ಈ ಮೂಲಕ ತಿಳಿಸಲಾಗುತ್ತದೆ. ಮುಂದುವರೆದು, ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಬ್ಯಾಂಕ್‌ಗಳು, ಹಣಕಾಸು ಸಂಸ್ಥೆಗಳು, ಖಾಸಗಿ ಹಣಕಾಸುದಾರರು ಹಾಗೂ ಎಲ್ಲಾ ಶಾಸನಾತ್ಮಕ ಪ್ರಾಧಿಕಾರಗಳನ್ನು ಒಳಗೊಂಡಂತೆ ಯಾವುದೇ ವ್ಯಕ್ತಿಗಳು ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ-ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ **ದಿನದಿಂದ 07 (ಏಳು) ದಿನಗಳ ಒಳಗಾಗಿ** ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಬಂದು ಸಲ್ಲಿಸಬಹುದಾಗಿದೆ. ತಪ್ಪಿದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ-ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ವರುಣ ಹೋಬಳಿ, ವಾಜಮಂಗಲ ಗ್ರಾಮದಲ್ಲಿರುವ ಸರ್ವೆ ನಂ. **76/4** ರ ಖುಷ್ಕಿ ಜಮೀನು ಮತ್ತು ಸರ್ವೆ ನಂ. 76/4 ರಲ್ಲಿ ವಸತಿ ಉದ್ದೇಶಕ್ಕಾಗಿ ಅನ್ಯಕ್ರಾಂತವಾದ [ಆದೇಶ ನಂ. ಎ.ಎಲ್.ಎನ್.(2) ಸಿ.ಆರ್. 25/2008-09] ಜಮೀನುಗಳ ಒಟ್ಟು ವಿಸ್ತೀರ್ಣ 05 ಎಕರೆ 23 ಗುಂಟೆಯ ಚಕ್ಕುಬಂದಿ ಮತ್ತು ವಿಸ್ತೀರ್ಣದ ವಿವರಗಳು ಕೆಳಕಂಡಂತಿವೆ:

ಸರ್ವೆ	ವಿಸ್ತೀರ್ಣ		ಮಾಲೀಕರ	ಚಕ್ಕುಬಂದಿ			
ನಂ.	ಎ	ಗು	ಹೆಸರು	ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
76/4	02	33	ಸೈಯದ್ ಇಕ್ಬಾಲ್	ಸ.ನಂ. 77	ಸ.ನಂ. 76/7	ಸ.ನಂ. 76/3, 76/5 & 79	ರಸ್ತೆ ಮಾರ್ಜಿನ್ ಬನ್ನೂರು ರಸ್ತೆ
76/7	02	30	ನಿಜಾಮ್ಮುನೀಸ	ಸ.ನಂ. 76/4	ಸ.ನಂ. 75	ಸ.ನಂ. 76/1, 76/2, 76/3, 76/5 & 76/6	ರಸ್ತೆ ಮಾರ್ಜಿನ್ ಬನ್ನೂರು ರಸ್ತೆ
				Alienation Order No. ALN (2) CR 25/2008-09 dt. 19-01-2009			
ಒಟ್ಟು	05	23					

ಸಹಿ/- ಶ್ರೀಲತಾ ದೀಕ್ಷಿತ್, ವಕೀಲರು, ಎಸ್‌ಎಲ್‌ಡಿ ಲಾ ಫರ್ಮ್
ನಂ. 1416, ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು.
ಮೊ: 9844640641. email: sldlawfirm2021@gmail.com

ನಕ್ಕರೆ ಅದೇ ಸ್ವರ್ಗ

ತಿಮ್ಮ ಕಳ್ಳತನ ಮಾಡಲು ಮನೆಯೊಂದಕ್ಕೆ ನುಗ್ಗಿದ. ಮನೆಯವರಿಗೆ ಎಚ್ಚರವಾಗಿ ಯಾರು? ಎಂದರು. ತಿಮ್ಮ ಬೆಕ್ಕಿನಂತೆ 'ಮಿಯಾಂವ್' ಎಂದು ಕೂಗಿದ. ಯಜಮಾನ ಮತ್ತೆ 'ಯಾರು?' ಎಂದು ಕೇಳಿದ. ಅದಕ್ಕೆ ತಿಮ್ಮ ಹೇಳಿದ : 'ಸೌಂಡ್ ಕೇಳಿದ್ರೆ ಗೊತ್ತಾಗಲ್ವ? ನಾನು ಬೆಕ್ಕು' ಅಂದ.

ಮೈಸೂರು ಮಿತ್ರ

ಗುರುವಾರ ಜನವರಿ 1, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಕೊಟ್ಟು ಕೆಟ್ಟವರಿಲ್ಲ, ತಿಂದು ಬದುಕಿದವರಿಲ್ಲ,
ಕೊಟ್ಟು ಕದಿಯಲು ಬೇಡ, ಕೊಟ್ಟಾಡಿಕೊಳ್ಳಬೇಡ. – ಸರ್ವಜ್ಞ

ವೇದ ಸುಳ್ಳಾದರೂ / ಗಾದೆ ಸುಳ್ಳಾಗದು { ಬಿಡುಕು ಮಾತಿಗೆ / ಮಾಡಿಕೊಳ್ಳದಿರು ಕೆಡುಕು.

ನಿಮ್ಮ ಪತ್ರಗಳು

ಹೊಸ ವರ್ಷದ ಸಂಕಲ್ಪ

ಮಾನ್ಯರೇ,

ಹೊಸ ವರ್ಷದ ಆಗಮನವೆಂದರೆ ಬಣ್ಣ ಬಣ್ಣದ ದೀಪಗಳ ಅಲಂಕಾರ, ಸಿಹಿ ಹಂಚಿಕೆ ಅಥವಾ ಮಧ್ಯರಾತ್ರಿಯ ಸಂಭ್ರಮಾಚರಣೆಯಷ್ಟೇ ಅಲ್ಲ. ಅದು ಕಾಲಚಕ್ರದ ಒಂದು ತಿರುವಿನಲ್ಲಿ ನಿಂತು ನಡೆಸುವ ಆತ್ಮಾವಲೋಕನ. ಪ್ರತಿ ವರ್ಷವೂ ನಾವು ಸಂಕಲ್ಪಗಳನ್ನು ಮಾಡುತ್ತೇವೆ, ಆದರೆ ಅವು ಕೆಲವು ದಿನಗಳ ಉತ್ಸಾಹಕ್ಕೆ ಸೀಮಿತವಾಗುವುದು ವಿಷಾದನೀಯ. ಈ ಬಾರಿ ನಮ್ಮ ಸಂಕಲ್ಪಗಳು ಕೇವಲ ವೈಯಕ್ತಿಕ ಬೆಳವಣಿಗೆಯಷ್ಟೇ ಅಲ್ಲದೆ, ಸಾಮಾಜಿಕ ಜವಾಬ್ದಾರಿಯನ್ನೂ ಒಳಗೊಂಡಿರಲಿ.

ನಾವೆಲ್ಲರೂ ಮಾಡಿಕೊಳ್ಳಲೇಬೇಕಾದ ಮೊದಲ ಸಂಕಲ್ಪವೆಂದರೆ 'ಸಮಯದ ಸದುಪಯೋಗ'. ಗಡಿಯಾರದ ಮುಳ್ಳು ಹಿಂದೆ ತಿರುಗುವುದಿಲ್ಲ ಎಂಬ ಸತ್ಯವನ್ನು ಅರಿತು, ವ್ಯರ್ಥ ಕಾಲಹರಣವನ್ನು ಬಿಟ್ಟು ಸೃಜನಶೀಲ ಕೆಲಸಗಳಲ್ಲಿ ತೊಡಗಿಸಿಕೊಳ್ಳೋಣ. ಎರಡನೆಯದಾಗಿ, 'ಪರಿಸರ ಕಾಳಜಿ'. ನಮ್ಮ ಮನೆಯ ಅಂಗಳದಿಂದ ಹಿಡಿದು ಸಾರ್ವಜನಿಕ ಸ್ಥಳಗಳವರೆಗೆ ಸ್ವಚ್ಛತೆಯನ್ನು ಕಾಪಾಡುವುದು ಮತ್ತು ಪ್ರಕೃತಿಯನ್ನು ಗೌರವಿಸುವುದು ನಮ್ಮ ಆದ್ಯತೆಯಾಗಲಿ. ಮರ ಗಿಡಗಳನ್ನು ಬೆಳೆಸುವ ಮೂಲಕ ಭೂಮಿಯ ಋಣವನ್ನು ತೀರಿಸುವ ಸಣ್ಣ ಪ್ರಯತ್ನ ನಮ್ಮದಾಗಲಿ.

ಅಷ್ಟೇ ಅಲ್ಲದೆ, ತಂತ್ರಜ್ಞಾನದ ಅತಿಯಾದ ಹಾವಳಿಯಿಂದಾಗಿ ಮರೆಯಾಗುತ್ತಿರುವ 'ಮಾನವೀಯ ಸಂಬಂಧಗಳನ್ನು' ಮರಳಿ ಬೆಳೆಸೋಣ. ಮೊಬೈಲ್ ಪರದೆಯ ಮೇಲಿನ ಸಂಭಾಷಣೆಗಿಂತ, ಎದುರು ಕುಳಿತ ವ್ಯಕ್ತಿಯ ಕಣ್ಣಲ್ಲಿ ಕಣ್ಣಿಟ್ಟು ಮಾತಾಡುವ ಸಹಜತೆ ನಮ್ಮದಾಗಲಿ. ಅಸೂಯೆ, ದ್ವೇಷದ ಬದಲಿಗೆ ಪರಸ್ಪರ ಸಹಕಾರ ಮತ್ತು ಸಹನೆಯಿಂದ ಬದುಕುವುದು ಇಂದಿನ ಸಮಾಜಕ್ಕೆ ಅತ್ಯಗತ್ಯವಾಗಿದೆ.

ನೆನಪಿಡಿ, ಬದಲಾವಣೆ ಎಂಬುದು ಜಗತ್ತಿನ ನಿಯಮ. ಆದರೆ ಆ ಬದಲಾವಣೆ ಸಕಾರಾತ್ಮಕವಾಗಿರಬೇಕಾದರೆ ನಮ್ಮ ಸಂಕಲ್ಪಗಳು ದೃಢವಾಗಿರಬೇಕು. ದೊಡ್ಡ ಗುರಿಗಳ ಬೆನ್ನತ್ತುವ ಮೊದಲು, ಸಣ್ಣ ಸಣ್ಣ ತಪ್ಪುಗಳನ್ನು ತಿದ್ದಿಕೊಳ್ಳುವ ಪ್ರಾಮಾಣಿಕ ಪ್ರಯತ್ನ ಮಾಡೋಣ. ಈ ಹೊಸ ಕ್ಯಾಲೆಂಡರ್ ವರ್ಷ ನಮಗೆ ಕೇವಲ ಹೊಸ ದಿನಗಳನ್ನಷ್ಟೇ ಅಲ್ಲ, ಹೊಸದೊಂದು ದೃಷ್ಟಿಕೋನವನ್ನೂ ನೀಡಲಿ.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

ಕುಡುಕರ ದಿನಾಚರಣೆ

ಮಾನ್ಯರೆ,

ಹೊಸ ವರ್ಷಾಚರಣೆಯಂದು ಮದ್ಯ ಮಾರಾಟ ಹೆಚ್ಚಾಗುತ್ತದೆ. ಮದ್ಯಪಾನಿಗಳ ಸಂಖ್ಯೆಯೂ ಹೆಚ್ಚಾಗುತ್ತದೆ. ಮದ್ಯದಂಗಡಿಗಳೂ ತುಂಬಿ ತುಳುಕುತ್ತವೆ. ಮದ್ಯಪಾನ ಮಾಡಿ ವಾಹನ ಚಲಾಯಿಸುವವರ ಸಂಖ್ಯೆಯೂ ಹೆಚ್ಚಾಗುತ್ತದೆ. ಕುಡಿತದ ಕೆಡುಕುಗಳೂ ಹೆಚ್ಚಾಗುತ್ತವೆ. ಸಂಚಾರ ನಿಯಮ ಉಲ್ಲಂಘನೆಯ ಜೊತೆಗೆ ಹಲವು ಅಪರಾಧಗಳ ಸಂಖ್ಯೆಯೂ ಹೆಚ್ಚಾಗುತ್ತದೆ. ಜನವರಿ ಒಂದರಂದು ಆಚರಿಸುವುದೇನು? ಹೊಸವರ್ಷಾಚರಣೆಯೋ? ಕುಡುಕರ ದಿನಾಚರಣೆಯೋ?

–ಪಿ.ಜೆ.ರಾಘವೇಂದ್ರ ಮೈಸೂರು

ಹೊಸ ವರ್ಷಕ್ಕೆ ಹೃದಯ ಸಂಕಲ್ಪ ಮಾಡಿಕೊಳ್ಳಲಿ

ಮಾನ್ಯರೆ,

ಹೊಸ ವರ್ಷದ, ಹೊಸ ಕನಸುಗಳೊಂದಿಗೆ ಪ್ರತಿಯೊಬ್ಬರ ಜೀವನದಲ್ಲಿ ಹೊಸತನವನ್ನು ತರುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಕೇವಲ ಹೊಸ ವರ್ಷ ಹೊಸ ದಿನವು ಮೋಜು, ಮಸ್ತಿ, ಮನರಂಜನೆ, ಕುಡಿತ, ಧೂಮಪಾನ, ಮದ್ಯಪಾನಗಳಿಗೆ ಮಾತ್ರ ಸೀಮಿತವಾಗದೆ, ಮನುಷ್ಯನು ತಮ್ಮ ಜೀವನದ ಕನಸುಗಳ ಹಾದಿಯಲ್ಲಿ ನಾವೇನು ಮಾಡಬೇಕು ಎಂಬ ಸಂಕಲ್ಪ ಮಾಡಿಕೊಳ್ಳುವ ಅವಕಾಶವು ಮುಂದಿರುವುದರಿಂದ, ಅಲ್ಲದೆ ಹಿಂದೆ ಆದ ಕಹಿ ಘಟನೆಗಳನ್ನು ಹಾಗೂ ಸರಿ–ತಪ್ಪುಗಳ ಆತ್ಮಾವಲೋಕನ ಮಾಡಿಕೊಳ್ಳುವ ಸುಸಂದರ್ಭ ಬಂದಿರುವುದರಿಂದ. ಸಕಾರಾತ್ಮಕ ಆಲೋಚನೆಗಳನ್ನು ಮುಂದಿಟ್ಟುಕೊಂಡು 2026ರ ಹೊಸ ವರ್ಷವನ್ನು ಬರಮಾಡಿ ಕೊಳ್ಳುವುದರ ಮೂಲಕ ಹೊಸ ಹೊಸ ರೀತಿಯ ಕನಸುಗಳನ್ನು ನನಸು ಮಾಡಿಕೊಳ್ಳುವ ಹಾದಿಯಲ್ಲಿ ನಡಿಯಬೇಕಾಗಿದೆ. –ಸಾಯಿ ಸಂದೇಶ್ ಬಿ.ಎಸ್., ಮೈಸೂರು

ಹೊಸ ವರ್ಷವೋ? ಮದ್ಯದ ಹೊಳೆಯೋ? ವೆರೈಟಿ –ವೈವಿಧ್ಯ– ವಿಶೇಷ–ಮನದ ಹನಿ!

ಮಾನ್ಯರೆ,

ಹೊಸ ವರ್ಷವೋ? ಮದ್ಯದ ಹೊಳೆಯೋ!
ಯಾರಿಗುಂಟು.. ಯಾರಿಗಿಲ್ಲ.. ಈ ಭಾಗ್ಯ...
ವೈದ್ಯ ಹೇಳಿದ್ದು ಹಾಲು– ಅನ್ನ...ರೋಗಿ ಬಯಸಿದ್ದು ಬೀರು..
ಬಿರಿಯಾನಿ ! ನಲಿಯಿರಿ,
ಕುಣಿಯಿರಿ...ಚಿಂತೆ ಬಿಡಿ..ಕುಡಿದು ಚಿತ್ತಾಗಿ..
ಹಾಲಿನ ಹೊಳೆಯಲ್ಲ, ಜೇನಿನ ಮಳೆಯಲ್ಲ
ಇದು ಚಳಿ ಬಿಡಿಸುವ ಅಮಲಿನ ಹೊಳೆ....!
ನಿಮಗೇಕೆ.. ಜೇಬು ಬರಿದಾಗಿ,ತಲೆಗೆ ನಶೆ ಏರಿದ ಮೇಲೆ..ಮನೆ ತಲುಪಿಸಲು..
ಸರ್ಕಾರವೇ ಕೊಟ್ಟಿದೆ, ಶೂ..ರಿ..ಟಿ..!! ಇದು
ಸರ್ಕಾರವೇ ನಡೆಸುವ ರಿಯಾಲಿಟಿ ಷೋ...!

–ಮುಳ್ಳೂರು ಪ್ರಕಾಶ್, ಮೈಸೂರು.

ನಗರ ಪಾಲಿಕೆ ಸ್ಪಂದನೆ

ಮಾನ್ಯರೆ,



'ಮೈಸೂರು ಮಿತ್ರ' 'ಓದುಗರ–ಪತ್ರ'ಗಳ ವಿಭಾಗದಲ್ಲಿ ದಿನಾಂಕ: 26/12/2025 ರಂದು ಪ್ರಕಟವಾದ ಜಯನಗರದ ಇಸ್ಕಾನ್ ಕೃಷ್ಣ ದೇವಾಲಯದ ಮುಖ್ಯ ರಸ್ತೆಯ ಪಕ್ಕದಲ್ಲಿ ಲೋಡ್‌ಗಟ್ಟಲೆ ತ್ಯಾಜ್ಯ ವಸ್ತುಗಳು ಬಿದ್ದಿದ್ದು, ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ಇದೆ ಎಂದು ಬರೆದ ಪತ್ರಕ್ಕೆ ಮೈಸೂರು ನಗರ ಪಾಲಿಕೆಯ ಅಧಿಕಾರಿಗಳು ತಕ್ಷಣವೇ ಸ್ಪಂದಿಸಿ ಇಲ್ಲಿದ್ದ ತ್ಯಾಜ್ಯ ವಸ್ತುಗಳನ್ನು ತೆರವು ಗೊಳಿಸಿದ್ದಾರೆ. ಇದಕ್ಕಾಗಿ ಆಯುಕ್ತರು ಸೇರಿದಂತೆ ನಗರ ಪಾಲಿಕೆಯ ಅಧಿಕಾರಿಗಳಿಗೆ ಅಭಿನಂದನೆಗಳು.

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ನಂಬಿ ಕೆಟ್ಟವರು ಎಲ್ಲಾ ನಂಬಿ ಕೆಟ್ಟವರೂ....!

ಇತ್ತೀಚೆಗೆ ಕೆಲವು ಗೆಳೆಯರು ಸೇರಿದಾಗ ಚರ್ಚೆಗೆ ಬಂದ ವಿಷಯವೆಂದರೆ ವೈದ್ಯರನ್ನು ವೈದ್ಯೋ ನಾರಾಯಣೋ ಹರಿಃ ಎಂದು ಕರೆಯುವುದರ ಬಗ್ಗೆ. ಇದರಲ್ಲಿ ಒಂದಷ್ಟು ಜನರು ತಮಗೆ ವೈದ್ಯರಿಂದ ಆದ ಅನುಕೂಲತೆ ಹಾಗೂ ಇನ್ನೇನು ಪ್ರಾಣವೇ ಹೋಯಿತು ಎನ್ನುವಂತಹ ಸಂದರ್ಭದಲ್ಲಿ ಅವರು ಪಾರು ಮಾಡಿದ ಉಳಿಸಿದ ಬಗ್ಗೆ ಹೇಳಿದರೆ, ಮತ್ತಷ್ಟು ಜನರು ಇದಕ್ಕೆ ವಿರುದ್ಧವಾದ ಮಾತುಗಳನ್ನು ಆಡಿದರು. ಈಗಂತೂ ವೈದ್ಯರನ್ನು ಯಮನ ಏಜೆಂಟರು ಎಂದು ಕರೆಯುವ ಪ್ರಸಂಗ ಬಂದಿದೆ ಎಂಬುದು ಅವರುಗಳ ಅಭಿಪ್ರಾಯ. ಎರಡೂ ಸರಿಯೇ. ಅವರವರ ಅನುಭವದ ಆಧಾರದ ಮೇಲೆ ಅವರವರ ಅಭಿಪ್ರಾಯ ಮೂಡಿಬಂದಿತು. ಆದರೆ ಚರ್ಚೆ ಮುಂದುವರಿದಂತೆ ವೈದ್ಯರನ್ನು ದೇವರು ಎಂದು ಭಾವಿಸುತ್ತಿದ್ದ ಕಾಲ ಒಂದಿತ್ತು, ಆದರೆ ಈಗ ಹಾಗೆ ಕಾಣುವುದಿಲ್ಲ ಎಂಬ ಸಾರ್ವತ್ರಿಕ ಅಭಿಪ್ರಾಯ ಮೂಡಿಬಂದಿತು. ಹಾಗೆಂದು ಎಲ್ಲಾ ವೈದ್ಯರೂ ಕೆಟ್ಟವರೆಂದು ಭಾವಿಸಬಾರದು. ಈಗಲೂ ಅಲ್ಪಸ್ವಲ್ಪ ಹಣ ಪಡೆದು ರೋಗಿಗಳನ್ನು ಗುಣಪಡಿಸುವವರು, ತಮ್ಮ ವೃತ್ತಿಯನ್ನು ಗೌರವಿಸುವವರು, ನಮ್ಮನ್ನು ನಂಬಿ ಬರುವ ರೋಗಿಗಳಿಗೆ ನಾವು ಸರಿಯಾದ ಚಿಕಿತ್ಸೆ ನೀಡಬೇಕು, ನಮಗೆ ಗೊತ್ತಾಗದಿದ್ದರೆ ಇನ್ನೊಬ್ಬರ ಬಳಿಗಾದರೂ ಕಳುಹಿಸಬೇಕು ಎಂಬ ನಿದರ್ಶನಗಳು ಅಲ್ಲಲ್ಲಿ ಕಂಡುಬರುತ್ತವೆ. ಸಂಖ್ಯಾ ಪ್ರಮಾಣ ಕಡಿಮೆಯಾಗಿದೆ ಅಷ್ಟೇ.

ಚರ್ಚೆಯ ಹಂತದಲ್ಲಿ ಒಬ್ಬರು ಮಾತನಾಡುತ್ತಾ ಒಂದು ಹಳೆಯ ಪ್ರಸಂಗವನ್ನು ನೆನಪಿಸಿಕೊಂಡರು. ಅವರಿಗೆ ಬಹಳ ಪರಿಚಿತರಾದ ಒಬ್ಬರು ವೈದ್ಯರು ಒಂದು ಖಾಸಗಿ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಾರೆ. ಅವರ ಕೈಗುಣ ಬಹಳ ಪ್ರಸಿದ್ಧಿ. ಜೊತೆಗೆ ಪರಿಚಿತರು ಬೇರೆ. ಒಮ್ಮೆ ಇವರಿಗೆ ಜ್ವರ ಬಂದಾಗ ಆ ವೈದ್ಯರನ್ನು ಕಾಣಲು ಆಸ್ಪತ್ರೆಗೆ ಹೋದರು. ವೈದ್ಯರಲ್ಲಿ ಜ್ವರದ ಬಗ್ಗೆ ತಿಳಿಸಿದರು. ಅವರು ಇವರಿಗೆ ಹಲವಾರು ಪರೀಕ್ಷೆ ಮಾಡಿಸಿಕೊಂಡು ಬರಲು ಹೇಳಿದರು. ಇವರು ಹಾಗೇ ಮಾಡಿದರು. ನಂತರ ಗೊತ್ತಾಗಿದ್ದು ಅದು ಸಾಧಾರಣ ಜ್ವರ ಎಂದು. ಮೂರು ದಿನಕ್ಕೆ ಜ್ವರ ವಾಸಿಯಾಯಿತು. ನಂತರ ಅವರು ಆ ವೈದ್ಯರಲ್ಲಿಗೆ ಹೋಗಿ, ನಿಮ್ಮ ಅನುಭವದಲ್ಲಿ ಈ ಜ್ವರ ಮೂರು ದಿನಕ್ಕೆ ಹೋಗುತ್ತದೆ ಎಂದು ಗೊತ್ತಿದ್ದರೂ ನೀವು ಅನೇಕ ಪರೀಕ್ಷೆ ಮಾಡಿಸಿ ನಮಗೆ ಮೋಸ ಮಾಡಿದಿರಿ. ನೀವು ಹೀಗೆ ಮಾಡಬಾರದಿತ್ತು. ನಾವು ನಿಮ್ಮನ್ನು ಬಹಳ ನಂಬಿರುವವರು. ನಮಗೆ ಹೀಗೆ ಮೋಸ ಮಾಡಬಹುದೇ ಎಂದು ಕೇಳಿದಾಗ ಆ ವೈದ್ಯರು ಹೇಳಿದ್ದು; 'ನಂಬುವವರಿಗೇ ಕೆಲವು ಸಲ ಮೋಸ ಮಾಡಬೇಕಾಗುತ್ತದೆ ಹಾಗೂ ಹಾಗೆ ಮಾಡುವುದು ಅನಿವಾರ್ಯ' ಎಂದು.

ಈ ಮಾತು ಇಂದು ವೈದ್ಯಕೀಯ ಕ್ಷೇತ್ರಕ್ಕೆ ಮಾತ್ರ ಸೀಮಿತ ಎಂಬಂತಿಲ್ಲ, ಅದು ಎಲ್ಲಾ ಕ್ಷೇತ್ರಗಳಲ್ಲೂ ಕಂಡುಬರುತ್ತದೆ. ಯಾರನ್ನು ಹೆಚ್ಚು ನಂಬಲಾಗುತ್ತದೆಯೋ ಅಂತಹವರಿಂದಲೇ ನಾವು ಹೆಚ್ಚಾಗಿ ಮೋಸ ಹೋಗುತ್ತಿದ್ದೇವೆ. ಇತ್ತೀಚೆಗೆ ಪತ್ರಿಕೆಗಳಲ್ಲಿ ಬರುವ ಸುದ್ದಿಗಳು ಇದಕ್ಕೆ ಪೂರಕವಾಗಿರುವಂತೆ ಕಂಡುಬರುತ್ತದೆ. ಅಕ್ಕಪಕ್ಕದ ಮನೆಯವರನ್ನು ನಾವು ಸಾಮಾನ್ಯವಾಗಿ ನಂಬುತ್ತೇವೆ. ಮನೆಯಲ್ಲಿ ಮೂರ್‍ನಾಲ್ಕು ಜನರಿದ್ದಾಗ ಮನೆಯ ಬೀಗದ ಕೀಯನ್ನು ಮನೆಯ ಮುಂದಿನ ಚಪ್ಪಲಿ ಸ್ಟಾಂಡಿನಲ್ಲಿಡುವುದು, ಹೂವಿನ ಕುಂಡಗಳಲ್ಲಿ ಇಡುವುದು, ಹೀಗೆ ನಮ್ಮದೇ ಆದ ಅಭ್ಯಾಸ ಮಾಡಿಕೊಂಡಿರುತ್ತೇವೆ. ಅದು ಅಕ್ಕಪಕ್ಕದ ಮನೆಯವರಿಗೆ ಸಾಮಾನ್ಯವಾಗಿ ತಿಳಿದಿರುತ್ತದೆ. ಕೆಲವೊಮ್ಮೆ ದೂರದ ನೆಂಟರು ಬಂದಾಗ ನಮ್ಮ ಪಕ್ಕದ ಮನೆಯವರಿಗೆ ಕರೆ ಮಾಡಿ ನಮ್ಮ ಮನೆಯ ಕೀಯನ್ನು ಇಂತಹ ಕಡೆ ಇಟ್ಟಿದ್ದೇವೆ. ಬಂದಿರುವವರು ನೆಂಟರು, ಅವರಿಗೆ ಕೀಯನ್ನು ತೆಗೆದುಕೊಡಿ ಎಂದು ಹೇಳುತ್ತೇವೆ. ಏಕೆಂದರೆ ಅವರ ಬಗ್ಗೆ ನಮಗೆ ನಂಬಿಕೆ ಇದೆ.

ಆದರೆ ಪಕ್ಕದ ಮನೆಯವರೇ ಒಂದಲ್ಲ ಒಂದು ದಿನ ಅದೇ ಕೀಯನ್ನು ತೆಗೆದು ಮನೆಯಲ್ಲಿನ ವಸ್ತುಗಳನ್ನು ದೋಚಿದರೆ ನಂಬಿಕೆಗೆ ಬೆಲೆ ಎಲ್ಲಿರುತ್ತದೆ? ಇತ್ತೀಚಿನ ಪತ್ರಿಕೆಯ ಒಂದು ವರದಿ ಹೀಗೆ ಪಕ್ಕದ ಮನೆಯವರೇ, ತಮ್ಮನ್ನು ನಂಬಿದವರ ಮನೆಯಲ್ಲಿ ಯಾರೂ ಇಲ್ಲದಿದ್ದಾಗ, ಮನೆಯ ಕೀಯನ್ನು ತೆಗೆದುಕೊಂಡು ಒಂದಷ್ಟು ಹಣ, ಚಿನ್ನವನ್ನು ದೋಚಿ, ಮತ್ತೆ ಬಾಗಿಲಿಗೆ ಬೀಗ ಹಾಕಿ ಅಮಾಯಕರಂತೆ ವರ್ತಿಸಿದ್ದು ವರದಿಯಾಗಿತ್ತು. ಅಂದರೆ ಇಂತಹ ಪ್ರಕರಣಗಳಲ್ಲಿ ನಮ್ಮ ನಂಬಿಕೆಯೇ ನಮಗೆ ಮುಳ್ಳಾಗುತ್ತದೆ.

> "ಸಾಮಾನ್ಯವಾಗಿ ನಾವುಗಳು ಮೋಸ ಹೋಗುವುದು ನಮ್ಮ ದುರಾಸೆಯಿಂದಲೇ. ಮೋಸ ಮಾಡುವವರು ಎಂತಹ ಬುದ್ಧಿವಂತರು ಎಂದರೆ ಅವರು ನಾವು ಅವರ ಬಲಿಪಶುಗಳಾಗಬಹುದೇ ಎಂದು ಪರೀಕ್ಷಿಸುತ್ತಾರೆ. ಎರಡು–ಮೂರು ಮಾತಿನಲ್ಲೇ ಅವರಿಗೆ ಬಹುಬೇಗ ನಾವು ಮೋಸ ಹೋಗುವವರು ಎಂದು ಗೊತ್ತಾಗುತ್ತದೆ. ನಮ್ಮ ದೌರ್ಬಲ್ಯವನ್ನು ಅವರು ಚೆನ್ನಾಗಿ ಉಪಯೋಗಿಸಿಕೊಂಡು ಮೋಸ ಮಾಡುತ್ತಾರೆ. ಅನೇಕರು ಇಡೀ ಜೀವಮಾನದಲ್ಲಿ ಶ್ರಮಪಟ್ಟು ಗಳಿಸಿದ್ದನ್ನು ಕ್ಷಣ ಮಾತ್ರದಲ್ಲಿ ಕಳೆದುಕೊಳ್ಳುತ್ತಾರೆ. ಇಲ್ಲಿ ನಮ್ಮ ದುರಾಸೆಯೇ ನಮ್ಮ ಜೀವನದ ಶತ್ರುವಾಗಿ ಕಾಡುತ್ತದೆ.

ಜೀವನ ಎಂದ ಮೇಲೆ ಕೆಲವರನ್ನಾದರೂ ನಂಬಲೇ ಬೇಕಾಗುತ್ತದೆ. ಅದು ತಪ್ಪಲ್ಲ. ಆದರೆ ಅತೀ ನಂಬಿಕೆ ಒಳ್ಳೆಯದಲ್ಲ. ನಮ್ಮಲ್ಲಿ ಕೆಲವರು ಖಾಸಗಿಯಾಗಿ 'ಚೀಟಿ' ನಡೆಸುವ ಪರಿಪಾಟ ಇಟ್ಟುಕೊಂಡಿರುತ್ತಾರೆ. ಅವರನ್ನು ನಂಬಿದ ಜನರು ಅವರಲ್ಲಿ 'ಚೀಟಿ' ಹಾಕುತ್ತಾರೆ. ಆದರೆ ಅನೇಕರು ನಂತರ ಹಣದ ಸಮೇತ ಪರಾರಿಯಾಗುತ್ತಾರೆ. ಇಂತಹವರ ಬಳಿ 'ಚೀಟಿ' ಹಾಕುವವರು ಅಮಾಯಕರು. ಅವರು ಒಮ್ಮೆಗೆ ಕೂಡಿಟ್ಟ ಹಣ ಕೈ ಸೇರಿದರೆ ತಮ್ಮ ತೊಂದರೆ ನಿವಾರಿಸಿಕೊಳ್ಳಬಹುದು ಎಂದು ಹಾಗೆ ಮಾಡಿರುತ್ತಾರೆ. ಅಂತಹವರ ಹಣ ದೋಚಿಕೊಂಡು ಹೋದಾಗ ಅವರಿಗೆ ಜೀವನವೇ ಬೇಡ ಎನಿಸುವಂತಹ ದುರ್ಗತಿ ಎದುರಾಗುತ್ತದೆ. ಇಲ್ಲಿಯೂ ನಮ್ಮ ನಂಬಿಕೆಯೇ ನಮಗೆ ಕೈಕೊಟ್ಟಿರುತ್ತದೆ.

ಇತ್ತೀಚೆಗೆ ನಾವು ವಿಧವಿಧದ ಸೈಬರ್ ಅಪರಾಧಗಳನ್ನು ನೋಡುತ್ತಿದ್ದೇವೆ. ಇಲ್ಲೆಲ್ಲಾ ಮೊದಮೊದಲು ತಮ್ಮ ಮೇಲೆ ನಂಬಿಕೆ ಬರುವಂತೆ ಮಾಡಿ ನಂತರ ಮೋಸ ಮಾಡುವುದು ಸಾಮಾನ್ಯವಾಗಿ ಕಂಡುಬರುತ್ತದೆ. ನಿಮ್ಮ ಹಣಕ್ಕೆ ಹೆಚ್ಚಿನ ಲಾಭ ಬರುತ್ತದೆ ಎಂದು ಹೇಳುತ್ತಾರೆ. ನಮಗೆ ಅಪನಂಬಿಕೆ. ಆದರೂ ಒಂದು ಸಲ ನೋಡೋಣ ಎಂದು ಹಣ ವಿನಿಯೋಗಿಸುತ್ತೇವೆ. ಅದಕ್ಕೆ ಕೆಲವೇ ದಿನಗಳಲ್ಲಿ ಒಂದಷ್ಟು ಲಾಭ ಬರಬಹುದು. ಆಗ ನಮಗೆ ನಂಬಿಕೆ ಬರುತ್ತದೆ. ನಂತರ ಯಾರ ಮಾತನ್ನೂ ಕೇಳದೇ ತಮ್ಮಲ್ಲಿರುವ ಹಣವನ್ನೆಲ್ಲಾ ವಿನಿಯೋಗಿಸುತ್ತಾರೆ. ಕೆಲ ಸಮಯದ ನಂತರ ತಮಗೆ ಬಂದಿರುವ ಲಾಭವನ್ನು (ಹಾಗೆ ತೋರಿಸಲಾಗುತ್ತದೆ) ಡ್ರಾ ಮಾಡಿಕೊಳ್ಳಲು ಹೋದಾಗಲೇ ಅವರಿಗೆ ತಾವು ಮೋಸ ಹೋಗಿರುವುದು ಗೊತ್ತಾಗುತ್ತದೆ. ಲಾಭವನ್ನು ಡ್ರಾ ಮಾಡಿಕೊಳ್ಳಲು ಸೈಬರ್ ಅಪರಾಧಿಗಳು ಬಿಡುವುದಿಲ್ಲ. ಹಣ ಹಿಂಪಡೆಯಬೇಕಾದರೆ ಆ ತೆರಿಗೆ, ಈ ತೆರಿಗೆ ಕಟ್ಟಬೇಕು, ಮೊದಲಾಗಿ ಹಲವು ಕಾರಣ ಹೇಳಿ ಮತ್ತೆ ಹಣ ಕಳಿಸುವಂತೆ ಪೀಡಿಸುತ್ತಾರೆ. ಆಗಲೇ ನಮಗೆ ನಾವು ಮೋಸ ಹೋಗಿರುವುದು ಗೊತ್ತಾಗುತ್ತದೆ. ಆದರೆ ಅಷ್ಟರಲ್ಲಿ ಸಮಯ ವ್ಯರ್ಥವಾಗಿರುತ್ತದೆ. ಪೊಲೀಸರೂ ಏನು ಮಾಡಲಾಗದಂತಹ ಸ್ಥಿತಿ ನಿರ್ಮಾಣವಾಗಿರುತ್ತದೆ.

ಸಾಮಾನ್ಯವಾಗಿ ನಾವುಗಳು ಮೋಸ ಹೋಗುವುದು ನಮ್ಮ ದುರಾಸೆಯಿಂದಲೇ. ಮೋಸ ಮಾಡುವವರು ಎಂತಹ ಬುದ್ಧಿವಂತರು ಎಂದರೆ ಅವರು ನಾವು ಅವರ ಬಲಿಪಶುಗಳಾಗಬಹುದೇ ಎಂದು ಪರೀಕ್ಷಿಸುತ್ತಾರೆ. ಎರಡು–ಮೂರು ಮಾತಿನಲ್ಲೇ ಅವರಿಗೆ ಬಹುಬೇಗ ನಾವು ಮೋಸ ಹೋಗುವವರು ಎಂದು ಗೊತ್ತಾಗುತ್ತದೆ. ನಮ್ಮ ದೌರ್ಬಲ್ಯವನ್ನು ಅವರು ಚೆನ್ನಾಗಿ ಉಪಯೋಗಿಸಿಕೊಂಡು ಮೋಸ ಮಾಡುತ್ತಾರೆ. ಅನೇಕರು ಇಡೀ ಜೀವಮಾನದಲ್ಲಿ ಶ್ರಮಪಟ್ಟು ಗಳಿಸಿದ್ದನ್ನು ಕ್ಷಣ ಮಾತ್ರದಲ್ಲಿ ಕಳೆದುಕೊಳ್ಳುತ್ತಾರೆ. ಇಲ್ಲಿ ನಮ್ಮ ದುರಾಸೆಯೇ ನಮ್ಮ ಜೀವನದ ಶತ್ರುವಾಗಿ ಕಾಡುತ್ತದೆ.

ಇದನ್ನೆಲ್ಲಾ ನಾವು ಪ್ರತಿದಿನ ಪತ್ರಿಕೆಗಳಲ್ಲಿ, ಮಾಧ್ಯಮಗಳಲ್ಲಿ ನೋಡುತ್ತೇವೆ. ಪೊಲೀಸರೂ ನಮ್ಮನ್ನು ಎಚ್ಚರಿಸುವ ಕೆಲಸ ಮಾಡುತ್ತಲೇ ಇರುತ್ತಾರೆ. ಗೊತ್ತಿಲ್ಲದ ಲಿಂಕ್‌ಗಳನ್ನು ಕ್ಲಿಕ್ ಮಾಡಬೇಡಿ. ನಿಮ್ಮ ಓಟಿಪಿ ನಂಬರನ್ನು ಯಾರಿಗೂ ಕೊಡಬೇಡಿ ಎಂದೆಲ್ಲಾ ಮಾಹಿತಿ ನೀಡುತ್ತಲೇ ಇರುತ್ತಾರೆ. ಅದನ್ನು ನಾವು ಗಮನಿಸಿಯೂ ಇರುತ್ತೇವೆ. ಆದರೂ ಮೋಸ ಹೋಗುತ್ತೇವೆ. ಕಾರಣ ಮೋಸ ಹೋಗುವ ಹಂತದವರೆಗೆ ನಮಗೆ ನಾವು ಬಹಳ ಬುದ್ಧಿವಂತರು, ಹಾಗೆಲ್ಲಾ ಮೋಸ ಹೋಗುವವರಲ್ಲ ಎಂಬ ಅಹಂ ಇರುತ್ತದೆ. ಹಾಗಾಗಿ ತಾವು ಇಂತಹ ಯಾವುದಾದರೂ ಸಂಸ್ಥೆಗಳಲ್ಲಿ ಹಣ ಹೂಡುತ್ತಿದ್ದೇನೆ ಎಂದು ಮನೆಯವರಲ್ಲಿಯೂ ಹೇಳುವುದಿಲ್ಲ. ಮೋಸ ಹೋದ ನಂತರ ಯಾರಿಗೆ ಹೇಳಿದರೂ, ಅವರು ಹೇಳುವ ಮಾತು ನಿಮಗೆ ಅಷ್ಟೂ ಬುದ್ಧಿಯಿಲ್ಲವೇ ಎಂದೇ ಹೊರತು, ಯಾರೂ ಸಹಾನುಭೂತಿಯನ್ನು ತೋರಿಸುವುದಿಲ್ಲ.

ಆಶ್ಚರ್ಯ ಎಂದರೆ ಇಂತಹ ಮೋಸದ ಜಾಲದಲ್ಲಿ ಹಿರಿಯ ಅಧಿಕಾರಿಗಳು, ನಿವೃತ್ತರು ಮೋಸ ಹೋಗುತ್ತಿರುವುದು. ಇತ್ತೀಚೆಗೆ ವರದಿಯಾದ ಒಂದು ಪ್ರಕರಣದಲ್ಲಿ ಪಂಜಾಬ್ ರಾಜ್ಯದ, ಬಹು ಅನುಭವ ಹೊಂದಿದ ಒಬ್ಬ ಐಪಿಎಸ್ ಅಧಿಕಾರಿ ಇಂತಹ ಸೈಬರ್ ವಂಚಕರ ಜಾಲದಲ್ಲಿ ಸಿಲುಕಿ ಕಳೆದುಕೊಂಡ ಹಣ ಬರೋಬ್ಬರಿ 8 ಕೋಟಿ ರೂಪಾಯಿಗಳು! ಈ ಆಘಾತವನ್ನು ತಾಳಲಾರದೆ ಅವರು ತಮ್ಮ ನಿವಾಸದಲ್ಲೇ ಗುಂಡು ಹಾರಿಸಿಕೊಂಡು ಆತ್ಮಹತ್ಯೆಗೆ ಪ್ರಯತ್ನಿಸಿದರು ಎಂಬ ಸುದ್ದಿಯನ್ನು ಓದಿದಾಗ ನಮ್ಮಲ್ಲಿ ಅನೇಕರಿಗೆ ಅವರ ಬಳಿ ಅಷ್ಟೊಂದು ಹಣ ಇದ್ದ ಮೇಲೂ ಏಕೆ ಹೀಗೆ ಮೋಸದ ಜಾಲಕ್ಕೆ ಬಿದ್ದರು ಎಂಬ ಪ್ರಶ್ನೆ ಮೂಡುತ್ತದೆ.

ಇತ್ತೀಚೆಗೆ ಸಾಮಾನ್ಯವಾಗಿ ಎಲ್ಲರ ಮೊಬೈಲ್ ಫೋನ್‌ಗಳಿಗೂ ಇಂತಹ ಆಮಿಷದ ಕರೆಗಳು, ಸಂದೇಶಗಳು ಬರುತ್ತವೆ. ನಮಗೆ ದಿಢೀರ್ ಎಂದು ಹಣ ಮಾಡುವ ಆಸೆ ಇಲ್ಲದಿದ್ದಲ್ಲಿ ನಾವು ಅದನ್ನು ತಿರಸ್ಕರಿಸುತ್ತೇವೆ. ಆದರೆ ಕೆಲವೊಮ್ಮೆ ನಮ್ಮ ಮನಸ್ಸು ದುರ್ಬಲವಾಗಿರುವ ಸಂದರ್ಭದಲ್ಲಿ ಇಂತಹ ಜಾಲಕ್ಕೆ ಬಲಿಯಾಗಿ ಬಿಡುತ್ತೇವೆ. ಯಾರೇ ಆಗಲಿ ನಮಗೆ ಒಮ್ಮೆಯೇ ಮೋಸ ಮಾಡಲಾಗುವುದಿಲ್ಲ. ನಾವು ದುರ್ಬಲ ಮನಸ್ಸಿನವರಾಗಿ ಬರುವ ಅಲ್ಪ ಹಣದ ಬಗ್ಗೆ ಆಸಕ್ತಿ ತಳೆದರೆ ನಾವು ಮುಂದೆ ಖಂಡಿತಾ ಮೋಸ ಹೋಗುತ್ತೇವೆ.

ಇಲ್ಲೆಲ್ಲಾ ಕಂಡುಬರುವುದು, ನಾವು ಸಾಮಾನ್ಯವಾಗಿ ಮೋಸ ಹೋಗುವುದು ನಾವು ನಂಬಿದವರಿಂದಲೇ ಆಗಿರುತ್ತದೆ. ಬ್ಯಾಂಕುಗಳು, ಪೋಸ್ಟ್ ಆಫೀಸುಗಳನ್ನು ನಾವು ಈವರೆವಿಗೆ ಬಹಳವಾಗಿ ನಂಬಿಕೊಂಡೇ ಬಂದಿದ್ದೆವು. ನಿಮಗೆ ಹೆಚ್ಚಿನ ಬಡ್ಡಿಯನ್ನು ಯಾರೂ ಕೊಡುವುದಿಲ್ಲ. ಆದ್ದರಿಂದ ಹೆಚ್ಚಿನ ಬಡ್ಡಿಯ ಆಸೆಗೆ ಅಸಲನ್ನು ಕಳೆದುಕೊಳ್ಳಬೇಡಿ ಎಂದು ಬ್ಯಾಂಕುಗಳು ಹೇಳುತ್ತಿದ್ದವು. ಆದರೆ ಜಿಲ್ಲೆಯ ಒಂದು ಪೋಸ್ಟ್ ಆಫೀಸಿನಲ್ಲಿ ಆದ ಮೋಸ, ಮತ್ತೊಂದು ಬ್ಯಾಂಕಿನಲ್ಲಿ ಗ್ರಾಹಕರು ಅಡವಿಟ್ಟಿದ್ದ ಚಿನ್ನದ ತೂಕದಲ್ಲಿನ ವಂಚನೆ ಇವೆಲ್ಲಾ ನಮ್ಮ ನಂಬಿಕೆಗಳನ್ನೇ ಪ್ರಶ್ನಿಸುವಂತೆ ಮಾಡುತ್ತಿವೆ.

ಇಂದು ನೀರನ್ನು ಆರಿಸಿಕೊಂಡು (ತಣಿಸಿ) ಕುಡಿಯಬೇಕಾದಂತಹ ಪರಿಸ್ಥಿತಿ ಬಂದಿದೆ ಎಂದು ಹಿರಿಯರು ಹೇಳಿದಾಗ ನಮಗೆ ಅದರ ಅರ್ಥ ಆಗುತ್ತಿರಲಿಲ್ಲ. ಆದರೆ ಈಗಿನ ಸನ್ನಿವೇಶಗಳು ನಮ್ಮ ನಂಬಿಕೆಗಳ ಮೇಲೆಯೇ ಪ್ರಹಾರ ಮಾಡುತ್ತಿವೆ. ನಾವು ಯಾರನ್ನು ಹೆಚ್ಚಾಗಿ ನಂಬುತ್ತೇವೆಯೋ, ಅವರಿಂದಲೇ ಮೋಸವಾದಾಗ, ಹಾಗಾದರೆ ಯಾರನ್ನು ನಂಬಿ ಜೀವನ ಮಾಡುವುದು ಎಂಬ ಪ್ರಶ್ನೆ ಮೂಡುತ್ತದೆ.

ಆದರೂ ನಮಗೆ ವಿವೇಕ ಎಂಬುದು ಒಂದು ಇರುತ್ತದೆ. ಅದರಂತೆ ನಡೆಯ ಬೇಕಾಗುತ್ತದೆ. ಹೆಚ್ಚಿನ ಹಾಗೂ ನಮ್ಮದಲ್ಲದ ಹಣಕ್ಕಾಗಿ ಆಸೆ ಪಟ್ಟಾಗಲೇ ನಾವು ಮೋಸ ಹೋಗುವುದು. ಗೌತಮ ಬುದ್ಧನ ಮಾತು ಆಸೆಯೇ ದುಃಖಕ್ಕೆ ಮೂಲ ಎಂಬುದು ಎಲ್ಲಾ ಕಾಲಕ್ಕೂ ಸಲ್ಲುವ ನುಡಿಯಾಗಿ ಕಂಡುಬರುತ್ತದೆ. ನಾವು ಮೋಸ ಹೋಗುವ ಸಮಯ ಬಂದಾಗ ನಮ್ಮನ್ನು ನಂಬಿರುವವರ ಬಗ್ಗೆಯೂ ನಾವು ಒಮ್ಮೆ ಆಲೋಚಿಸುವುದು ಸೂಕ್ತ ಎನ್ನಿಸುತ್ತದೆ.

ಅಯೋಧ್ಯೆ ರಾಮಮಂದಿರದ 2ನೇ ವಾರ್ಷಿಕೋತ್ಸವ



ಅಯೋಧ್ಯೆಯ ರಾಮಮಂದಿರದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹಾಗೂ ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ವಿಶೇಷ ಪೂಜೆ ಸಲ್ಲಿಸಿದರು.

ಅಯೋಧ್ಯೆ, ಡಿ.31– ಅಯೋಧ್ಯೆಯ ರಾಮಮಂದಿರದಲ್ಲಿ ರಾಮಲಲ್ಲಾ ಪ್ರಾಣ ಪ್ರತಿಷ್ಠೆಯಾಗಿ ಎರಡು ವರ್ಷ ಪೂರ್ಣಗೊಂಡ ಹಿನ್ನೆಲೆಯಲ್ಲಿ ಡಿ.31ರಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹಾಗೂ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ವಿಶೇಷ ಪೂಜೆ ಸಲ್ಲಿಸಿದರು.

2024ರ ಜನವರಿ 22ರಂದು ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ರಾಮಲಲ್ಲಾ ಮೂರ್ತಿಗೆ ಪ್ರಾಣ ಪ್ರತಿಷ್ಠಾಪನೆ ನೆರವೇರಿಸಲಾಗಿತ್ತು. ಆ ಐತಿಹಾಸಿಕ ಕ್ಷಣಕ್ಕೆ ಎರಡು ವರ್ಷ ಪೂರ್ಣಗೊಂಡ ಹಿನ್ನೆಲೆಯಲ್ಲಿ ಈ ಸಂಭ್ರಮಾಚರಣೆ ಮಾಡಲಾಗುತ್ತಿದೆ.

ಈ ವರ್ಷದ ವಾರ್ಷಿಕೋತ್ಸವವನ್ನು ಡಿ.31ರಂದು ರಾಮ ಮಂದಿರ ಟ್ರಸ್ಟ್ ವತಿಯಿಂದ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ದಿನವಿಡೀ ಗಣಪತಿ ಪೂಜೆ, ಮಂಡಲ ಪೂಜೆ, ವಿಶೇಷ ಅಭಿಷೇಕ ಹಾಗೂ ಪ್ರಕಟೋತ್ಸವ ಆರತಿ ಸೇರಿದಂತೆ ವಿಶೇಷ ವಿಧಿವಿಧಾನಗಳು ನೆರವೇರಿದವು. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮಂದಿರದಲ್ಲಿ ಪೂಜೆ ಸಲ್ಲಿಸಿ ಬಳಿಕ ಮಾತಾ ಅನ್ನಪೂರ್ಣ ಮಂದಿರದಲ್ಲಿ ಧ್ವಜಾರೋಹಣ ನೆರವೇರಿಸಿದರು. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರೊಂದಿಗೆ ಇದ್ದು, ರಾಮ ಮಂದಿರ ಸಂಕೀರ್ಣದ ನಿರ್ಗಮನ ದ್ವಾರವಾದ ಆವರಣದಲ್ಲಿ ಭಕ್ತರನ್ನು ಉದ್ದೇಶಿಸಿ ಮಾತನಾಡಿದರು.

ಈ ವಿಶೇಷ ದಿನದಂದು ಅಯೋಧ್ಯೆಯಲ್ಲಿ ಸುಮಾರು 5–6 ಲಕ್ಷ ಭಕ್ತರು ಮಂದಿರಕ್ಕೆ ಭೇಟಿ ನೀಡಿದ್ದಾರೆ ಎಂದು ಅಧಿಕಾರಿಗಳು ಅಂದಾಜಿಸಿದ್ದಾರೆ. ದರ್ಶನಕ್ಕಾಗಿ ಕಾಯುತ್ತಿದ್ದ ಭಕ್ತರು 'ಜೈ ಶ್ರೀರಾಮ್' ಘೋಷಣೆ ಕೂಗುತ್ತಿರುವ ದೃಶ್ಯಗಳು ಕಂಡುಬಂದವು. ನಗರಾದ್ಯಂತ ಕಟ್ಟುನಿಟ್ಟಿನ ಭದ್ರತಾ ವ್ಯವಸ್ಥೆ ಕೈಗೊಳ್ಳಲಾಗಿದೆ. ಶ್ರೀರಾಮಮಂದಿರ ಪ್ರಾಣ ಪ್ರತಿಷ್ಠಾಪನೆಯ 2ನೇ ವಾರ್ಷಿಕೋತ್ಸವದ ಕುರಿತು ಪ್ರಧಾನಿ ನರೇಂದ್ರ ಮೋದಿ ಎಕ್ಸ್‌ನಲ್ಲಿ ಪೋಸ್ಟ್ ವೊಂದನ್ನು ಹಂಚಿಕೊಂಡಿದ್ದು, 'ಇದು ನಂಬಿಕೆ ಮತ್ತು ಪರಂಪರೆಯ ಹಬ್ಬ' ಎಂದು ವರ್ಣಿಸಿದ್ದಾರೆ. 'ಪ್ರಭು ಶ್ರೀರಾಮನ ಚರಣಕ್ಕೆ ಹಾಗೂ ದೇಶ–ವಿದೇಶಗಳಲ್ಲಿರುವ ಸಕಲ ರಾಮ ಭಕ್ತರಿಗೆ ನನ್ನ ಕೋಟಿ ಕೋಟಿ ಪ್ರಣಾಮಗಳು' ಎಂದು ಹೇಳಿದ್ದಾರೆ.

ಜ.8, 9ರಂದು ಸರ್ಕಾರಿ ನೌಕರರ ಜಿಲ್ಲಾ ಮಟ್ಟದ ಕ್ರೀಡಾಕೂಟ



ಜಿ.ಲಕ್ಷ್ಮಿಕಾಂತ್‌ರೆಡ್ಡಿ

ಮೈಸೂರು, ಡಿ.31(ಎಂಕೆ)– ಮೈಸೂರಿನ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಜ.8 ಮತ್ತು 9ರಂದು ರಾಜ್ಯ ಸರ್ಕಾರಿ ನೌಕರರ ಜಿಲ್ಲಾ ಮಟ್ಟದ ಕ್ರೀಡಾಕೂಟ ಆಯೋಜಿಸಲಾಗಿದೆ ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ್‌ರೆಡ್ಡಿ ತಿಳಿಸಿದರು.

ಮೈಸೂರು ಜಿಪಂ ಸಭಾಂಗಣದಲ್ಲಿ ಬುಧವಾರ ಕ್ರೀಡಾಕೂಟದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಹಾಕಿ, ಕುಸ್ತಿ, ಕಬಡ್ಡಿ, ವಾಲಿಬಾಲ್, ಬ್ಯಾಸ್ಕೆಟ್ ಬಾಲ್, ಖೋಖೋ, ಬಾಲ್ ಬ್ಯಾಡ್ಮಿಂಟನ್, ಅಥ್ಲೆಟಿಕ್ಸ್, ಟೆನಿಕಾಯ್ಟ್, ವೇಟ್ ಲಿಫ್ಟಿಂಗ್, ದೇಹದಾರ್ಢ್ಯ, ಪವರ್ ಲಿಫ್ಟಿಂಗ್, ಚೆಸ್, ಥ್ರೋ ಬಾಲ್, ಈಜು, ಕೇರಂ, ಯೋಗ, ಹಾಗೂ ಟೆನ್ನಿಸ್ ಪಂದ್ಯಗಳು ನಡೆಯಲಿವೆ ಎಂದರು.

ಹಾಗೆಯೇ ಮೈಸೂರು ವಿವಿ ಸ್ಪೋರ್ಟ್ಸ್ ಪೆವಿಲಿಯನ್ ಮೈದಾನದಲ್ಲಿ ಫುಟ್ಬಾಲ್, ಷಟಲ್ ಬ್ಯಾಡ್ಮಿಂಟನ್, ಮಹರ್ಷಿ ವಾಲ್ಮೀಕಿ ಶಾಲೆಯಲ್ಲಿ ಟೇಬಲ್ ಟೆನ್ನಿಸ್, ಕೆ.ಜಿ.ಕೊಪ್ಪಲಿನ ಕನ್ನೇಗೌಡ ಕ್ರೀಡಾಂಗಣದಲ್ಲಿ ಕ್ರಿಕೆಟ್ ಪಂದ್ಯಗಳು ನಡೆದರೆ, ಚಾಮುಂಡಿ ವಿಹಾರ ಒಳಾಂಗಣದಲ್ಲಿ ಸಾಂಸ್ಕೃತಿಕ ಸ್ಪರ್ಧೆಗಳು ನಡೆಯಲಿವೆ ಎಂದು ಮಾಹಿತಿ ನೀಡಿದರು.

ಎರಡು ದಿನದ ಕ್ರೀಡಾಕೂಟಕ್ಕೆ ಸೂಕ್ತ ಪೊಲೀಸ್ ಬಂದೋಬಸ್ತ್ ವ್ಯವಸ್ಥೆಯಾಗಬೇಕು. ವೇದಿಕೆ ಕಾರ್ಯಕ್ರಮಕ್ಕೆ ತೋಟಗಾರಿಕೆ ಇಲಾಖೆಯಿಂದ ಅಲಂಕಾರಿಕ ಹೂವಿನ ಗಿಡಗಳನ್ನು ನೀಡಬೇಕು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ ವತಿಯಿಂದ ಅಗತ್ಯ ಔಷಧಿಯೊಂದಿಗೆ ಆಂಬುಲೇನ್ಸ್ ಸೇವೆ ನೀಡಬೇಕು ಹಾಗೂ ಪಾಲಿಕೆಯಿಂದ ಕುಡಿಯುವ ನೀರು ಮತ್ತು ಸ್ವಚ್ಛತಾ ವ್ಯವಸ್ಥೆಯಾಗಬೇಕು ಎಂದು ಸೂಚಿಸಿದರು. ಜಿಪಂ ಸಿಇಓ ಎಸ್.ಯುಕೇಶ್‌ಕುಮಾರ್, ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.

ಶಿಕ್ಷಣದೊಂದಿಗೆ ವಿದ್ಯಾರ್ಥಿಗಳು ರಂಗ ಕಲೆ ಅಳವಡಿಸಿಕೊಂಡರೆ ಯಶಸ್ಸು

ರಂಗ ತರಬೇತಿ ಶಿಬಿರದಲ್ಲಿ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಂಗೇಗೌಡ ಸಲಹೆ

ಮೈಸೂರು,ಡಿ.31(ಎಂಟಿವೈ)– ವಿದ್ಯಾರ್ಥಿಗಳು ಶಿಕ್ಷಣದೊಂದಿಗೆ ರಂಗ ಕಲೆಯನ್ನು ಜೀವನದಲ್ಲಿ ಅಳವಡಿಸಿಕೊಂಡು ಯಶಸ್ಸು ಕಾಣಬೇಕು ಎಂದು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಬಿ.ರಂಗೇಗೌಡ ಸಲಹೆ ನೀಡಿದ್ದಾರೆ.

ರಂಗಾಂತರಂಗ ಮೈಸೂರು, ಕನ್ನಡ ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ದೊಡ್ಡಹುಂಡಿಯಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ನಡೆದ 'ರಂಗಾಂತರದ ನಡಿಗೆ ಹಳ್ಳಿ ಮಕ್ಕಳ ಕಡೆಗೆ' ರಂಗ ತರಬೇತಿ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ಸಮಾಜದಲ್ಲಿ ಶಾಂತಿ, ನೆಮ್ಮದಿ ನೆಲೆಸಲು ಕಲೆ, ಸಂಸ್ಕೃತಿ ಕ್ರೀಡೆ ಪ್ರಮುಖ ಪಾತ್ರವಹಿಸುತ್ತದೆ. ವಿವಿಧ ಪ್ರಕಾರಗಳ ಅಸಂಖ್ಯಾತ ಕಲಾವಿದರಿಂದ ಸಮಾಜದಲ್ಲಿ ನೆಮ್ಮದಿ ನೆಲೆಸಿದೆ. ನಾಟಕ ರಂಗದಲ್ಲಿ ಯಾರು ಚೆನ್ನಾಗಿ ಅಭಿನಯಿಸುತ್ತಾರೋ ಅವರು ಎಲ್ಲಾ ರಂಗಗಳಲ್ಲಿಯೂ ಯಶಸ್ಸನ್ನು ಕಾಣುತ್ತಾರೆ. ನಾನು ಪ್ರೌಢಶಾಲೆಯಲ್ಲಿ ಓದುವಾಗ ನಾಟಕಗಳಲ್ಲಿ ಅಭಿನಯಿಸಿ ಮೆಚ್ಚುಗೆ ಗಳಿಸಿದ್ದೆ. ರಂಗ ಶಿಕ್ಷಣದಿಂದಾಗಿ ವೇದಿಕೆಯಲ್ಲಿ ಮಾತನಾಡುವಾಗ ಭಯ ಹೋಗಲಾಡಿಸುತ್ತದೆ. ಯಾವುದೇ ವೇದಿಕೆಯಲ್ಲೂ ಅಂಜದೆ ಮಾತನಾಡುವುದನ್ನು ಕಲಿಸುತ್ತದೆ. ಸಿನಿಮಾ ರಂಗದಲ್ಲಿ ಡಾ.ರಾಜ್‌ಕುಮಾರ್, ಪುಟ್ಟಣ್ಣ ಕಣಗಾಲ್‌ರಂತಹ ದಿಗ್ಗಜರು ಇತಿಹಾಸ ನಿರ್ಮಿಸಿ ಜನರ ಮನಸ್ಸಿನಲ್ಲಿ ನೆಲೆಸಿದ್ದಾರೆ. ಸಂಗೀತ, ನಾಟಕ, ಯಕ್ಷಗಾನ ಎಲ್ಲವೂ ಕಲೆಯೇ. ಆದ್ದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯೂ ಆಸಕ್ತಿ ವಹಿಸಿ ಯಾವುದಾದರೊಂದು ಕಲೆಯನ್ನು ಅಳವಡಿಸಿಕೊಳ್ಳಬೇಕು ಎಂದರು.



'ರಂಗಾಂತರದ ನಡಿಗೆ ಹಳ್ಳಿ ಮಕ್ಕಳ ಕಡೆಗೆ' ರಂಗ ತರಬೇತಿ ಶಿಬಿರಕ್ಕೆ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಬಿ.ರಂಗೇಗೌಡ ಚಾಲನೆ ನೀಡಿದರು.

ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಸಲಹೆಗಾರ ಡಾ.ಎಸ್.ತುಕಾರಾಮ್ ಮಾತನಾಡಿ, ವಿದ್ಯಾರ್ಥಿಗಳು ನಿಮ್ಮ ಓದಿನ ಜೊತೆಗೆ ನಿಮ್ಮ ಮನೆಯ ಊರಿಗೆ ನೆನಪುಗಳೊಂದಿಗೆ ಕಲೆಯನ್ನು ಅಳವಡಿಸಿಕೊಳ್ಳಬೇಕು. ಕಲೆಯಿಂದ ಸಂಬಂಧಗಳು ಬೆಳೆಯುತ್ತವೆ. ಕಲೆ ನಿಮ್ಮಲ್ಲಿರುವ ಭಯ, ಅಂಜಿಕೆಯನ್ನು ಹೋಗಲಾಡಿಸುತ್ತದೆ. ಹೆಣ್ಣುಮಕ್ಕಳು ಹೆಚ್ಚು ಭಾಗವಹಿಸಿದರೆ ಸ್ವತಂತ್ರರಾಗುತ್ತೀರಿ, ಸ್ವಾಭಿಮಾನಿಗಳಾಗುತ್ತೀರಿ. ಇದು ನಿಮ್ಮ ಬೆಳವಣಿಗೆಗೆ ಕಾರಣವಾಗುತ್ತದೆ. ಒಂದು ತಿಂಗಳು ನಡೆಯುವ ಈ ತರಬೇತಿಯಲ್ಲಿ ಶ್ರದ್ಧೆಯಿಂದ ಪಾಲ್ಗೊಂಡು ದೊಡ್ಡಹುಂಡಿ ಶಾಲೆಯಲ್ಲಿ ದೊಡ್ಡವರಾಗಿ ಹೊರಬನ್ನಿರಿ ಎಂದು ಶುಭ ಕೋರಿದರು. ಈ ಸಂದರ್ಭದಲ್ಲಿ ಪ್ರಾಂಶುಪಾಲರಾದ ಹೆಚ್.ವಿ.ಹೇಮಕುಮಾರ್, ರಂಗ ತರಂಗದ ಕಲಾವಿದರಾದ ಕೆ.ಎಂ.ಕೀರ್ತಿರಾಜ್, ಗೌರಿಶಂಕರ್, ವೆಂಕಟೇಶ್, ಸಂಜೀವಿನಿರಾವ್ ಇದ್ದರು. ದೈಹಿಕ ಶಿಕ್ಷಕ ಶಿವಪ್ರಕಾಶ್ ವಂದಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ನಾಳೆ ಗಂಗೋತ್ರಿ ಕ್ಲಾಕ್ ಟವರ್ ಬಳಿ ಕೋರೆಗಾಂವ್ ವಿಜಯೋತ್ಸವ

ಮೈಸೂರು,ಡಿ.31(ಎಂಟಿವೈ)– ಮೈಸೂರು ವಿಶ್ವವಿದ್ಯಾನಿಲಯದ ಗಂಗೋತ್ರಿ ಕ್ಲಾಕ್ ಟವರ್ ಬಳಿ ಜ.2ರಂದು ಸಂಜೆ 4.30ಕ್ಕೆ ಕೋರೆಗಾಂವ್ ವಿಜಯೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ದಲಿತ ವಿದ್ಯಾರ್ಥಿ ಪರಿಷತ್ ಅಧ್ಯಕ್ಷ ವಿಶ್ವಪ್ರಸಾದ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಲಿತ ವಿದ್ಯಾರ್ಥಿ ಪರಿಷತ್, ದಲಿತ ಸಾಹಿತ್ಯ ಪರಿಷತ್ ಸಂಯುಕ್ತಾಶ್ರಯದಲ್ಲಿ ಕೋರೆಗಾಂವ್ ವಿಜಯೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, 1818ರಲ್ಲಿ ಮಹಾರಾಷ್ಟ್ರದ ಕೋರೆಗಾಂವ್ ಬಳಿ ಮಹಾರ್ ಸಮುದಾಯದವರು ಯುದ್ಧದಲ್ಲಿ ಜಯಗಳಿಸಿದುದರ ಮಹತ್ವವನ್ನು ಡಾ.ಬಿ.ಆರ್. ಅಂಬೇಡ್ಕರ್ ವಿವರಿಸಿದ್ದಾರೆ. ಅದು ಸಾಮ್ರಾಜ್ಯಶಾಹಿ ವಿರುದ್ಧದ ಯುದ್ಧವಾಗಿರದೇ ಅಂದಿನ ಜಡ್ಡುಗಟ್ಟಿದ ವ್ಯವಸ್ಥೆ, ಶೋಷಿತರ ಮೇಲಿನ ದೌರ್ಜನ್ಯದ ವಿರುದ್ಧ ಜಯಗಳಿಸಿದುದೂ ಆಗಿದೆ. ಹೀಗಾಗಿ ವಿಜಯೋತ್ಸವ ಆಯೋಜಿಸಲಾಗಿದೆ ಎಂದರು.

ಈ ವಿಜಯೋತ್ಸವ ಕಾರ್ಯಕ್ರಮದ ಸಾನಿಧ್ಯವನ್ನು ಉರಿಲಿಂಗಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ ವಹಿಸುವರು, ಖ್ಯಾತ ನಟ ದುನಿಯಾ ವಿಜಯ್ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಪಾಲ್ಗೊಳ್ಳುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕುಲಸಚಿವ (ಪರೀಕ್ಷಾಂಗ) ಪ್ರೊ.ನಾಗರಾಜು ವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಅಪಾರ ಸಂಖ್ಯೆಯಲ್ಲಿ ದಲಿತ ಸಮುದಾಯದ ವಿದ್ಯಾರ್ಥಿಗಳು ಹಾಗೂ ನೌಕರರು ಪಾಲ್ಗೊಳ್ಳಲಿದ್ದಾರೆ. ಗೋಷ್ಠಿಯಲ್ಲಿ ಮುಖಂಡರಾದ ಲಿಂಗರಾಜು, ಶಿವಶಂಕರ್, ರಾಜು ಇತರರಿದ್ದರು.

ಕೋಗಿಲು ಲೇಔಟ್ ನಿರಾಶ್ರಿತರಿಗೆ ತರಾತುರಿಯಲ್ಲಿ ಪುನರ್ವಸತಿ

ಆದರೆ! ಸಿಎಂ ತವರಿನ ಗುಡಿಸಲು ವಾಸಿಗಳಿಗಿಲ್ಲ ಆಶ್ರಯ ಭಾಗ್ಯ





● ಚಾಮುಂಡೇಶ್ವರಿ ಕೊಳಚೆ ಪ್ರದೇಶ ಮುಕ್ತ ಕ್ಷೇತ್ರ: ಚಾಮರಾಜ, ಕೃಷ್ಣರಾಜ ಕ್ಷೇತ್ರದಲ್ಲಿ 106; ನರಸಿಂಹರಾಜ ಕ್ಷೇತ್ರದಲ್ಲಿ 22 ಕೊಳಚೆ ಪ್ರದೇಶ ● ಗುಡಿಸಲು ವಾಸಿಗಳ ಪಾಡು ಹೇಳತೀರದು

ಮೈಸೂರು, ಡಿ.31(ಬಿಎಲ್‌ಯು)– ಬೆಂಗಳೂರಿನ ಕೋಗಿಲು ಲೇಔಟ್ ನಿರಾಶ್ರಿತರಿಗೆ ಕೇವಲ ಮೂರ್ನಾಲ್ಕು ದಿನಗಳಲ್ಲಿ ಮನೆ ನೀಡುವ ಮಹತ್ವದ ನಿರ್ಧಾರವನ್ನು ರಾಜ್ಯ ಸರ್ಕಾರ ಕೈಗೊಂಡಿದೆ. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಜಿಲ್ಲೆ ಮೈಸೂರಿನಲ್ಲಿ ಸಾವಿರಾರು ಗುಡಿಸಲುಗಳಿದ್ದು, ಸೂರಿಗಾಗಿ ಹಲವು ವರ್ಷಗಳಿಂದ ಚಾತಕ ಪಕ್ಷಿಗಳಂತೆ ಕಾಯುತ್ತಿದ್ದಾರೆ. ತವರು ಜಿಲ್ಲೆಯ ಜನರ ನೆರವಿಗೆ ಬಾರದ ಸಿದ್ದರಾಮಯ್ಯ, ವಲಸಿಗರ ಮೇಲೆ ಪ್ರೀತಿ ತೋರಿರುವುದಕ್ಕೆ ಆಕ್ರೋಶ ವ್ಯಕ್ತವಾಗಿದೆ.

ಹೊಸ ವರ್ಷದ ವೇಳೆಗೆ ಕೋಗಿಲು ಲೇಔಟ್ ನಿರಾಶ್ರಿತರಿಗೆ ಬೆಂಗಳೂರಿನ ಬೈಯಪ್ಪನಹಳ್ಳಿಯಲ್ಲಿ ಮನೆ ನೀಡುವುದಾಗಿ ಸಿದ್ದರಾಮಯ್ಯ ಘೋಷಣೆ ಮಾಡಿದ್ದಾರೆ. ಮೈಸೂರಿನ ಗುಡಿಸಲು ವಾಸಿಗಳು ಪುನರ್ವಸತಿ ಕಲ್ಪಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮೈಸೂರಿಗೆ ಬಂದಾಗ ಲೆಲ್ಲಾ ಮನವಿ ಸಲ್ಲಿಸುತ್ತಾ ಬಂದಿದ್ದಾರೆ. ಆದರೆ, ಇದಕ್ಕೆ ಸಕರಾತ್ಮಕವಾಗಿ ಸ್ಪಂದಿಸದ ಸಿದ್ದರಾಮಯ್ಯ, ಈಗ ಕೇವಲ ಮೂರ್ನಾಲ್ಕು ದಿನಗಳಲ್ಲಿ ಕೋಗಿಲು ಲೇಔಟ್ ನಿರಾಶ್ರಿತರಿಗೆ ಮನೆ ಭಾಗ್ಯ ಕಲ್ಪಿಸಿ, ಧಾರಾಳತನ ಪ್ರದರ್ಶಿಸುತ್ತಿದ್ದಾರೆ.

ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹಾಗೂ ಹೈಕಮಾಂಡ್ ಪ್ರಭಾವಿ ನಾಯಕ, ಕೇರಳದವರೇ ಆದ ಕೆ.ಸಿ. ವೇಣುಗೋಪಾಲ್ ಅವರ ಸೂಚನೆಗೆ ತಡಬಡಾಯಿಸಿ, ಸಿದ್ದರಾಮಯ್ಯ ಅವರು ಕೋಗಿಲು ಬಡಾವಣೆಯ ನಿರಾಶ್ರಿತರಿಗೆ ಸೂರು ನೀಡುತ್ತಿದ್ದಾರೆ.

> ನರ್ಮ್ ಯೋಜನೆಯಡಿ ಮೈಸೂರನ್ನು ಸ್ಲಂ ಮುಕ್ತ ನಗರವಾಗಿಸುವ ಕನಸಿನ ಯೋಜನೆ ಹಳ್ಳ ಹಿಡಿದಿದೆ. ಕೊಳಚೆ ಪ್ರದೇಶದಲ್ಲಿ ವಾಸ ಮಾಡುತ್ತಿದ್ದವರಿಗೆ ಒಂದು ಕಡೆ ಪುನರ್ವಸತಿ ಕಲ್ಪಿಸುತ್ತಾ ಹೋದಂತೆ, ಮತ್ತೊಂದು ಕಡೆ ಗುಡಿಸಲುಗಳು ನಾಯಿ ಕೊಡಗಳಂತೆ ತಲೆ ಎತ್ತುತ್ತಿವೆ.

ಮೈಸೂರಿನ ಹಲವು ಬಡಾವಣೆಗಳಲ್ಲಿ ತಲೆ ಎತ್ತಿರುವ ಗುಡಿಸಲು ವಾಸಿಗಳ ಸ್ಥಿತಿ ಹೇಳ ತೀರದಾಗಿದೆ. ಕುಡಿಯುವ ನೀರು, ವಿದ್ಯುತ್, ರಸ್ತೆ ಸೇರಿದಂತೆ ಯಾವುದೇ ಮೂಲ ಸೌಕರ್ಯಗಳಿಲ್ಲದೆ ಕಿಷ್ಕಿಂಧೆಯಲ್ಲಿ ವಾಸ ಮಾಡುತ್ತಿದ್ದಾರೆ.

ಮೈಸೂರಿನ ಚಾಮರಾಜ ಹಾಗೂ ಕೃಷ್ಣರಾಜ ಕ್ಷೇತ್ರದಲ್ಲಿ 106 ಕೊಳಚೆ ಪ್ರದೇಶಗಳಿವೆ. ನರಸಿಂಹರಾಜ ಕ್ಷೇತ್ರದಲ್ಲಿ 22 ಕೊಳಚೆ ಪ್ರದೇಶಗಳಿವೆ. ಆದರೆ ಚಾಮುಂಡೇಶ್ವರಿ ಕ್ಷೇತ್ರದಲ್ಲಿದ್ದ ಗುಡಿಸಲು ವಾಸಿಗಳಿಗೆ ಪುನರ್ವಸತಿ ಕಲ್ಪಿಸಿದ್ದು, ಮತ್ತೆ ಗುಡಿಸಲುಗಳು ತಲೆ ಎತ್ತದಂತೆ ಅಧಿಕಾರಿಗಳು ಕಡಿವಾಣ ಹಾಕಿದ್ದಾರೆ. ಇದರಿಂದ ಚಾಮುಂಡೇಶ್ವರಿ ಕ್ಷೇತ್ರ ಗುಡಿಸಲು ಮುಕ್ತವಾಗಿದೆ.

ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಒಂದೇ ಒಂದು ಗುಡಿಸಲು ಹಾಕಿಕೊಳ್ಳಲು ಅವಕಾಶ ನೀಡದೆ, ಸ್ಲಂ ಮುಕ್ತ ನಗರವಾಗಿಸಬೇಕೆಂದು ಕೇಂದ್ರ ಸರ್ಕಾರದ ನರ್ಮ್ ಯೋಜನೆಯಲ್ಲಿ ಅನುದಾನ ನೀಡಲಾಯಿತು. ನರ್ಮ್ ಯೋಜನೆ ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ಮೈಸೂರು ನಗರ ಹಾಗೂ ಜಿಲ್ಲೆಯಲ್ಲಿ 115 ಕೊಳಚೆ ಪ್ರದೇಶಗಳಿವೆ ಎಂದು ಕೊಳಚೆ ನಿರ್ಮೂಲನಾ ಮಂಡಳಿ ಘೋಷಣೆ ಮಾಡಿತು. 115 ಕೊಳಚೆ ಪ್ರದೇಶದಲ್ಲಿ 19.500 ಕುಟುಂಬಗಳ 81,782 ಜನರು ವಾಸವಾಗಿದ್ದರು.

> ಸಿದ್ದರಾಮಯ್ಯ ಅವರು ಮನಸ್ಸು ಮಾಡಿದರೆ ಮೈಸೂರಿನ ಎಲ್ಲಾ ಗುಡಿಸಲು ವಾಸಿಗಳಿಗೆ ಪುನರ್ವಸತಿ ಕಲ್ಪಿಸಬಹುದು. ಈ ಮೂಲಕ ಮೈಸೂರನ್ನು ಕೊಳಚೆ ಮುಕ್ತ ನಗರವಾಗಿಸಬಹುದು.

ಇವರಿಗೆ ಮನೆ ನಿರ್ಮಾಣ ಮಾಡಿದರೆ ಮೈಸೂರು ಕೊಳಚೆ ಮುಕ್ತ ನಗರವಾಗಲಿದೆ ಎಂದು ಸರ್ಕಾರ ಯೋಜನೆ ರೂಪಿಸಿತು. ಕೇಂದ್ರ ಸರ್ಕಾರದ ನರ್ಮ್ ಯೋಜನೆಯಿಂದ ಮೈಸೂರಿನ ಮಹದೇವಪುರ, ಬನ್ನಿಮಂಟಪ, ಸಾತಗಳ್ಳಿ ಸೇರಿದಂತೆ ನಗರದ ಹೈವೇ ವೃತ್ತದ ಬಳಿ 6,328 ಮನೆಗಳನ್ನು ಮಂಜೂರು ಮಾಡಿ ಸ್ವಾಧೀನಕ್ಕೆ ನೀಡಲಾಯಿತು.

ಈಗ ಎಲ್ಲಾ ಗುಡಿಸಲು ವಾಸಿಗಳಿಗೆ ಪುನರ್ವಸತಿ ಕಲ್ಪಿಸಲಾಗಿದೆ. ಮುಂದೆ ಒಂದೇ ಒಂದು ಗುಡಿಸಲು ಕೂಡ ತಲೆ ಎತ್ತಬಾರದು. ಏನಾದರು ಗುಡಿಸಲುಗಳು ನಿರ್ಮಾಣವಾದರೆ ಕೊಳಚೆ ನಿರ್ಮೂಲನಾ ಮಂಡಳಿಯ ಅಧಿಕಾರಿಗಳೇ ಜವಾಬ್ದಾರರು ಎಂದು ಸರ್ಕಾರ ಎಚ್ಚರಿಕೆ ನೀಡಿತು.

ಆದರೆ ಸರ್ಕಾರದ ಎಚ್ಚರಿಕೆಗೆ ಅಧಿಕಾರಿಗಳು ಡೋಂಟ್ ಕೇರ್ ಎಂದರು. ಅಧಿಕಾರಿಗಳ ಬೇಜವಾಬ್ದಾರಿಯಿಂದ ಮೈಸೂರಿನ ಬನ್ನಿಮಂಟಪ, ಗೌಸಿಯಾನಗರ, ಸಾತಗಳ್ಳಿ ಸೇರಿದಂತೆ ನಗರದ ಇತರೆಡೆ ಗುಡಿಸಲು ನಿರ್ಮಾಣವಾಗಿ ಅವು ಕೊಳಚೆ ಪ್ರದೇಶವಾಗಿ ಪರಿವರ್ತನೆಗೊಂಡಿದೆ.

ಹೊಸ ಪೀಳಿಗೆಗೆ ರಾಷ್ಟ್ರಕವಿ ಕುವೆಂಪು ಅವರ ಸಮಾಜಮುಖಿ ಚಿಂತನೆ ತಿಳಿಸುವುದು ಅಗತ್ಯ

'ನವೋದಯ ಸಂದರ್ಭ; ಕನ್ನಡ ಕಾವ್ಯದ ಅನನ್ಯತೆ' ಕುರಿತ ವಿಚಾರ ಸಂಕಿರಣದ ಸಮಾರೋಪದಲ್ಲಿ ಪ್ರೊ.ಹೆಚ್.ಪಿ.ಜ್ಯೋತಿ ಇಂಗಿತ



ಮಾನಸಗಂಗೋತ್ರಿಯ ಬಿಎಂಶ್ರೀ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ಪ್ರೊ.ಲೋಲಾಕ್ಷಿ ಮಾತನಾಡಿದರು.

ಮೈಸೂರು,ಡಿ.31(ಪಿಎಂ)– ರಾಷ್ಟ್ರಕವಿ ಕುವೆಂಪು ಅವರ ಆದರ್ಶ, ಸಮಾಜ ಮುಖಿ ಚಿಂತನೆಗಳು ಹಾಗೂ ಈ ಹಿನ್ನೆಲೆಯಲ್ಲಿ ಅವರು ನೀಡಿದ ಅಪಾರ ಸಾಹಿತ್ಯಕ ಕೊಡುಗೆಗಳ ಬಗ್ಗೆ ಹೊಸ ಪೀಳಿಗೆಗೆ ತಿಳಿಸುವುದು ಅಗತ್ಯ ಎಂದು ಮೈಸೂರು ವಿವಿಯ ಮಾಳವೀಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದ (ಎಂಎಂಟಿಟಿಸಿ) ನಿರ್ದೇಶಕಿ ಪ್ರೊ.ಹೆಚ್.ಪಿ.ಜ್ಯೋತಿ ಹೇಳಿದರು.

ಮೈಸೂರಿನ ಮಾನಸ ಗಂಗೋತ್ರಿಯ ಬಿಎಂಶ್ರೀ ಸಭಾಂಗಣದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಹಾಗೂ ಕುವೆಂಪು ಕಾವ್ಯಾಧ್ಯಯನ ಪೀಠದ ಜಂಟಿ ಆಶ್ರಯದಲ್ಲಿ 'ವಿಶ್ವಮಾನವ ದಿನ; ಕುವೆಂಪು ಹುಟ್ಟುಹಬ್ಬದ ಸಂಭ್ರಮ'ದ ಪ್ರಯುಕ್ತ 'ನವೋದಯ ಸಂದರ್ಭ; ಕನ್ನಡ ಕಾವ್ಯದ ಅನನ್ಯತೆ' ಕುರಿತಂತೆ ಎರಡು ದಿನಗಳು ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ಅವರು ಮಾಡಿದರು.

ವಿಚಾರ ಸಂಕಿರಣದಲ್ಲಿ ಪ್ರತಿಯೊಬ್ಬ ನವೋದಯ ಕವಿಗಳ ಸಾಹಿತ್ಯಕ ವಿಚಾರಗಳ ಅನಾವರಣಗೊಳಿಸುವ ಮೂಲಕ ಅವರ ಸ್ಮರಣೆಯನ್ನು ಮಾಡಲಾಗಿದೆ. ಕುವೆಂಪು ಅವರ ವಿದ್ವತ್ ಹಾಗೂ ಜ್ಞಾನ ಅಪಾರ. ಅವರು ತಮ್ಮ ಸಾಮಾಜಿಕ ಕಳಕಳಿ ಮೂಲಕ ಕನ್ನಡ ಸಾಹಿತ್ಯ ಲೋಕಕ್ಕೆ ಅನನ್ಯ ಕೊಡುಗೆ ನೀಡಿದ್ದಾರೆ ಎಂದು ಸ್ಮರಿಸಿದರು.

ಅಧ್ಯಕ್ಷತೆ ವಹಿಸಿದ್ದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಪ್ರೊ.ಎನ್.ಕೆ. ಲೋಲಾಕ್ಷಿ ಮಾತನಾಡಿ, ನಮ್ಮ ಸಮಾಜದ ಎಲ್ಲರೂ ಕುವೆಂಪು ಅವರನ್ನು ಸಂಪೂರ್ಣ ಅನುಸರಿಸಿದರೆ ಇಡೀ ಸಮಾಜ ವೈಚಾರಿಕ ನೆಲೆಯೊಂದಿಗೆ ಸಂತೃಪ್ತವಾಗಿ ಕೂಡಿರಲಿದೆ. ಇದನ್ನು ನಾವು ಮನಗಾಣಬೇಕು. ಸಂಪೂರ್ಣವಾಗಿ ಅವರ ಆದರ್ಶಗಳನ್ನು ನಾವು ಪಾಲಿಸಲು ಸಾಧ್ಯವಿಲ್ಲವೆಂದರೂ ಸಾಧ್ಯವಿದ್ದಷ್ಟು ಅವರ ತತ್ವ ಸಿದ್ಧಾಂತಗಳಂತೆ ನಡೆಯುವ ಸಂಕಲ್ಪ ಮಾಡಬೇಕು. ಇದರಿಂದ ಸ್ವಾಸ್ಥ್ಯ ಸಮಾಜ ನಿರ್ಮಾಣವಾಗಲು ಸಾಧ್ಯವಾಗಲಿದೆ ಎಂದು ಹೇಳಿದರು.

ಇದೇ ವೇಳೆ ವಿಚಾರ ಸಂಕಿರಣದಲ್ಲಿ ಪಾಲ್ಗೊಂಡಿದ್ದವರಿಗೆ ಪ್ರಮಾಣಪತ್ರ ನೀಡಲಾಯಿತು. ವನ್ಯಜೀವಿ ಛಾಯಾಗ್ರಾಹಕ ಕೃಪಾಕರ, ಕುವೆಂಪು ಕಾವ್ಯಾಧ್ಯಯನ ಪೀಠದ ಸಂದರ್ಶಕ ಪ್ರಾಧ್ಯಾಪಕ ಪ್ರೊ.ಕೆ.ಸಿ. ಶಿವಾರೆಡ್ಡಿ ಮತ್ತಿತರರು ಹಾಜರಿದ್ದರು.

ಡಾ.ವಿಷ್ಣು–ಅಂಬಿ ಸ್ನೇಹ ಇಂದಿನ ಯುವ ಜನಾಂಗಕ್ಕೆ ಮಾದರಿ

ವಿಷ್ಣು ಪುಣ್ಯ ಸ್ಮರಣೆ ಅಂಗವಾಗಿ ನೂರೊಂದು ನೆನಪು ಸಂಗೀತ ಸಂಜೆ



ಮೈಸೂರು ದಸರಾ ವಸ್ತುಪ್ರದರ್ಶನದ ಪಿ.ಕಾಳಿಂಗರಾವ್ ಗಾನಮಂಟಪದಲ್ಲಿ ನಟ ಡಾ.ವಿಷ್ಣುವರ್ಧನ್ ಅವರ 16ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಆಯೋಜಿಸಿದ್ದ 'ನೂರೊಂದು ನೆನಪು' ಸಂಗೀತ ಸಂಜೆ ಕಾರ್ಯಕ್ರಮಕ್ಕೆ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಚಾಲನೆ ನೀಡಿದರು.

ಮೈಸೂರು, ಡಿ.31(ಜಿಎ)– ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಸಾಂಸ್ಕೃತಿಕ ಸಮಿತಿ ವತಿಯಿಂದ ಪಿ. ಕಾಳಿಂಗರಾವ್ ಗಾನಮಂಟಪದಲ್ಲಿ ನಟ ಡಾ. ವಿಷ್ಣುವರ್ಧನ್ ಅವರ 16ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಆಯೋಜಿಸಿದ್ದ 'ನೂರೊಂದು ನೆನಪು' ಸಂಗೀತ ಸಂಜೆ ಕಾರ್ಯಕ್ರಮಕ್ಕೆ ಮುಡಾ ' ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಚಾಲನೆ ನೀಡಿದರು,

ನಂತರ ಮಾತನಾಡಿದ ಅವರು, ಸಾಹಸಸಿಂಹ ಡಾ.ವಿಷ್ಣುವರ್ಧನ್ ಮತ್ತು ರೆಬಲ್ ಸ್ಟಾರ್ ಅಂಬರೀಶ್ ಸ್ನೇಹ ಪ್ರಸ್ತುತ ಯುವಜನಾಂಗಕ್ಕೆ ಮಾದರಿಯಾಗಿದೆ. ಸ್ನೇಹಕ್ಕೆ ಯಾವುದೇ ಜಾತಿ, ಧರ್ಮ, ಭಾಷೆ ಅಡ್ಡಿಬರುವುದಿಲ್ಲ ಎನ್ನುವ ಸಂದೇಶ ಸಾರಿದ ವಿಷ್ಣು–ಅಂಬಿ ಜೋಡಿಯ ದಿಗ್ಗಜರು ಚಿತ್ರ ವಿಶ್ವದೆಲ್ಲೆಡೆ ಲಕ್ಷಾಂತರ ಯುವ ಮನಸ್ಸುಗಳನ್ನ ಸೇರಿಸುವ ಪ್ರಯತ್ನದಲ್ಲಿ ಗೆದ್ದಿದೆ. ಅವರಿಬ್ಬರು ಚಿತ್ರರಂಗಕ್ಕೆ ಬರುವ ಮೊದಲು ಹೆಚ್ಚು ಕಾಲಕಳೆದು ಬೆಳೆದದ್ದು ನಮ್ಮ ಚಾಮುಂಡಿಪುರಂ ಭಾಗದಲ್ಲಿ ಎನ್ನುವ ಮಾತು ಅವರಲ್ಲಿ ಸದಾ ಹೆಮ್ಮೆಯಿಂದ ಕೇಳಿಬರುತ್ತಿದ್ದವು ಎಂದರು.

ವಿಷ್ಣುವರ್ಧನ್ ಅವರ ಬಹತೇಕ ಚಿತ್ರಗಳು ಸಮಾಜವನ್ನು ಒಗ್ಗೂಡಿಸುವ ಸಂದೇಶ ಸಾರಿದೆ. ಅಶಕ್ತರಿಗೆ ನೆರವು ಮತ್ತು ಆತ್ಮಸ್ಥೈರ್ಯ ತುಂಬುವ ಕೆಲಸದ ಕಡೆ ಸದಾ ಚಿಂತಿಸುತ್ತಿದ್ದ ಡಾ.ವಿಷ್ಣುವರ್ಧನ್ ಅವರು ಚಿತ್ರದಿಂದ ಬರುವ ಸಂಭಾವನೆಯನ್ನು ಸಮಾಜ ಸೇವೆಗಾಗಿ ಮುಡಿಪಾಗಿಟ್ಟಿದ್ದರು, ಸಂಘ–ಸಂಸ್ಥೆಗಳು ಸಮಾಜ ಕಟ್ಟುವ ಕಾರ್ಯಕ್ಕೆ ಸದಾ ಪ್ರೇರಣೆಯಾಗಿದ್ದಾರೆ. ಮುಖ್ಯ ಮಂತ್ರಿಗಳಾದ ಸಿದ್ದರಾಮಯ್ಯ ಅವರು ಕಳೆದ ಅವಧಿಯಲ್ಲಿ ಮೈಸೂರಿನಲ್ಲಿ ವಿಷ್ಣು ಸ್ಮಾರಕಕ್ಕೆ ಜಾಗವನ್ನು ನೀಡಿದ್ದರು ಈ ಬಾರಿ 'ಕರ್ನಾಟಕರತ್ನ' ನೀಡಿದ್ದು ಕೋಟ್ಯಾಂತರ ಕನ್ನಡಿಗರಿಗೆ ಖುಷಿ ತಂದ ವಿಚಾರವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಮೈಸೂರು ಆರ್ಟಿಸ್ಟ್ ಅಸೋಸಿಯೇಷನ್ ಕಲಾವಿದರಿಂದ ನೂರೊಂದು ನೆನಪು ಸಂಗೀತ ಸಂಜೆ ಪ್ರದರ್ಶನ ಸೊಗಸಾಗಿ ಮೂಡಿಬಂದಿತು. ತಬಲವಾದನದಲ್ಲಿ ರಘುನಾಥ್, ರಿದಂಪ್ಯಾಡ್ ಗುರುದತ್, ಡೋಲಕ್ ಪ್ರದೀಪ್, ಕೀಬೋರ್ಡ್ ನಾಗಲಿಂಗಾಚಾರ್ ಪಕ್ಕವಾದ್ಯದಲ್ಲಿದ್ದರು, ಗಾಯನದಲ್ಲಿ ಅನಿಲ್, ಡಾ. ರೇಖಾ ಅರುಣ್, ಗುರುರಾಜ್, ಸೋಮು, ಶೃತಿ, ಪಾವನ, ಪರಮೇಶ್ ಗೀತೆಗಳನ್ನು ಪ್ರಸ್ತುತಪಡಿಸಿದರು.

ಈ ಸಂದರ್ಭದಲ್ಲಿ ಪಾಲಿಕೆ ಮಾಜಿ ಸದಸ್ಯ ಎಂ.ಡಿ. ಪಾರ್ಥಸಾರಥಿ, ರಘುರಾಜೇ ಅರಸ್, ಕಾಂಗ್ರೆಸ್ ಯುವ ಮುಖಂಡ ಜಿ.ರಾಘವೇಂದ್ರ, ಸಾಂಸ್ಕೃತಿಕ ಸಮಿತಿಯ ಅಧ್ಯಕ್ಷ ಮಲ್ಲಿಕಾರ್ಜುನಸ್ವಾಮಿ, ಕಾರ್ಯಾಧ್ಯಕ್ಷ ಪ್ರಕಾಶ್, ಉಪಾಧ್ಯಕ್ಷ ರಂಗಸ್ವಾಮಿ ಪಾಪು, ಮೆಲ್ಲಹಳ್ಳಿ ರಾಜೇಶ್ ಗೌಡ, ಶಿವಲಿಂಗಯ್ಯ, ಪದ್ಮನಾಭ ಗುಂಡಣ್ಣ, ನಾಸೀರ್ ಖಾನ್, ಮನ್ಸೂರ್ ಅಲಿ, ರೇಷ್ಮಾ ಭಾನು, ನಿರೂಪಕ ಅಜಯ್ ಶಾಸ್ತ್ರಿ, ಕರುಣಾಮಯಿ ವಿಷ್ಣು ಅಭಿಮಾನಿ ಬಳಗದ ಅಧ್ಯಕ್ಷ ಎಸ್.ಎನ್.ರಾಜೇಶ್, ಕನಕ ಪತ್ತಿನ ಸಹಕಾರಿ ಸಂಘದ ನಿರ್ದೇಶಕ ರವಿಚಂದ್ರ, ಹರೀಶ್ ನಾಯ್ಡು, ಅಮಿತ್, ಮಹಿಳಾ ಅಧ್ಯಕ್ಷೆ ಭವ್ಯ, ಮಹೇಂದ್ರ ಕಾಗಿನಲೆ, ಜಯಲಕ್ಷ್ಮಿ, ಶುಭಪಲ್ಲವಿ, ಹರೀಶ್‌ಗೌಡ, ಪ್ರಶಾಂತ್, ಶ್ರೀಕಾಂತ್, ಶಿವರುದ್ರ ಯೋಗೀಶ್, ಗುರುರಾಜ್, ಸುಬ್ರಹ್ಮಣ್ಯ, ಘಂಟಯ್ಯ ಮತ್ತಿತರರು ಉಪಸ್ಥಿತರಿದ್ದರು.

2025 ಸಾಲಿನಲ್ಲಿ ಮೈಸೂರು ನಗರದಲ್ಲಿ 2467 ಅಪರಾಧ ಪ್ರಕರಣ ದಾಖಲು

ಮೈಸೂರು: ಕಳ್ಳತನ, ಸುಲಿಗೆ, ಹತ್ಯೆ, ಅತ್ಯಾಚಾರ, ನಾಪತ್ತೆ, ಮಾದಕ ವಸ್ತು ಮಾರಾಟ ಮತ್ತು ಸೇವನೆ ಇನ್ನಿತರ ಅಪರಾಧಗಳ ಸಂಬಂಧ ಮೈಸೂರು ನಗರದಲ್ಲಿ 2025ರಲ್ಲಿ ಸುಮಾರು ಎರಡೂವರೆ ಸಾವಿರ ಪ್ರಕರಣ ದಾಖಲಾಗಿವೆ.

ನಗರ ಪೊಲೀಸ್ ಕಾರ್ಯವ್ಯಾಪ್ತಿಯ (ಮಹಿಳಾ ಠಾಣೆ ಹೊರತಾಗಿ) ಕಾನೂನು–ಸುವ್ಯವಸ್ಥೆ ಪೊಲೀಸ್ ಠಾಣೆಗಳಲ್ಲಿ ಡಿ.29ರವರೆಗೆ ಲಘು ಹಾಗೂ ಗಂಭೀರ ಪ್ರಕರಣ ಸೇರಿ 2,467 ಎಫ್‌ಐಆರ್ ದಾಖಲಾಗಿವೆ. ನಗರದ 5 ಸಂಚಾರ ವಿಭಾಗದ ಪೊಲೀಸ್ ಠಾಣೆಗಳಲ್ಲಿ ಸಾವಿರಕ್ಕೂ ಹೆಚ್ಚು ಅಪಘಾತ ಪ್ರಕರಣಗಳು ವರದಿಯಾಗಿವೆ. ಇನ್ನು ಮೈಸೂರು ತಾಲೂಕು ವ್ಯಾಪ್ತಿಯ ನಾಲ್ಕು ಪೊಲೀಸ್ ಠಾಣೆಗಳಲ್ಲಿ 1,125 ಪ್ರಕರಣ ದಾಖಲಾಗಿವೆ. ವರ್ಷದ ಕಡೆಯ ಎರಡು ದಿನಗಳಲ್ಲಿ ದಾಖಲಾಗಿರುವ ಪ್ರಕರಣಗಳ ಸಂಖ್ಯೆ ಲಭ್ಯವಾಗಬೇಕಿದೆ.

ಇನ್ನು 52 ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸಿದ ಶಾಸಕ ಹರೀಶ್‌ಗೌಡ

ಮೈಸೂರು, ಡಿ.31(ಎಂಕೆ)– ಯಶೋಧ ಕೃಷ್ಣ ಚಾರಿಟಬಲ್ ಟ್ರಸ್ಟ್ ವತಿಯಿಂದ ಹೆಚ್ಚುವರಿಯಾಗಿ 52 ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್‌ಗಳನ್ನು ಶಾಸಕ ಕೆ.ಹರೀಶ್‌ಗೌಡ ಬುಧವಾರ ವಿತರಣೆ ಮಾಡಿದರು.

ಜಲದರ್ಶಿನಿ ಅತಿಥಿ ಗೃಹದಲ್ಲಿರುವ ತಮ್ಮ ಕಚೇರಿ ಸಭಾಂಗಣದಲ್ಲಿ ಲ್ಯಾಪ್‌ಟಾಪ್‌ಗಾಗಿ ಹೊಸದಾಗಿ ಅರ್ಜಿಸಲ್ಲಿಸಿದ್ದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸಿ, ಉನ್ನತ ವಿದ್ಯಾಭ್ಯಾಸ ಮಾಡುವಂತೆ ಶುಭ ಕೋರಲಾಯಿತು.



ಶಾಸಕ ಕೆ.ಹರೀಶ್‌ಗೌಡರು ಹೆಚ್ಚುವರಿಯಾಗಿ 52 ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್ ವಿತರಣೆ ಮಾಡಿದರು.


ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಕೆ.ಹರೀಶ್‌ಗೌಡರು, ಯಶೋಧ ಕೃಷ್ಣ ಚಾರಿಟಬಲ್ ಟ್ರಸ್ಟ್ ವತಿಯಿಂದ ಕಳೆದ ತಿಂಗಳಷ್ಟೇ 350 ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ ಮಾಡಲಾಗಿತ್ತು. ಲ್ಯಾಪ್‌ಟಾಪ್ ವಿತರಣೆ ಬಳಿಕವೂ ಅರ್ಜಿ ಸಲ್ಲಿಸಿದ್ದ ಬಾಕಿ 52 ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ ಮಾಡಲಾಗಿದೆ ಎಂದು ಹೇಳಿದರು.

ಈ ವೇಳೆ ನಗರಪಾಲಿಕೆ ಮಾಜಿ ಸದಸ್ಯ ಜೆ.ಗೋಪಿ, ಇಂದಿರಾಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ಮುಖಂಡ ರವಿಕುಮಾರ್, ವಕೀಲೆ ತನುಜಾ ಮಹೇಶ್ ಹಾಗೂ ವಿದ್ಯಾರ್ಥಿಗಳು, ಪೋಷಕರು ಉಪಸ್ಥಿತರಿದ್ದರು.

ದೇಶ - ವಿದೇಶ

ಬಾಂಗ್ಲಾ ನಾಯಕ ಉಸ್ಮಾನ್ ಹಾದಿ ಹತ್ಯೆ ಆರೋಪಿ ದುಬೈನಲ್ಲಿ ಪ್ರತ್ಯಕ್ಷ


ದುಬೈ: ಬಾಂಗ್ಲಾದೇಶದ ವಿದ್ಯಾರ್ಥಿ ದಂಗೆಯ ನಾಯಕ



ಉಸ್ಮಾನ್ ಹಾದಿ ಹತ್ಯೆಯ ಪ್ರಮುಖ ಶಂಕಿತ ಆರೋಪಿ ಎಂದು ಹೇಳಲಾಗುತ್ತಿರುವ ಫೈಸಲ್ ಕರೀಮ್ ಮಸೂದ್ ದುಬೈನಲ್ಲಿ ಪ್ರತ್ಯಕ್ಷನಾಗಿದ್ದು, ತನ್ನ ವಿರುದ್ಧ ಕೇಳಿ ಬಂದಿರುವ ಆರೋಪ ಸಂಬಂಧ ವೀಡಿಯೊ ಬಿಡುಗಡೆ ಮಾಡಿ ಸ್ಪಷ್ಟನೆ ನೀಡಿದ್ದಾನೆ. ವಿದೇಶದಿಂದ ವೀಡಿಯೊ ಸಂದೇಶವನ್ನು ಬಿಡುಗಡೆ ಮಾಡಿರುವ ಆರೋಪಿ, ತಾನು ದುಬೈನಲ್ಲಿರುವುದಾಗಿ ಹೇಳಿದ್ದಾನೆ. ಅಲ್ಲದೆ, ಹತ್ಯೆ ಪ್ರಕರಣದಲ್ಲಿ ಯಾವುದೇ ರೀತಿಯಲ್ಲಿ ನಾನು ಭಾಗಿಯಾಗಿಲ್ಲ ಎಂದು ಹೇಳಿದ್ದಾರೆ. ಈ ಹತ್ಯೆಗೂ ನನಗೂ ಯಾವುದೇ ಸಂಬಂಧವಿಲ್ಲ. ಮಾತ್ರವಲ್ಲದೆ ಜಮಾತ್ ಶಿಬಿರ್ ಮೇಲೆ ಆರೋಪ ಹೊರಿಸಿ ಹಾದಿಯೊಂದಿಗಿನ ನನ್ನ ಸಂಬಂಧಗಳು ಕಟ್ಟುನಿಟ್ಟಾಗಿ ವ್ಯವಹಾರಕ್ಕೆ ಸಂಬಂಧಿಸಿವೆ ಎಂದು ತಿಳಿಸಿದ್ದಾನೆ. ನಾನು ಹತ್ಯೆಗೈದಿಲ್ಲ. ನನ್ನ ಕುಟುಂಬ ಮತ್ತು ನನ್ನನ್ನು ಈ ಪ್ರಕರಣದಲ್ಲಿ ಸಿಲುಕಿಸಲಾಗುತ್ತಿದೆ. ನನ್ನನ್ನು ರಕ್ಷಿಸಿಕೊಳ್ಳಲು ನಾನು ದುಬೈಗೆ ಬಂದಿದ್ದೇನೆ. ಹಾದಿ ಜಮಾತ್‌ನ ಉತ್ಪನ್ನ ಬಹುಶಃ ಇದರ ಹಿಂದೆ ಜಮಾತಿಗಳು ಇದ್ದಿರಬಹುದು ಎಂದು ಹೇಳಿದ್ದಾರೆ.

ಕಾರಿನಲ್ಲಿ 150 ಕೆಜಿ ಅಮೋನಿಯಂ ನೈಟ್ರೇಟ್ ಸಾಗಿಸುತ್ತಿದ್ದ ಇಬ್ಬರ ಬಂಧನ

ಜೈಪುರ: ಟೋಂಕ್ ಪೊಲೀಸರ ಜಿಲ್ಲಾ ವಿಶೇಷ ತಂಡ (ಡಿಎಸ್‌ಟಿ) ಬುಧವಾರ ಇಬ್ಬರು ವ್ಯಕ್ತಿಗಳನ್ನು ಬಂಧಿಸಿದ್ದು,



ಅವರ ಕಾರಿನಿಂದ 150 ಕೆಜಿ ಸ್ಫೋಟಕಗಳನ್ನು ವಶಪಡಿಸಿಕೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬಂಧಿತ ಆರೋಪಿಗಳನ್ನು ಸುರೇಂದ್ರ ಪಟ್ವಾ ಮತ್ತು ಸುರೇಂದ್ರ ಮೋಚಿ ಎಂದು ಗುರುತಿಸಲಾಗಿದ್ದು, ಇಬ್ಬರೂ ಬುಂಡಿ ಜಿಲ್ಲೆಯ ನಿವಾಸಿಗಳು ಎಂದು ಅವರು ತಿಳಿಸಿದ್ದಾರೆ. ಖಚಿತ ಮಾಹಿತಿ ಮೇರೆಗೆ ಕಾರ್ಯಾಚರಣೆ ನಡೆಸಿದ ಡಿಎಸ್‌ಟಿ, ಬರೋನಿ ಪೊಲೀಸ್ ಠಾಣೆ ಪ್ರದೇಶದಲ್ಲಿ ಕಾರೊಂದನ್ನು ತಡೆದು, ಯೂರಿಯಾ ಗೊಬ್ಬರದ ಚೀಲಗಳಲ್ಲಿ ಬಚ್ಚಿಟ್ಟಿದ್ದ ಸುಮಾರು 150 ಕೆ.ಜಿ ಅಮೋನಿಯಂ ನೈಟ್ರೇಟ್ ಅನ್ನು ವಶಪಡಿಸಿಕೊಂಡಿದೆ ಎಂದು ಡಿಎಸ್‌ಪಿ ಮೃತ್ಯುಂಜಯ್ ಮಿಶ್ರಾ ತಿಳಿಸಿದ್ದಾರೆ. ಅಮೋನಿಯಂ ನೈಟ್ರೇಟ್ ಜೊತೆಗೆ ಪೊಲೀಸರು ಸುಮಾರು 1,100 ಮೀಟರ್ ಉದ್ದದ 200 ಕಾರ್ಟ್ರಿಡ್ಜ್‌ಗಳು ಮತ್ತು ಆರು ಬಂಡಲ್ ಸುರಕ್ಷತಾ ಫ್ಯೂಸ್ ವೈರ್ ಅನ್ನು ವಶಪಡಿಸಿಕೊಂಡಿದ್ದಾರೆ.

ಅಮೆರಿಕ ಮಾಜಿ ಅಧ್ಯಕ್ಷ ಜಾನ್ ಕೆನಡಿ ಮೊಮ್ಮಗಳು ಕ್ಯಾನ್ಸರ್‌ನಿಂದ ಸಾವು


ವಾಷಿಂಗ್ಟನ್: ಅಮೆರಿಕದ ಮಾಜಿ ಅಧ್ಯಕ್ಷ ಜಾನ್



ಎಫ್. ಕೆನಡಿ ಅವರ ಮೊಮ್ಮಗಳು, ಅಮೆರಿಕದ ಪತ್ರಕರ್ತೆ ಟಟಿಯಾನಾ ತಮ್ಮ 35ನೇ ವಯಸ್ಸಿನಲ್ಲಿ ಕ್ಯಾನ್ಸರ್‌ನಿಂದ ನಿಧನರಾಗಿದ್ದಾರೆ. ನಮ್ಮ ಸುಂದರ ಟಟಿಯಾನಾ ಇಂದು ಬೆಳಗ್ಗೆ ನಿಧನರಾದರು. ಅವರು ಯಾವಾಗಲೂ ನಮ್ಮ ಹೃದಯದಲ್ಲಿ ಇರುತ್ತಾರೆ ಎಂದು ಕುಟುಂಬವು ಜೆಎಫ್‌ಕೆ ಲೈಬ್ರರಿ ಫೌಂಡೇಶನ್‌ನ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಪೋಸ್ಟ್ ಹಂಚಿಕೊಂಡಿದೆ. ಟಟಿಯಾನಾ ಅವರು ಶ್ಲೋಸ್‌ಬರ್ಗ್ ವಿನ್ಯಾಸಕ ಎಡ್ವಿನ್ ಶ್ಲೋಸ್‌ಬರ್ಗ್ ಮತ್ತು ರಾಜತಾಂತ್ರಿಕ ಕ್ಯಾರೋಲಿನ್ ಕೆನಡಿ ಅವರ ಪುತ್ರಿ. ತಾವು ಕ್ಯಾನ್ಸರ್‌ನಿಂದ ಬಳಲುತ್ತಿರುವುದಾಗಿ ಹೇಳಿಕೊಂಡಿದ್ದರು. 1 ವರ್ಷಕ್ಕಿಂತ ಕಡಿಮೆ ಅವಧಿ ವರೆಗೆ ಬದುಕಿರುತ್ತೇನೆಂದು ಇತ್ತೀಚೆಗೆ ಹೇಳಿಕೊಂಡಿದ್ದರು. ಕೀಮೋಥೆರಪಿ ಮತ್ತು ಮೂಳೆ ಮಜ್ಜೆಯ ಕಸಿ ಸೇರಿದಂತೆ ತಾನು ಪಡೆದ ಚಿಕಿತ್ಸೆಗಳನ್ನು ಸ್ಕ್ಲೋಸ್‌ಬರ್ಗ್ ವಿವರಿಸಿದ್ದರು. ಆಕೆಯ ತಾತ ಅಮೆರಿಕ ಅಧ್ಯಕ್ಷ ಕೆನಡಿ 1963ರಲ್ಲಿ ಹತ್ಯೆಗೀಡಾಗಿದ್ದರು.

ಚಲಿಸುವ ವ್ಯಾನ್‌ನಲ್ಲಿ ಮಹಿಳೆ ಮೇಲೆ 2 ಗಂಟೆ ಗ್ಯಾಂಗ್‌ರೇಪ್; ಇಬ್ಬರ ಬಂಧನ

ಫರಿದಾಬಾದ್: ಚಲಿಸುವ ವ್ಯಾನ್‌ನಲ್ಲಿ 25 ವರ್ಷದ



ವಿವಾಹಿತ ಮಹಿಳೆ ಮೇಲೆ ಎರಡು ಗಂಟೆಗಳಿಗೂ ಹೆಚ್ಚು ಸಾಮೂಹಿಕ ಅತ್ಯಾಚಾರ ನಡೆಸಿ ನಂತರ ರಸ್ತೆಗೆ ಎಸೆಯಲಾಗಿದ್ದು, ಆಕೆಯ ತಲೆಗೆ ಗಂಭೀರ ಗಾಯಗಳಾಗಿವೆ ಎಂದು ಪೊಲೀಸರು ಬುಧವಾರ ತಿಳಿಸಿದ್ದಾರೆ. ಸೋಮವಾರ ತಡರಾತ್ರಿ ವಿವಾಹಿತ ಮಹಿಳೆ ಮನೆಗೆ ಹೋಗಲು ವಾಹನಕ್ಕಾಗಿ ಕಾಯುತ್ತಿದ್ದಾಗ ಈ ಘಟನೆ ಸಂಭವಿಸಿದೆ. ವ್ಯಾನ್ ನಿಲ್ಲಿಸಿದ ಇಬ್ಬರು ಯುವಕರು ಆಕೆಯನ್ನು ಮನೆಗೆ ಬಿಡುವುದಾಗಿ ಭರವಸೆ ನೀಡಿ ವಾಹನಕ್ಕೆ ಹತ್ತಿಸಿಕೊಂಡಿದ್ದಾರೆ. ಬಳಿಕ ವಾಹನ ಗುರ್ಗಾಂವ್ ರಸ್ತೆಯ ಕಡೆಗೆ ತೆರಳಿದೆ. ಮಹಿಳೆ ಸದ್ಯ ಚಿಕಿತ್ಸೆ ಪಡೆಯುತ್ತಿದ್ದು, ಹೇಳಿಕೆ ದಾಖಲಿಸಲು ಇನ್ನೂ ಸದೃಢವಾಗಿಲ್ಲ. ಆರೋಪಿಗಳು ಉತ್ತರ ಪ್ರದೇಶ ಮತ್ತು ಮಧ್ಯಪ್ರದೇಶದವರಾಗಿದ್ದು, ಸದ್ಯ ಫರಿದಾಬಾದ್‌ನಲ್ಲಿ ವಾಸಿಸುತ್ತಿದ್ದಾರೆ. ಸದ್ಯ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದ್ದು, ಅವರು ಬಳಸುತ್ತಿದ್ದ ವ್ಯಾನ್ ಅನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

2012 ಪುಣೆ ಬಾಂಬ್ ಸ್ಫೋಟ ಆರೋಪಿ ಅನಾಮಿಕರ ಗುಂಡೇಟಿಗೆ ಬಲಿ

ಪುಣೆ: 2012ರ ಪುಣೆ ಸ್ಫೋಟ ಆರೋಪಿಯನ್ನು ಮಹಾರಾಷ್ಟ್ರದಲ್ಲಿ ಅನಾಮಿಕರು ಗುಂಡಿಕ್ಕಿ ಕೊಂದು ಹಾಕಿದ್ದಾರೆ ಎಂದು ತಿಳಿದುಬಂದಿದೆ.

2012ರ ಪುಣೆ ಸರಣಿ ಸ್ಫೋಟ ಪ್ರಕರಣದ ಆರೋಪಿಗಳಲ್ಲಿ ಒಬ್ಬನಾದ ಬಂಟಿ ಜಹಗೀರ್ದಾರ್ ಎಂಬಾತನನ್ನು ಬುಧವಾರ ಮಹಾರಾಷ್ಟ್ರದ ಅಹಲ್ಯಾನಗರ ಜಿಲ್ಲೆಯ ಶ್ರೀರಾಂಪುರ ಪಟ್ಟಣದಲ್ಲಿ ಅನಾಮಿಕರು ಗುಂಡಿಕ್ಕಿ ಕೊಂದಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

50 ವರ್ಷದ ಜಹಗೀರ್ದಾರ್ ಮಧ್ಯಾಹ್ನ 2 ಗಂಟೆ ಸುಮಾರಿಗೆ ಬೊರಾವಕೆ ಕಾಲೇಜು ರಸ್ತೆಯಲ್ಲಿರುವ ಸ್ಮಶಾನದಿಂದ ದ್ವಿಚಕ್ರ ವಾಹನದಲ್ಲಿ ಬಂದ ಮತ್ತೊಬ್ಬ ವ್ಯಕ್ತಿಯೊಂದಿಗೆ ಹಿಂತಿರುಗುತ್ತಿದ್ದಾಗ ಬೈಕ್‌ನಲ್ಲಿ ಬಂದ ಇಬ್ಬರು ಅಪರಿಚಿತ ವ್ಯಕ್ತಿಗಳು ಮೇಲೆ ದಾಳಿ ಮಾಡಿದ್ದಾರೆ.

ಗುಂಡೇಟಿನಿಂದ ತೀವ್ರ ಗಾಯಗೊಂಡ ಜಹಗೀರ್ದಾರ್ ಅವರನ್ನು ಕೂಡಲೇ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ ಅಷ್ಟು ಹೊತ್ತಿಗಾಗಲೇ ಅವರು ಸಾವನ್ನಪ್ಪಿದ್ದರು. ದಾಳಿಯ ಹಿಂದಿನ ಉದ್ದೇಶ ಇನ್ನೂ ಪತ್ತೆಯಾಗಿಲ್ಲ. ಪ್ರಕರಣದ ತನಿಖೆಗಾಗಿ ಬಹು ತಂಡಗಳನ್ನು ರಚಿಸಲಾಗಿದೆ ಮತ್ತು ತನಿಖೆ ಮುಂದುವರೆದಿದೆ ಎಂದು ಅಹಲ್ಯಾನಗರ ಪೊಲೀಸ್ ವರಿಷ್ಠಾಧಿಕಾರಿ ಸೋಮನಾಥ್ ಘಾರ್ಗೆ ತಿಳಿಸಿದ್ದಾರೆ.

ಮೈಸೂರು ಮಿತ್ರ

ಹೊಸ ವರ್ಷದ ವೇಳೆಯೇ ಹಿರಿಯ ಅಧಿಕಾರಿಗಳ ಬಡ್ತಿ, ವರ್ಗಾವರ್ಗಿ

ಮೈಸೂರು ಎಸ್ಪಿ ವಿಷ್ಣುವರ್ಧನ್ ಕೆಪಿಎ ನಿರ್ದೇಶಕ; ಡಿಸಿಪಿ ಬಿಂದುಮಣಿ ಕೊಡಗು ಎಸ್ಪಿ

- ಮಲ್ಲಿಕಾರ್ಜುನ ಬಾಲದಂಡಿ ಮೈಸೂರು ಎಸ್ಪಿ
- ಮೈಸೂರು ಡಿಸಿಪಿ ಬಿಂದುಮಣಿ ಕೊಡಗು ಎಸ್ಪಿ
- ದಕ್ಷಿಣ ವಲಯ ಡಿಐಜಿಪಿ ಡಾ.ಬೋರಲಿಂಗಯ್ಯರಿಗೆ ಐಜಿಪಿಯಾಗಿ ಮುಂಬಡ್ತಿ
- ಶ್ರೀರೂಪ, ಮುತ್ತುರಾಜ್ ಚಾಮರಾಜನಗರ ಡಿಸಿ ಹಾಗೂ ಎಸ್ಪಿ
- ಶೋಭಾರಾಣಿ ಮಂಡ್ಯ ಎಸ್ಪಿ
- ಮೈಸೂರು ನಗರ ಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸೀಫ್‌ಗೆ ಮುಂಬಡ್ತಿ


ಬೋರಲಿಂಗಯ್ಯ


ವಿಷ್ಣುವರ್ಧನ


ಬಿಂದುಮಣಿ



ಶೇಕ್ ತನ್ವೀರ್ ಆಸೀಫ್


ಶಿಲ್ಪಾನಾಗ್


ಶ್ರೀರೂಪ


ಮುತ್ತುರಾಜ್


ವೆಂಕಟರಾಜ


ಶೋಭಾರಾಣಿ


ಕವಿತಾ


ಮಲ್ಲಿಕಾರ್ಜುನ ಬಾಲದಂಡಿ

ಮೈಸೂರು, ಡಿ.31(ಬಿಎಲ್‌ಯು)– ಹೊಸ ವರ್ಷದ ಮುನ್ನಾ ದಿನವಾದ ಇಂದು ರಾಜ್ಯ ಸರ್ಕಾರ 80 ಐಎಎಸ್ ಮತ್ತು 68 ಐಪಿಎಸ್ ಅಧಿಕಾರಿಗಳಲ್ಲಿ ಹಲವರಿಗೆ ಮುಂಬಡ್ತಿ ನೀಡಿ, ಕೆಲವರನ್ನು ವರ್ಗಾವಣೆ ಮಾಡಿ ಆದೇಶ ಹೊರಡಿಸುವ ಮೂಲಕ ಇವೆರಡೂ ಇಲಾಖೆಗಳಲ್ಲೂ ಮೇಜರ್ ಸರ್ಜರಿ ಮಾಡಿದೆ.

ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ವಿಷ್ಣುವರ್ಧನ್ ಅವರಿಗೆ ಡಿಐಜಿಪಿ ಆಗಿ ಬಡ್ತಿ ನೀಡಿ, ಮೈಸೂರಿನಲ್ಲೇ ಇರುವ ಕರ್ನಾಟಕ ಪೊಲೀಸ್ ಅಕಾಡೆಮಿಯ ನಿರ್ದೇಶಕರನ್ನಾಗಿ ನಿಯುಕ್ತಿಗೊಳಿಸಲಾಗಿದೆ.

ಮಂಡ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾದ ಮಲ್ಲಿಕಾರ್ಜುನ ಬಾಳದಂಡಿ ಅವರನ್ನು ಮೈಸೂರು ಎಸ್ಪಿಯಾಗಿ ವರ್ಗಾವಣೆ ಮಾಡಿದ್ದು, ಅವರ ಸ್ಥಳಕ್ಕೆ ಬಳ್ಳಾರಿ ಎಸ್ಪಿ ಡಾ. ವಿ.ಜೆ. ಶೋಭಾರಾಣಿ ಅವರನ್ನು ನಿಯುಕ್ತಿಗೊಳಿಸಿದೆ.

ಚಾಮರಾಜನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿರುವ ಡಾ.ಬಿ.ಟಿ.ಕವಿತಾ ಅವರನ್ನು ಬೆಂಗಳೂರಿನ ಸಿಐಡಿಗೆ ವರ್ಗಾವಣೆ ಮಾಡಲಾಗಿದ್ದು, ಅವರ ಸ್ಥಳಕ್ಕೆ ಬೆಂಗಳೂರು ಮೆಟ್ರೋ ಪಾಲಿಟನ್ ಟಾಸ್ಕ್ ಫೋರ್ಸ್‌ನಲ್ಲಿದ್ದ ಎಂ. ಮುತ್ತುರಾಜ್ ಅವರನ್ನು ನಿಯುಕ್ತಿಗೊಳಿಸಲಾಗಿದೆ.

ಹಾಸನ ಎಸ್ಪಿ ಎಂ.ಎಸ್. ಮೊಹಮ್ಮದ್ ಸುಜೀತಾ ಅವರನ್ನು ಬೆಂಗಳೂರಿನ ಆಗ್ನೇಯ ವಿಭಾಗದ ಡಿಸಿಪಿಯಾಗಿ ವರ್ಗಾವಣೆ ಮಾಡಲಾಗಿದೆ. ಹಾಸನ ಜಿಲ್ಲೆಯ ಹೊಳೆನರಸೀಪುರ ಉಪ ವಿಭಾಗದ ಎಎಸ್‌ಪಿ ಶಾಲೂ ಅವರಿಗೆ ಮುಂಬಡ್ತಿ ನೀಡಿ ಸಿಐಡಿ ಎಸ್ಪಿಯಾಗಿ ವರ್ಗಾವಣೆಗೊಳಿಸಲಾಗಿದೆ.

ಮೈಸೂರಿನ ಕಾನೂನು ಮತ್ತು ಸುವ್ಯವಸ್ಥೆಯ ಡಿಸಿಪಿ ಬಿಂದುಮಣಿ ಅವರನ್ನು ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ನೇಮಕ ಮಾಡಲಾಗಿದೆ. ಅಲ್ಲಿದ್ದ ಎಸ್ಪಿಯಾಗಿದ್ದ ಕೆ.ರಾಮರಾಜನ್ ಅವರನ್ನು ಬೆಳಗಾವಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ವರ್ಗಾವಣೆ ಮಾಡಲಾಗಿದೆ.

ಮೈಸೂರಿನ ದಕ್ಷಿಣ ವಲಯ ಡಿಐಜಿಪಿ ಡಾ.ಎಂ.ಬಿ.ಬೋರಲಿಂಗಯ್ಯ ಅವರಿಗೆ ಐಜಿಪಿಯಾಗಿ ಮುಂಬಡ್ತಿ ನೀಡಿ, ಇದೇ ಸ್ಥಳದಲ್ಲಿ ಮುಂದುವರೆಸಲಾಗಿದೆ. ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಎಸ್ಪಿ ಆಗಿದ್ದ ಡಾ. ಕೆ. ಧರಣೀದೇವಿ ಅವರಿಗೆ ಮುಂಬಡ್ತಿ ನೀಡಿ, ಗುಪ್ತಚರ ಇಲಾಖೆಯ ಡಿಐಜಿಪಿ ಆಗಿ ವರ್ಗಾವಣೆ ಮಾಡಲಾಗಿದೆ. ಆಂತರಿಕ ಭದ್ರತಾ ವಿಭಾಗದ ಎಸ್ಪಿ ಆಗಿದ್ದ ಎ.ಎನ್. ಪ್ರಕಾಶ್‌ಗೌಡ ಅವರಿಗೆ ಮುಂಬಡ್ತಿ ನೀಡಿ, ವಿಶೇಷ ಕಾರ್ಯ ಪಡೆಯ ಡಿಐಜಿಪಿ ಆಗಿ ನಿಯುಕ್ತಿಗೊಳಿಸಲಾಗಿದೆ.

ಐಎಎಸ್: ಕೊಡಗು ಜಿಲ್ಲಾಧಿಕಾರಿ ವೆಂಕಟರಾಜ ಅವರನ್ನು ಸರ್ವೇ ಸೆಟಲ್‌ಮೆಂಟ್ ಮತ್ತು ಲ್ಯಾಂಡ್ ರೆಕಾರ್ಡ್ ಆಯುಕ್ತರನ್ನಾಗಿ ವರ್ಗಾವಣೆ ಮಾಡಲಾಗಿದ್ದು, ಗ್ರಾಮೀಣಾಭಿವೃದ್ಧಿ ಇಲಾಖೆಯ ಆಯುಕ್ತ ಎಸ್.ಜೆ. ಸೋಮಶೇಖರ್ ಅವರನ್ನು ಕೊಡಗು ಜಿಲ್ಲಾಧಿಕಾರಿಯಾಗಿ ವರ್ಗಾವಣೆ ಮಾಡಲಾಗಿದೆ.

ಚಾಮರಾಜನಗರ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರನ್ನು ಪಶುಪಾಲನ ಮತ್ತು ಪಶು ವೈದ್ಯಕೀಯ ಸೇವೆಗಳ ಇಲಾಖೆ ಆಯುಕ್ತರಾಗಿ ವರ್ಗಾವಣೆ ಮಾಡಿದ್ದು, ಅಲ್ಲಿದ್ದ ಶ್ರೀರೂಪ ಅವರನ್ನು ಚಾಮರಾಜನಗರ ಜಿಲ್ಲಾಧಿಕಾರಿಯಾಗಿ ನಿಯುಕ್ತಿಗೊಳಿಸಲಾಗಿದೆ. ಮೈಸೂರು ನಗರ ಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸೀಫ್ ಅವರಿಗೆ ಮುಂಬಡ್ತಿ ನೀಡಿ ಅಲ್ಲಿಯೇ ಮುಂದುವರೆಸಲಾಗಿದೆ.

ಒಂದನೇ ಪುಟದಿಂದ

ಹೊಸ ವರ್ಷ 2026ಕ್ಕೆ ಸ್ವಾಗತ

ಹೋಟೆಲ್, ರೆಸ್ಟೋರೆಂಟ್, ಕ್ಲಬ್, ರೆಸಾರ್ಟ್, ಹೋಂ ಸ್ಟೇ, ಮಾಲ್ಸ್ ಹಾಗೂ ಸಂಘ ಸಂಸ್ಥೆಗಳಲ್ಲಿ ಹೊಸ ವರ್ಷಾಚರಣೆ ವರ್ಣರಂಜಿತ ಕಾರ್ಯಕ್ರಮಗಳು ಜರುಗಿದವು. ಪೊಲೀಸ್ ಆಯುಕ್ತರ ಕಚೇರಿಯ ಅನುಮತಿಯೊಂದಿಗೆ ಇಲ್ಲಿ ನೂತನ ವರ್ಷಾಚರಣೆಗೆ ಅವಕಾಶ ಕಲ್ಪಿಸಲಾಗಿತ್ತಲ್ಲದೆ, ಮಧ್ಯರಾತ್ರಿ 1 ಗಂಟೆಯೊಳಗೆ ಕಡ್ಡಾಯವಾಗಿ ಕಾರ್ಯಕ್ರಮ ಮುಕ್ತಾಯಗೊಳಿಸಲು ಹಾಗೂ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಕ್ರಮ ವಹಿಸಲು ಷರತ್ತು ವಿಧಿಸಲಾಗಿತ್ತು.

ಅನೇಕರು ತಮ್ಮ ಮನೆಗಳ ಆವರಣದಲ್ಲೇ ರಾತ್ರಿ 12 ಗಂಟೆ ವೇಳೆಗೆ ಕೇಕ್ ಕತ್ತರಿಸಿ ಹೊಸ ವರ್ಷಾಚರಣೆಯೊಂದಿಗೆ ಪರಸ್ಪರ ಶುಭಾಷಯ ವಿನಿಮಯ ಮಾಡಿಕೊಂಡರು. ಹಲವಡೆ ಹೊಸ ವರ್ಷಾಚರಣೆ ಪ್ರಯುಕ್ತ ಖಾದ್ಯ ಸವಿರುಚಿ ಸವಿಯುವ ಜೊತೆಗೆ ಪಾನಗೋಷ್ಠಿಗಳ ಸಂಭ್ರಮವೂ ನಡೆಯಿತು. ಕ್ರಿಸ್‌ಮಸ್ ರಜೆ ಹಿನ್ನೆಲೆಯಲ್ಲಿ ವಾರದಿಂದಲೇ ಮೈಸೂರಿನತ್ತ ಪ್ರವಾಸಿಗರು ಮುಖ ಮಾಡಿದ್ದರು. ಅಂತೆಯೇ ಬುಧವಾರ ನಗರದ ಹೋಟೆಲ್‌ಗಳಲ್ಲಿ ಶೇ.95ರಷ್ಟು ರೂಂಗಳು ಪ್ರವಾಸಿಗರಿಂದ ಭರ್ತಿಯಾಗಿದ್ದವು.

ಬೆಟ್ಟಕ್ಕೆ ಪ್ರವೇಶ ನಿರ್ಬಂಧ: ಹೊಸ ವರ್ಷಾಚರಣೆ ಹಿನ್ನೆಲೆಯಲ್ಲಿ ಬುಧವಾರ ರಾತ್ರಿ 7 ಗಂಟೆ ನಂತರ ಚಾಮುಂಡಿಬೆಟ್ಟಕ್ಕೆ ಉತ್ತನಹಳ್ಳಿ ಕ್ರಾಸ್ ಗೇಟ್, ದೈವಿವನ ಗೇಟ್, ಚಾಮುಂಡಿಬೆಟ್ಟ ಪಾದದ ಗೇಟ್, ಲಲಿತ ಮಹಲ್ ಗೇಟ್ ಮೂಲಕ ಪ್ರವೇಶವನ್ನು ನಿರ್ಬಂದಿಸಲಾಗಿತ್ತು. ತಾವರೆಕಟ್ಟೆ ಗೇಟ್ ಮೂಲಕ ಬುಧವಾರ ರಾತ್ರಿ 8 ಗಂಟೆ ನಂತರ ಪ್ರವೇಶವನ್ನು ನಿರ್ಬಂಧಿಸಲಾಗಿತ್ತು. ಚಾಮುಂಡಿಬೆಟ್ಟಕ್ಕೆ ಯಾವುದೇ ರೀತಿಯ ಊಟ, ಮದ್ಯದ ಬಾಟಲಿಗಳನ್ನು ತೆಗೆದುಕೊಂಡು ಹೋಗುವುದನ್ನು ನಿಷೇಧಿಸಲಾಗಿತ್ತು. ತಾವರೆಕಟ್ಟೆ ದ್ವಾರದ ಮೂಲಕ ರಾತ್ರಿ 9 ಗಂಟೆ ನಂತರ ಸಾರ್ವಜನಿಕರು ಚಾಮುಂಡಿ ಬೆಟ್ಟದಿಂದ ವಾಪಸ್ಸು ಬರುವಂತೆ ಸೂಚಿಸಲಾಗಿತ್ತು. ಬೆಟ್ಟದ ನಿವಾಸಿಗಳು ಹಾಗೂ ಸುತ್ತಮುತ್ತಲ ಗ್ರಾಮಸ್ಥರನ್ನು ಹೊರತುಪಡಿಸಿ ಈ ಕ್ರಮ ಕೈಗೊಳ್ಳಲಾಗಿತ್ತು.

ಪೊಲೀಸ್ ಕಟ್ಟೆಚ್ಚರ: ನಗರದಾದ್ಯಂತ ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶವಾಗದಂತೆ ನಗರ ಪೊಲೀಸರು ಬಿಗೀ ಬಂದೋಬಸ್ತ್ ಕೈಗೊಂಡಿದ್ದರು. ನಾಲ್ವರು ಡಿಸಿಪಿಗಳು, 8 ಎಸಿಪಿಗಳು, 34 ಪಿಐಗಳು, 66 ಪಿಎಸ್‌ಐಗಳು, 138 ಎಎಸ್‌ಐಗಳು, 1062 ಹೆಚ್‌ಸಿ, ಪಿಸಿಗಳು, 154 ಮಹಿಳಾ ಸಿಬ್ಬಂದಿ ಸೇರಿದಂತೆ ಒಟ್ಟು 1,466 ಮಂದಿ ಅಧಿಕಾರಿ ಹಾಗೂ ಸಿಬ್ಬಂದಿ ನಿಯೋಜಿಸಲಾಗಿತ್ತು. ಜೊತೆಗೆ 10 ಸಿಎಆರ್ ತುಕಡಿಗಳು, 5 ಕೆಎಸ್‌ಆರ್‌ಪಿ ತುಕಡಿಗಳು, 2 ಕಮಾಂಡೋ ಪಡೆ ತಂಡಗಳು, 1 ಶ್ವಾನದಳ ಹಾಗೂ 2 ಎಎಸ್‌ಸಿ ತಂಡಗಳು ಹದ್ದಿನ ಕಣ್ಣಿಟ್ಟಿದ್ದವು.

ಅರಮನೆ ಫಲಪುಷ್ಪ ಪ್ರದರ್ಶನಕ್ಕೆ ತೆರೆ ; ಅಪಾರ ಜನ ವೀಕ್ಷಣೆ

ಹೊಸ ವರ್ಷದ ಹೊಸ್ತಿಲಲ್ಲಿ ಅರಮನೆ ಆವರಣದಲ್ಲಿ ಮೈಸೂರು ಅರಮನೆ ಮಂಡಳಿ ವತಿಯಿಂದ ಹಮ್ಮಿಕೊಂಡಿದ್ದ ಫಲಪುಷ್ಪ ಪ್ರದರ್ಶನಕ್ಕೆ ಬುಧವಾರ ರಾತ್ರಿ ತೆರೆ ಬಿದ್ದಿತು. ಮೈಸೂರು ಅರಮನೆ ಮಂಡಳಿ ವತಿಯಿಂದ ಡಿ.21ರಿಂದ 31 ರವರೆಗೆ ಹಮ್ಮಿಕೊಂಡಿದ್ದ 10 ದಿನಗಳ ಈ ಫಲಪುಷ್ಪ ಪ್ರದರ್ಶನವನ್ನು ಭಾರೀ ಸಂಖ್ಯೆಯಲ್ಲಿ ಜನ ವೀಕ್ಷಿಸಿದರು. ಬಗೆಬಗೆಯ ಪುಷ್ಪಗಳಿಂದ ಅರಳಿದ ಕಲಾಕೃತಿಗಳು ವೀಕ್ಷಕರ ಮನಸೂರೆಗೊಂಡಿದ್ದವು.

ಮಹಿಳೆಯರ ರಕ್ಷಣೆಗೆ ಮಹಿಳಾ ಅಧಿಕಾರಿ ಮತ್ತು ಸಿಬ್ಬಂದಿ ಒಳಗೊಂಡ ಸುರಕ್ಷತಾ ಪಿಂಕ್ ಗರುಡಾ (ಚಾಮುಂಡಿ ಪಡೆ) ಪಡೆಗಳು ಗಸ್ತಿನಲ್ಲಿದ್ದವು. ಯಾವುದೇ ಅಹಿತಕರ ಘಟನೆ ನಡೆಯದಂತೆ ಪ್ರಮುಖ ಸ್ಥಳಗಳಲ್ಲಿ ಹೆಚ್ಚಿನ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಿ ಕಣ್ಗಾವಲು ಹಾಕಲಾಗಿತ್ತು. ಅತಿವೇಗ ಮತ್ತು ಅಜಾಗರೂಕತೆಯಿಂದ ವಾಹನ ಚಾಲನೆ ಮಾಡುವ ಕಿಡಿಗೇಡಿಗಳ ಬಗ್ಗೆ ನಿಗಾ ವಹಿಸಲು ಚೆಕ್‌ಪೋಸ್ಟ್‌ಗಳನ್ನು ತೆರೆಯುವ ಜೊತೆಗೆ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಕ್ರಮ ವಹಿಸಲು 112 ವಾಹನ, ಹೈವೇ ಪೆಟ್ರೋಲ್ ವಾಹನಗಳನ್ನು ನಿಯೋಜಿಸಲಾಗಿತ್ತು.

ಮದ್ಯ ಖರೀದಿ ಜೋರು: ನಗರದಲ್ಲಿ ಮದ್ಯ ಖರೀದಿ ಭರಾಟೆ ಜೋರಾಗಿತ್ತು. ಹೊಸ ವರ್ಷಾಚರಣೆ ಹಿನ್ನೆಲೆಯಲ್ಲಿ ಮದ್ಯ ಖರೀದಿಗೆ ಮದ್ಯಪ್ರಿಯರು ಮುಗಿಬಿದ್ದಿದ್ದರು. ಎಂಎಸ್‌ಐಎಲ್ ಮತ್ತು ಎಂಆರ್‌ಪಿ ದರದಲ್ಲಿ ಮದ್ಯ ಮಾರಾಟ ಮಾಡುವ ಮಳಿಗೆಗಳಲ್ಲಿ ಹೆಚ್ಚಿನ ಬೇಡಿಕೆ ಕಂಡು ಬಂದಿತು. ಹೀಗಾಗಿ ಮದ್ಯ ಮಳಿಗೆಗಳಲ್ಲಿ ಮದ್ಯಪ್ರಿಯರ ದಟ್ಟಣೆ ಬುಧವಾರ ರಾತ್ರಿ ಎಂದಿಗಿಂತಲೂ ಹೆಚ್ಚಾಗಿ ಕಂಡು ಬಂದಿತು.

ಬೆಟ್ಟದಲ್ಲಿ ಸಿದ್ಧತೆ: ಹೊಸ ವರ್ಷ ಮೊದಲ ದಿನವಾದ ಜ.1ರ ಗುರುವಾರ ಚಾಮುಂಡಿ ಬೆಟ್ಟದ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಹೆಚ್ಚಿನ ಭಕ್ತಾದಿಗಳು ಭೇಟಿ ನೀಡುವ ನಿರೀಕ್ಷೆ ಇರುವ ಹಿನ್ನೆಲೆಯಲ್ಲಿ ಅಗತ್ಯ ವ್ಯವಸ್ಥೆಗಳನ್ನು ಮಾಡಿಕೊಳ್ಳಲಾಗಿದೆ. ಹೊಸ ವರ್ಷದಂದು ಚಾಮುಂಡೇಶ್ವರಿ ದೇವಿಗೆ ಪೂಜೆ ಸಲ್ಲಿಸುವ ಸಲುವಾಗಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಮಾತ್ರವಲ್ಲದೆ, ನೆರೆ ರಾಜ್ಯಗಳಿಂದಲೂ ಭಕ್ತರು ಬೆಟ್ಟಕ್ಕೆ ಆಗಮಿಸಲಿದ್ದಾರೆ. ಹೀಗಾಗಿ ಬರುವ ಭಕ್ತರಿಗೆ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸಲು ದೇವಸ್ಥಾನದ ಪ್ರಾಧಿಕಾರವು ಸಕಲ ಸಿದ್ಧತೆ ಮಾಡಿಕೊಂಡಿದೆ. ಅಲ್ಲದೆ, ನಗರದ ಬಹುತೇಕ ದೇವಾಲಯಗಳಲ್ಲಿ ನಾಳೆ ಬೆಳಗ್ಗೆಯಿಂದಲೇ ವಿಶೇಷ ಪೂಜೆ ಸೇರಿದಂತೆ ನಾನಾ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಕಂದಾಯ ಕೋರ್ಟ್ ವ್ಯವಸ್ಥೆ

ವಿಚಾರಣೆಗಳನ್ನು ಆನ್‌ಲೈನ್‌ನಲ್ಲಿ ವೀಕ್ಷಿಸಲು ಮತ್ತು ವಿಡಿಯೊ ಕಾನ್ಫರೆನ್ಸಿಂಗ್ ಮೂಲಕ ಭಾಗವಹಿಸಲು ಸಾಧ್ಯವಾಗುತ್ತದೆ. ಸರ್ಕಾರ ಮತ್ತು ನಾಗರಿಕರ ನಡುವೆ ವಿಶ್ವಾಸ ಬಲಪಡಿಸುವ ಗುರಿ ಹೊಂದಿದ್ದು, ಪೈಲಟ್ ಉಪಕ್ರಮ ಆಡಳಿತವನ್ನು ಹೆಚ್ಚು ಸುಲಭ, ಪರಿಣಾಮಕಾರಿ ಮತ್ತು ಪಾರದರ್ಶಕವಾಗಿಸಲು ತಂತ್ರಜ್ಞಾನ ಬಳಕೆಯಲ್ಲಿ ಸರ್ಕಾರದ ಬದ್ಧತೆ ಪ್ರತಿಬಿಂಬಿಸುತ್ತದೆ. ಈ ವ್ಯವಸ್ಥೆಯನ್ನು ಹಂತ ಹಂತವಾಗಿ ವಿಸ್ತರಿಸಲಾಗುವುದು ಎಂದಿದ್ದಾರೆ.

ಸಂತ್ರಸ್ತರಿಗೆ ನಾಳೆ ಮನೆಗಳ ವಿತರಣೆ

ಮುಂದುವರಿದಿದೆ ಎಂದಿದ್ದಾರೆ. ಈ ವಿಚಾರದಲ್ಲಿ ಅರ್ಹರಿಗೆ ಮಾತ್ರ ವಸತಿ ವ್ಯವಸ್ಥೆ ಮಾಡಿಕೊಡುವುದು. ನಮ್ಮ ಸರಕಾರದ ಉದ್ದೇಶ. ಹೀಗಾಗಿ ಯಾವುದೇ ರೀತಿಯ ತರಾತುರಿ ಮಾಡದೆ ಸಮಗ್ರವಾಗಿ ದಾಖಲೆ ಪರಿಶೀಲನೆ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ್ದು, ಕಂದಾಯ ಇಲಾಖೆ ಹಾಗೂ ಗ್ರೇಟರ್ ಬೆಂಗಳೂರು ಪ್ರಾಧಿಕಾರಿದ ಅಧಿಕಾರಿಗಳು ಆ ಕಾರ್ಯದಲ್ಲಿ ನಿರತರಾಗಿದ್ದಾರೆ ಎಂದು ಜಮೀರ್ ಅಹ್ಮದ್ ಮಾಹಿತಿ ನೀಡಿದ್ದಾರೆ.

ಸಂತ್ರಸ್ತರ ದಾಖಲೆ ಪರಿಶೀಲನೆ ಕಾರ್ಯದ ಹಿನ್ನೆಲೆಯಲ್ಲಿ 2026ರ ಜನವರಿ ಒಂದರಂದು ಉದ್ದೇಶಿಸಲಾಗಿದ್ದ ಮನೆಗಳ ವಿತರಣೆಯನ್ನು ಜನವರಿ 2ಕ್ಕೆ ಮುಂದೂಡಿಕೆ ಮಾಡಲಾಗಿದೆ. ಕೋಗಿಲು ಬಡಾವಣೆಯಲ್ಲಿ ನೆಲೆಸಿದ್ದ ಕನ್ನಡಿಗರಿಗೆ ಮಾತ್ರವೇ ವಸತಿ ಸೌಲಭ್ಯ ಕಲ್ಪಿಸಲಾಗುವುದು ಎಂದು ಜಮೀರ್ ಅಹಮದ್ ಖಾನ್ ಪ್ರಕಟಣೆಯಲ್ಲಿ ಹೇಳಿದ್ದಾರೆ.

ರಾಜು ನಿಧನ



ಮೈಸೂರು, ಡಿ.31– ಮೈಸೂರಿನ ಕೆ.ಜಿ.ಕೊಪ್ಪಲು ನಿವಾಸಿ ರಾಜು(ಬಾಷಾ–46) ಅವರು ಬುಧವಾರ ನಿಧನರಾದರು.


ಇವರು ಅಪಾರ ಬಂಧು–ಮಿತ್ರರನ್ನು ಅಗಲಿದ್ದು, ಕೆ.ಜಿ.ಕೊಪ್ಪಲು ರುದ್ರಭೂಮಿಯಲ್ಲಿ ಗುರುವಾರ ಬೆಳಗ್ಗೆ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಗ್ರಾಮದವರು ತಿಳಿಸಿದ್ದಾರೆ.


ಅರಮನೆ ಆವರಣದಲ್ಲಿ ಆಕರ್ಷಕ ಪೊಲೀಸ್ ಬ್ಯಾಂಡ್.




ಮೈಸೂರಿನ ವಿವಿಧ ಹೋಟೆಲ್ ಹಾಗೂ ಕ್ಲಬ್‌ಗಳಲ್ಲಿ ಹೊಸ ವರ್ಷಾಚರಣೆ ಸಂದರ್ಭದಲ್ಲಿ ನರ್ತಿಸಿ, ಸಂಭ್ರಮಿಸಿದರು.

ಪೊಲೀಸ್ ಬ್ಯಾಂಡ್ ನಾದ ಮಾಧುರ್ಯ; ಹಸಿರು ಪಟಾಕಿಗಳಿಂದ ಆಗಸದಲ್ಲಿ ಚಿತ್ತಾರ


ಮೈಸೂರು ಅರಮನೆಯಲ್ಲಿ ಬುಧವಾರ ಹೊಸ ವರ್ಷಾಚರಣೆ ಪ್ರಯುಕ್ತ ಹಸಿರು ಪಟಾಕಿ ಮೂಲಕ ಆಗಸದಲ್ಲಿ ಚಿತ್ತಾರ ಮೂಡಿಸಲಾಯಿತು.

ಮೈಸೂರು,ಡಿ.31(ಪಿಎಂ)– ಕರ್ನಾಟಕ ಮತ್ತು ಆಂಗ್ಲ ಪೊಲೀಸ್ ಬ್ಯಾಂಡ್‌ನ ನಾದ ಮಾದುರ್ಯ ಹಾಗೂ ಹಸಿರು ಪಟಾಕಿ ಮೂಲಕ ಆಗಸದಲ್ಲಿ ಚಿತ್ತಾರ ಮೂಡಿಸುವ ಮೂಲಕ ಮೈಸೂರು ಅರಮನೆ ಆವರಣದಲ್ಲಿ ಹೊಸ ವರ್ಷಾಚರಣೆ ಸ್ವಾಗತಿಸಲಾಯಿತು.

ಪ್ರತಿವರ್ಷದಂತೆ ಮೈಸೂರು ಅರಮನೆ ಮಂಡಳಿ ವತಿಯಿಂದ ಏರ್ಪಡಿಸಿದ್ದ ಈ ವಿಶಿಷ್ಟ ಕಾರ್ಯಕ್ರಮಗಳು ಕಿಕ್ಕಿರಿದು ನೆರೆದಿದ್ದ ಜನತೆಯ ಹೊಸ ವರ್ಷಾಚರಣೆಯ ಸಂಭ್ರಮವ ಇಮ್ಮಡಿಗೊಳಿಸಿದವು. ರಾತ್ರಿ 11ರಿಂದ 12 ಗಂಟೆಯವರೆಗೆ ನಡೆದ ಪೊಲೀಸ್ ಬ್ಯಾಂಡ್ ಸ್ವರಗಳ ಲೀಲೆಯೊಂದಿಗೆ ನೆರೆದವರ ಮನ ಸೆಳೆಯಿತು. ರಾತ್ರಿ 12 ಗಂಟೆಯಿಂದ 12.15ರವರೆಗೆ ಬಣ್ಣಗಳ ಚಿತ್ತಾರದಿಂದ ಕೂಡಿದ ಶಬ್ಧರಹಿತ ಹಸಿರು ಪಟಾಕಿ ಸಿಡಿಸಿ ಆಗಸದಲ್ಲಿ ಚಿತ್ತಾರ ಮೂಡಿಸುವ ಮೂಲಕ ನೂತನ ವರ್ಷಕ್ಕೆ ಸ್ವಾಗತ ಕೋರಲಾಯಿತು.

ಅರಮನೆ ವರಹ ದ್ವಾರ, ಉತ್ತರ ದ್ವಾರದ ಜಯರಾಮ ಹಾಗೂ ಬಲರಾಮ ದ್ವಾರಗಳ ಮೂಲಕ ಸಾರ್ವಜನಿಕರಿಗೆ ಈ ಕಾರ್ಯಕ್ರಮಗಳಿಗಾಗಿ ಉಚಿತ ಪ್ರವೇಶಾವಕಾಶ ಕಲ್ಪಿಸಲಾಗಿತ್ತು. ಅಲ್ಲದೆ, ಬಲೂನ್ ಹೀಲಿಯಂ ಗ್ಯಾಸ್ ಸಿಲಿಂಡರ್ ಸ್ಫೋಟದ ಹಿನ್ನೆಲೆಯಲ್ಲಿ ಸಾರ್ವಜನಿಕರ ಪ್ರವೇಶದ ವೇಳೆ ವಿಶೇಷ ತಪಾಸಣೆಗೆ ಕ್ರಮ ವಹಿಸಲಾಗಿತ್ತು.

ಆನ್‌ಲೈನ್‌ನಲ್ಲಿ ವಂಚನೆಗೀಡಾದ ಮಹಿಳೆಗೆ ಹಣ ವಸೂಲಿ ಮಾಡಿಕೊಡುವುದಾಗಿ 25.83 ಲಕ್ಷ ಮೋಸ

ಮೈಸೂರು, ಡಿ.31– ಸೈಬರ್ ವಂಚನೆಯಿಂದ ಕಳೆದುಕೊಂಡಿರುವ ಹಣವನ್ನು ರೆಕವರಿ ಮಾಡಿಕೊಡುವುದಾಗಿ ನಂಬಿಸಿ, ಮಹಿಳೆಯೊಬ್ಬರಿಂದ ಸುಮಾರು 25 ಲಕ್ಷ ರೂ. ಪಡೆದು ಮೋಸ ಮಾಡಿರುವ ಆರೋಪದಡಿ ದಂಪತಿ ವಿರುದ್ಧ ಮೈಸೂರಿನ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆರು ತಿಂಗಳ ಹಿಂದೆ ಫೇಸ್‌ಬುಕ್‌ನಲ್ಲಿ ಪರಿಚಯವಾದ ಮಹಿಳೆ ಹಾಗೂ ಆಕೆಯ ಪತಿ ಕಿಶೋರ್ ತಮಗೆ ವಂಚಿಸಿರುವುದಾಗಿ ನಗರದ ಮಹಿಳೆಯೊಬ್ಬರು ದೂರು ನೀಡಿದ್ದಾರೆ.

ಫೇಸ್‌ಬುಕ್‌ನಲ್ಲಿ ಪರಿಚಯವಾದ ಮಹಿಳೆ, ನನಗೆ ಕಷ್ಟವಿದೆ ಎಂದು ಕಿಶೋರ್ ಫೋನ್‌ಪೇ ಮೂಲಕ ಎರಡು ಬಾರಿ ಒಟ್ಟು ಒಂದೂವರೆ ಲಕ್ಷ ರೂ. ಪಡೆದಿದ್ದರು. ಈ ನಡುವೆ ಅನುಷಾ ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಖಾಸಗಿ ಹಾಗೂ ಸರ್ಕಾರಿ ಕೆಲಸ ಕೊಡಿಸುವುದಾಗಿ ಜಾಹೀರಾತು

ದಂಪತಿ ವಿರುದ್ಧ ಪ್ರಕರಣ ದಾಖಲು

ಹಾಕಿದ್ದನ್ನು ಗಮನಿಸಿದೆ. ಜಾಹಿರಾತಿನಲ್ಲಿದ್ದ ಸಂಖ್ಯೆಯ ಮೂಲಕ ಕಿಶೋರ್‌ನನ್ನು ಸಂಪರ್ಕಿಸಿ, ನನಗೆ ಕೆಲಸದ ಅವಶ್ಯಕತೆ ಇದೆ. ಆದರೆ, ತಾವು ಈಗಾಗಲೇ ಸೈಬರ್ ವಂಚನೆಯಿಂದ ಹಣ ಕಳೆದುಕೊಂಡಿರುವುದರಿಂದ ಆತಂಕವಿದೆ ಎಂದು ನೊಂದ ಮಹಿಳೆ ತಿಳಿಸಿದ್ದಾರೆ. ಇದನ್ನೇ ಬಂಡವಾಳ ಮಾಡಿಕೊಂಡ ಕಿಶೋರ್, ಸೈಬರ್ ವಂಚನೆಯಿಂದ ಕಳೆದು ಕೊಂಡಿರುವ ಹಣವನ್ನು ಲೀಗಲ್ ಇಲ್ಲವೇ ಇಲ್ಲೀಗಲ್ ಆಗಿ ರೆಕವರಿ ಮಾಡಿಕೊಡುತ್ತೇನೆ. ನಮ್ಮ ತಂದೆ ಪೊಲೀಸ್ ಠಾಣೆಯಲ್ಲಿ ಕೆಲಸ ಮಾಡುತ್ತಾರೆ. ಸೈಬರ್ ಪೊಲೀಸ್ ಠಾಣೆಯಲ್ಲೂ ಪರಿಚಯದವರಿದ್ದಾರೆ ಎಂದು ಹೇಳಿ ನಂಬಿಸಿದ್ದಾನೆ ಬಳಿಕ ಸೈಬರ್ ವಂಚಕರು ನಿಮ್ಮಿಂದ ದೋಚಿದ್ದ ಹಣ ಫ್ರೀಜ್ ಆಗಿದ್ದು, ಅದನ್ನು ಬಿಡಿಸಿಕೊಳ್ಳಲು ಹಣ ಖರ್ಚಾಗುತ್ತದೆ. ಹ್ಯಾಕರ್‌ಗೆ ಪೇಮೆಂಟ್ ಕೊಡಬೇಕು, ಕೋರ್ಟ್‌ನಲ್ಲಿ ಕೇಸ್ ಫೈಲ್ ಮಾಡಬೇಕು, ಕೋರ್ಟ್‌ನಲ್ಲಿ ಸೆಕ್ಯೂರಿಟಿ ಡೆಪಾಸಿಟ್ ಇಡಬೇಕು, ಐಟಿಆರ್ ಫೈಲ್ ಮಾಡಬೇಕು, ಪಬ್ಲಿಕ್ ಪ್ರಾಸಿಕ್ಯೂಟರ್‌ಗೂ ಹಣ ಕೊಡಬೇಕು ಎಂದೆಲ್ಲಾ ಸುಳ್ಳು ಹೇಳಿ, ಹಲವು ಹಂತಗಳಲ್ಲಿ 21.13 ಲಕ್ಷ ವರ್ಗಾವಣೆ ಮಾಡಿಸಿಕೊಂಡಿದ್ದಾರೆ. ಮತ್ತೆ ಲಾಯರ್ ಫೀಜ್ ಕೊಡಬೇಕೆಂದು 3.50 ಲಕ್ಷ ವರ್ಗಾಯಿಸಿಕೊಂಡಿದ್ದಲ್ಲದೆ, 50 ಗ್ರಾಂ ಚಿನ್ನದ ಒಡವೆಯನ್ನೂ ಪಡೆದಿದ್ದಾರೆ. ಒಟ್ಟಾರೆ ಕಿಶೋರ್ ಹಾಗೂ ಆತನ ಪತ್ನಿ ನನಗೆ 25.83 ಲಕ್ಷ ವಂಚಿಸಿದ್ದಾರೆ ಎಂದು ನೊಂದ ಮಹಿಳೆ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಸಂಗಮ್ ಚಿತ್ರಮಂದಿರಕ್ಕೆ 'ಮಾರ್ಕ್' ನಾಯಕ ಕಿಚ್ಚ ಸುದೀಪ್ ಭೇಟಿ; ಸಂಭ್ರಮದಿಂದ ಕಾದಿದ್ದ ಅಭಿಮಾನಿಗಳು


ನಟ ಸುದೀಪ್ ಅವರನ್ನು ಚಿತ್ರ ನಿರ್ಮಾಪಕ ಎನ್.ಸಂದೇಶ್, ಮಾಜಿ ಮೇಯರ್ ಎಂ.ಜಿ.ರವಿಕುಮಾರ್ ಅಭಿನಂದಿಸಿದರು.

ಸಂಗಮ್ ಚಿತ್ರಮಂದಿರಕ್ಕೆ ಕಿಚ್ಚ ಸುದೀಪ್ ಬರುವ ರಸ್ತೆಯ ಇಕ್ಕೆಲಗಳಲ್ಲಿ ಕಿಚ್ಚನ ಪೋಸ್ಟರ್ ಹಿಡಿದ ಅಭಿಮಾನಿಗಳು ಜೈಕಾರ ಹಾಕಿದರು. ಆದರೆ ಸುಮಾರು 6.50ರ ವೇಳೆಗೆ ಚಿತ್ರಮಂದಿರಕ್ಕೆ ಆಗಮಿಸಿದ ನಟ ಸುದೀಪ್ ಮ್ಯಾನೇಜ್‌ಮೆಂಟ್‌ನೊಂದಿಗೆ ಚರ್ಚಿಸಿ, ಕಾನೂನು ಸಮಸ್ಯೆ ಮುಂದೊಡ್ಡಿ ಅಲ್ಲಿಂದ ತೆರಳಿದರು. ಕಿಚ್ಚ ಚಿತ್ರಮಂದಿರಕ್ಕೆ ಬಂದಾಗ, ಹಾಗೂ ಅಲ್ಲಿಂದ ಹೊರಟಾಗಲೂ ಅಭಿಮಾನಿಗಳ ಉದ್ದೇಶಿಸಿ ಯಾವುದೇ ಪ್ರತಿಕ್ರಿಯೆ ನೀಡದೇ ಹೋದದ್ದು, ನೆರೆದಿದ್ದವರ ಬೇಸರಕ್ಕೆ ಕಾರಣವಾಯಿತು. ಇದಕ್ಕಾಗಿ ಗಂಟೆಗಟ್ಟಲೇ ಕಾಯಬೇಕಿತ್ತೇ ಎಂದು ಕೆಲವರು ಉದ್ಗರಿಸಿದರೆ, ಮತ್ತೆ ಕೆಲವರು ಅವರು ಬಂದದ್ದಾದರೂ ಯಾತಕ್ಕಾಗಿ? ಅಭಿಮಾನಿಗಳೆಂದರೆ ಇಷ್ಟೊಂದು ತಿರಸ್ಕಾರ ಮನೋಭಾವ ಯಾಕೆ? ಎಂದು ಬೇಸರ ಹೊರಹಾಕಿದರು. ಇತ್ತ ಮಹಿಳಾ ಅಭಿಮಾನಿಗಳು ಗೋಣಗುತ್ತಾ ಹೆಜ್ಜೆಹಾಕಿದ್ದು ಕಂಡುಬಂದಿತು.


ನಟ ಸುದೀಪ್ ನೋಡಲು ಆಗಮಿಸಿದ್ದ ಅಭಿಮಾನಿಗಳ ದಂಡು

ಮೈಸೂರು, ಡಿ.31(ವಿವಿಹೆಚ್)– ತಮ್ಮ ಅಭಿನಯದ ಮಾರ್ಕ್ ಚಿತ್ರ ಯಶಸ್ವಿ ಪ್ರದರ್ಶನ ಕಾಣುತ್ತಿರುವ ಹಿನ್ನೆಲೆಯಲ್ಲಿ ಮೈಸೂರಿನ ಸಂಗಮ್ ಚಿತ್ರಮಂದಿರಕ್ಕೆ ನಟ ಕಿಚ್ಚ ಸುದೀಪ್ ಭೇಟಿ ನೀಡಿದರು.

ಈ ವೇಳೆ ಮೈಸೂರಿನ ಮಾಧ್ಯಮಗಳೊಂದಿಗೆ ಮಾತನಾಡಿದ ಸುದೀಪ್, ಪೈರಸಿ ವಿರುದ್ಧ ಕಾನೂನಾತ್ಮಕ ಹೋರಾಟ ಮಾಡಲಾಗುತ್ತಿದೆ. ಇದರ ನಡುವೆಯೂ ಅಭಿಮಾನಿಗಳು ಚಿತ್ರವನ್ನು ಗೆಲ್ಲಿಸಿಕೊಟ್ಟಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದರು.

ತುಂಬಾ ಪ್ರೀತಿಯಿಂದ ಮೈಸೂರಿನಲ್ಲಿ ಚಿತ್ರ ವೀಕ್ಷಣೆಗಾಗಿ ಬಂದೆ. ಮೈಸೂರಿನಲ್ಲಿ ಕೊನೆಯದಾಗಿ ಮೂವಿ ನೋಡಿದ್ದು ಮರೆತು ಹೋಗಿದೆ. ಈ ಭಾಗಕ್ಕೆ ಜಾಸ್ತಿ ಬಂದಿಲ್ಲ. ಚಿತ್ರೀಕರಣ ವೇಳೆ ಮಾತ್ರ ಮೈಸೂರಿಗೆ ಬರುತ್ತಿದ್ದೆವು. ಇನ್ನೊಂದು ದಿನ ಫ್ರೀ ಆಗಿ ಬಂದು ಎಲ್ಲರೊಂದಿಗೆ ಚಿತ್ರ ವೀಕ್ಷಿಸುತ್ತೇನೆ ಎಂದರು. ಚಿತ್ರಕ್ಕೆ ಭಾರಿ ಬೆಂಬಲ ಸಿಗುತ್ತಿದೆ. ಕರ್ನಾಟಕದಾದ್ಯಂತ ಅಭಿಮಾನಿಗಳು ಚಿತ್ರವನ್ನು ಗೆಲ್ಲಿಸಿ, ನಮಗೆ ಬೆಂಬಲ ನೀಡಿದ್ದಾರೆ. ಎಲ್ಲರಿಗೂ ಹೊಸ ವರ್ಷದ ಶುಭಾಶಯಗಳು, ಎಲ್ಲರಿಗೂ ಒಳ್ಳೆಯದಾಗಲಿ ಎಂದು ಹೇಳಿದರು.

ಬುಧವಾರ ಮೈಸೂರಿಗೆ ಆಗಮಿಸಿದ ನಟ ಸುದೀಪ್ ಸಂದೇಶ್ ದಿ ಪ್ರಿನ್ಸ್ ಹೋಟೆಲ್‌ನಲ್ಲಿ ಕೆಲ ಕಾಲ ವಿಶ್ರಾಂತಿ ಪಡೆದರು. ಈ ವೇಳೆ ತಮ್ಮ ನೆಚ್ಚಿನ ನಟನನ್ನು ನೋಡಲು ಹೋಟೆಲ್ ಮುಂಭಾಗ ನೆರೆದಿದ್ದ ಸಾವಿರಾರು ಅಭಿಮಾನಿಗಳು ಕಿಚ್ಚ, ಕಿಚ್ಚ ಎಂದು ಘೋಷಣೆ ಕೂಗುತ್ತಾ ಅಭಿಮಾನ ಮೆರೆದರು. ಸಂಜೆ ಅಲ್ಲಿಂದ ಹೊರಟು ಚಾಮುಂಡಿ ಬೆಟ್ಟಕ್ಕೆ ತೆರಳಿ ನಾಡದೇವತೆ ಚಾಮುಂಡೇಶ್ವರಿ ದರ್ಶನ ಪಡೆದರು. ಬಳಿಕ ಸಂಗಮ್ ಚಿತ್ರಮಂದಿರಕ್ಕೆ ಭೇಟಿ ನೀಡಿ ಅಭಿಮಾನಿಗಳೊಂದಿಗೆ ಚಿತ್ರ ವೀಕ್ಷಿಸಬೇಕಿತ್ತು. ಆದರೆ ತಾಂತ್ರಿಕ ಸಮಸ್ಯೆಯಿಂದಾಗಿ ಚಿತ್ರ ವೀಕ್ಷಿಸದೇ ಬೆಂಗಳೂರಿಗೆ ವಾಪಸ್ಸಾದರು.

ಬೌನ್ಸರ್‌ಗಳದ್ದೇ ಕಾರುಬಾರು: ಕನ್ನಡದ ಬಹುಬೇಡಿಕೆ ನಟ ಸುದೀಪ್ ಅವರ ರಕ್ಷಣೆಗಿದ್ದ ಬೌನ್ಸರ್‌ಗಳದ್ದೇ ಕಾರುಬಾರಾಗಿತ್ತು. ಮಕ್ಕಳು, ಹಿರಿಯರು, ಮಾಧ್ಯಮದವರು ಎಂದೂ ನೋಡದೇ ಮನಬಂದಂತೆ ವರ್ತಿಸಿ, ನೆರೆದಿದ್ದವರ ಕೆಂಗಣ್ಣಿಗೆ ಗುರಿಯಾದರು. ಬಾಲಕನೊಬ್ಬ ಸೆಲ್ಫಿ ತೆಗೆದುಕೊಳ್ಳಲು ಮುಂದಾಗುತ್ತಿದ್ದಂತೆ ಬೌನ್ಸರ್ ಒಬ್ಬ ಆ ಹುಡುಗನನ್ನು ಎಳೆದು ಪಕ್ಕಕ್ಕೆ ತಳ್ಳಿದರು. ಇದನ್ನು ಕೇಳಲು ಬಂದ ಹಿರಿಯ ನಾಗರಿಕರ ಮೇಲೂ ದರ್ಪ ಮೆರೆದರು. ನೆರೆದಿದ್ದವರು ಪ್ರಶ್ನಿಸಲು ಮುಂದಾದಾಗ ತೆಪ್ಪಗಾದರು.

ಕೋವಿಡ್ ಹಗರಣ ಕುರಿತು ರಾಜ್ಯ ಸರ್ಕಾರಕ್ಕೆ ಅಂತಿಮ ವರದಿ ಸಲ್ಲಿಕೆ

ಬೆಂಗಳೂರು, ಡಿ.31– ಕೋವಿಡ್ ಅವಧಿಯಲ್ಲಿ ಸಂಭವಿಸಿದ ಸಾವುಗಳು ಮತ್ತು ವೈದ್ಯಕೀಯ ಉಪಕರಣಗಳ ಖರೀದಿಯಲ್ಲಿನ ಅವ್ಯವಹಾರದ ಬಗ್ಗೆ ತನಿಖೆ ನಡೆಸಿರುವ ನ್ಯಾಯಾಧೀಶ ಮೈಕೆಲ್ ಡಿ ಕುನ್ಹಾ ಅವರು ಬುಧವಾರ ಅಂತಿಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಮ್ಮುಖದಲ್ಲಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ವರದಿ ಸ್ವೀಕರಿಸಿದರು.

ಕೋವಿಡ್ 19 ಸಂದರ್ಭದಲ್ಲಿ ಆರೋಗ್ಯ ಇಲಾಖೆ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರ ಕುರಿತು ತನಿಖೆಗೆ 2023ರ ಆಗಸ್ಟ್‌ನಲ್ಲಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕೆಲ್ ಡಿ ಕುನ್ಹಾ ನೇತೃತ್ವದಲ್ಲಿ ವಿಚಾರಣಾ ಆಯೋಗವನ್ನು ರಾಜ್ಯ ಸರ್ಕಾರ ರಚಿಸಿತ್ತು. ಈ ಆಯೋಗವು 2025ರ ಏಪ್ರಿಲ್‌ನಲ್ಲಿ 1,808 ಪುಟಗಳ ಎರಡನೇ ಮಧ್ಯಂತರ ವರದಿಯನ್ನು ಸಲ್ಲಿಸಿತ್ತು.

2 ಮಧ್ಯಂತರ ವರದಿಗಳ ಆಧಾರದ ಮೇಲೆ ಮುಂದಿನ ಕಾನೂನಾತ್ಮಕ ಕ್ರಮಗಳನ್ನು ತೆಗೆದುಕೊಳ್ಳಲು ವಿಶೇಷ ತನಿಖಾ ತಂಡವನ್ನು ರಚನೆ ಮಾಡಲು 2024ರ ನವೆಂಬರ್‌ನಲ್ಲಿ ಸಚಿವ ಸಂಪುಟವು ತೀರ್ಮಾನಿಸಿತ್ತು. ಆದರೆ, ಇದರ ತನಿಖೆಯನ್ನು ಸಿಐಡಿಗೆ ವಹಿಸಲಾಗಿತ್ತು ಈ ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದಿದೆ ಎನ್ನಲಾದ ಕೋವಿಡ್ ಅಕ್ರಮ ಆರೋಪಕ್ಕೆ ಸಂಬಂಧಿಸಿ ಎಫ್‌ಐಆರ್ ದಾಖಲಾಗಿತ್ತು.

ಮೈಸೂರು ಮಿತ್ರ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

2026



1 ಜನವರಿ 2026

ಭಾನು	ಸೋ	ಮಂ	ಬುಧ	ಗುರು	ಶುಕ್ರ	ಶನಿ
				1	2	3
4	5	6	7	8	9	10
11	12	13	14	15	16	17
18	19	20	21	22	23	24
25	26	27	28	29	30	31

2 ಫೆಬ್ರವರಿ 2026

ಭಾನು	ಸೋ	ಮಂ	ಬುಧ	ಗುರು	ಶುಕ್ರ	ಶನಿ
1	2	3	4	5	6	7
8	9	10	11	12	13	14
15	16	17	18	19	20	21
22	23	24	25	26	27	28

3 ಮಾರ್ಚ್ 2026

ಭಾನು	ಸೋ	ಮಂ	ಬುಧ	ಗುರು	ಶುಕ್ರ	ಶನಿ
1	2	3	4	5	6	7
8	9	10	11	12	13	14
15	16	17	18	19	20	21
22	23	24	25	26	27	28
29	30	31				

4 ಏಪ್ರಿಲ್ 2026

ಭಾನು	ಸೋ	ಮಂ	ಬುಧ	ಗುರು	ಶುಕ್ರ	ಶನಿ
			1	2	3	4
5	6	7	8	9	10	11
12	13	14	15	16	17	18
19	20	21	22	23	24	25
26	27	28	29	30		

5 ಮೇ 2026

ಭಾನು	ಸೋ	ಮಂ	ಬುಧ	ಗುರು	ಶುಕ್ರ	ಶನಿ
31					1	2
3	4	5	6	7	8	9
10	11	12	13	14	15	16
17	18	19	20	21	22	23
24	25	26	27	28	29	30

6 ಜೂನ್ 2026

ಭಾನು	ಸೋ	ಮಂ	ಬುಧ	ಗುರು	ಶುಕ್ರ	ಶನಿ
	1	2	3	4	5	6
7	8	9	10	11	12	13
14	15	16	17	18	19	20
21	22	23	24	25	26	27
28	29	30				

7 ಜುಲೈ 2026

ಭಾನು	ಸೋ	ಮಂ	ಬುಧ	ಗುರು	ಶುಕ್ರ	ಶನಿ
			1	2	3	4
5	6	7	8	9	10	11
12	13	14	15	16	17	18
19	20	21	22	23	24	25
26	27	28	29	30	31	

8 ಆಗಸ್ಟ್ 2026

ಭಾನು	ಸೋ	ಮಂ	ಬುಧ	ಗುರು	ಶುಕ್ರ	ಶನಿ
30	31					1
2	3	4	5	6	7	8
9	10	11	12	13	14	15
16	17	18	19	20	21	22
23	24	25	26	27	28	29

9 ಸೆಪ್ಟೆಂಬರ್ 2026

ಭಾನು	ಸೋ	ಮಂ	ಬುಧ	ಗುರು	ಶುಕ್ರ	ಶನಿ
		1	2	3	4	5
6	7	8	9	10	11	12
13	14	15	16	17	18	19
20	21	22	23	24	25	26
27	28	29	30			

10 ಅಕ್ಟೋಬರ್ 2026

ಭಾನು	ಸೋ	ಮಂ	ಬುಧ	ಗುರು	ಶುಕ್ರ	ಶನಿ
				1	2	3
4	5	6	7	8	9	10
11	12	13	14	15	16	17
18	19	20	21	22	23	24
25	26	27	28	29	30	31

11 ನವೆಂಬರ್ 2026

ಭಾನು	ಸೋ	ಮಂ	ಬುಧ	ಗುರು	ಶುಕ್ರ	ಶನಿ
1	2	3	4	5	6	7
8	9	10	11	12	13	14
15	16	17	18	19	20	21
22	23	24	25	26	27	28
29	30					

12 ಡಿಸೆಂಬರ್ 2026

ಭಾನು	ಸೋ	ಮಂ	ಬುಧ	ಗುರು	ಶುಕ್ರ	ಶನಿ
		1	2	3	4	5
6	7	8	9	10	11	12
13	14	15	16	17	18	19
20	21	22	23	24	25	26
27	28	29	30	31		

ರಜಾ ದಿನಗಳು

ಜನವರಿ
15 ಮಕರ ಸಂಕ್ರಾಂತಿ
26 ಗಣರಾಜ್ಯೋತ್ಸವ

ಫೆಬ್ರವರಿ
15 ಮಹಾಶಿವರಾತ್ರಿ

ಮಾರ್ಚ್
19 ಚಾಂದ್ರಮಾನ ಯುಗಾದಿ
21 ಕುತುಬ್-ಎ-ರಂಜಾನ್
31 ಮಹಾವೀರ ಜಯಂತಿ

ಏಪ್ರಿಲ್
3 ಗುಡ್ ಫ್ರೈಡೇ
14 ಅಂಬೇಡ್ಕರ್ ಜಯಂತಿ /ಸೌರ ಯುಗಾದಿ
20 ಬಸವ ಜಯಂತಿ

ಮೇ
1 ಕಾರ್ಮಿಕರ ದಿನ /ಬುದ್ಧ ಪೂರ್ಣಿಮಾ
28 ಬಕ್ರೀದ್

ಜೂನ್
26 ಮೊಹರಂ 10ನೇ ದಿನ

ಆಗಸ್ಟ್
15 ಸ್ವಾತಂತ್ರ್ಯ ದಿನಾಚರಣೆ
26 ಈದ್ ಮಿಲಾದ್ / ಋಗ್ ಉಪಾಕರ್ಮ /ತಿರು ಓಣಂ

ಸೆಪ್ಟೆಂಬರ್
14 ಗಣೇಶ ಚತುರ್ಥಿ/ಸ್ವರ್ಣಗೌರಿ ವ್ರತ

ಅಕ್ಟೋಬರ್
2 ಗಾಂಧಿ ಜಯಂತಿ
10 ಮಹಾಲಯ ಅಮಾವಾಸ್ಯೆ
20 ಆಯುಧಪೂಜೆ
21 ವಿಜಯದಶಮಿ
26 ವಾಲ್ಮೀಕಿ ಜಯಂತಿ

ನವೆಂಬರ್
1 ಕನ್ನಡ ರಾಜ್ಯೋತ್ಸವ
8 ನರಕ ಚತುರ್ದಶಿ
10 ಬಲಿಪಾಡ್ಯಮಿ
27 ಕನಕದಾಸ ಜಯಂತಿ

ಡಿಸೆಂಬರ್
25 ಕ್ರಿಸ್‌ಮಸ್

	ರಾಹುಕಾಲ	ಯಮಗಂಡಕಾಲ	ಗುಳಿಕಕಾಲ
ಭಾನು	4.30–6.00	12.00–1.30	3.00–4.30
ಸೋಮ	7.30–9.00	10.30–12.00	1.30–3.00
ಮಂಗಳ	3.00–4.30	9.00–10.30	12.00–1.30
ಬುಧ	12.00–1.30	7.30–9.00	10.30–12.00
ಗುರು	1.30–3.00	6.00–7.30	9.00–10.30
ಶುಕ್ರ	10.30–12.00	3.00–4.30	7.30–9.00
ಶನಿ	9.00–10.30	1.30–3.00	6.00–7.30

ಕಚೇರಿಗಳಲ್ಲಿ ಮಧ್ಯವರ್ತಿಗಳ ಹಾವಳಿ ನಿಯಂತ್ರಣಕ್ಕೆ ಆಗ್ರಹಿಸಿ ಪ್ರತಿಭಟನೆ

ವಿರಾಜಪೇಟೆ, ಡಿ.31–ತಾಲೂಕು ಕಛೇರಿ ಮತ್ತು ಸರ್ವೆ ಹಾಗೂ ಇನ್ನಿತರೆ ಕಛೇರಿಗಳಲ್ಲಿ ಮಧ್ಯವರ್ತಿಗಳ ಹಾವಳಿಯಿಂದಾಗಿ ಭ್ರಷ್ಟಾಚಾರ ಮಿತಿ ಮೀರಿ ಹೆಚ್ಚುತ್ತಿರುವುದರಿಂದ ಇದರ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ನಾಗರಿಕ ಸಮಿತಿ ಮತ್ತು ಸಾರ್ವಜನಿಕ ಕಾರ್ಯಕರ್ತರ ಕೂಟದ ಸಂಯುಕ್ತ ಸಮಿತಿ ತಾಲೂಕು ಕಛೇರಿ ಎದುರು ಪ್ರತಿಭಟನೆ ನಡೆಸಿತು.

ನಾಗರಿಕ ಸಮಿತಿ ಮುಖಂಡ ಡಾ. ಇ.ರಾ. ದುರ್ಗಾಪ್ರಸಾದ್ ಮಾತನಾಡಿ, ಸ್ಥಳೀಯ ಸಂಸ್ಥೆಗಳ ಕಛೇರಿಗಳಲ್ಲಿ ಮಧ್ಯವರ್ತಿಗಳ ಮೂಲಕ ಸಿಬ್ಬಂದಿ ಜನರಿಗೆ ನಡೆಸುತ್ತಿರುವ ಶೋಷಣೆ ಕೊನೆಗೊಳ್ಳಬೇಕು.ಇದಕ್ಕೆ ಸೂಕ್ತ ಕ್ರಮ ಕೈಗೊಳ್ಳಬೇಕು. ಶಾಸಕರು ಚುನಾಯಿತರಾದ ಪ್ರಾರಂಭದಲ್ಲಿ ಭ್ರಷ್ಟಾಚಾರದ ಬಗ್ಗೆ ಶೂನ್ಯ ಸಹನೆ ಎಂದಿದ್ದರು. ಆದರೆ, ಈಗ ಅವರು ಜಾಣ ಕುರುಡು ಪ್ರದರ್ಶಿಸುತ್ತಿರುವುದನ್ನು ಗಮನಿಸಿದರೆ ನಿಮ್ಮ ಸುತ್ತು ಇರುವ ಮಧ್ಯವರ್ತಿಗಳ ವ್ಯಾಪ್ತಿಯ ಅರಿವಾಗುತ್ತದೆ ಎಂದರು.




ವಿರಾಜಪೇಟೆ ತಾಲೂಕು ಕಚೇರಿಯೆದುರು ನಡೆದ ಪ್ರತಿಭಟನೆಯಲ್ಲಿ ನಾಗರಿಕ ಸೇವಾ ಸಮಿತಿ ಸದಸ್ಯರು ತಹಶೀಲ್ದಾರ್‌ಗೆ ಮನವಿ ಸಲ್ಲಿಸಿದರು.

ಸಮಿತಿಯ ಸಹ ಸಂಚಾಲಕ ಮಾಲೇಟಿರ ಎಸ್.ಕಾಳಯ್ಯ ಮಾತನಾಡಿ, ಸರಕಾರದ ನಿಯಮದಲ್ಲಿ ಜಾಗದ ಸೈಟ್ ತುಂಡರಿಸಿ ಕೊಡಬಾರದೆಂದು ಆದೇಶವಿದ್ದರೂ ಸೈಟ್ ಕತ್ತರಿಸಿ ಕೊಡುತ್ತಿದ್ದಾರೆ ಅದು ನೊಂದಾವಣೆಯಾಗುತ್ತಿದೆ ಹೀಗೆ ಹಣಕ್ಕಾಗಿ ಅಧಿಕಾರಿಗಳು ಸರಕಾರದ ಆದೇಶವನ್ನೇ ಉಲ್ಲಂಘಿಸಿ ವರ್ತಿಸುತ್ತಿದ್ದಾರೆ. ಮಧ್ಯವರ್ತಿಗಳ ಮೂಲಕ ಕಛೇರಿ ಸಿಬ್ಬಂದಿಗಳು ದೈನಿಕ ಮತ್ತು ಸಾರ್ವಜನಿಕರಿಗೆ ನಡೆಸುತ್ತಿರುವ ಶೋಷಣೆ ಹೆಚ್ಚುತ್ತಿರುವುದರಿಂದ ರೆವಿನ್ಯೂ ಇಲಾಖೆ, ತಹಶೀಲ್ದಾರ್ ಕಛೇರಿ, ಸಬ್ ರಿಜಿಸ್ಟ್ರಾರ್, ಸರ್ವೆ ಇಲಾಖೆ, ಪುರಸಭೆ, ಪೊನ್ನಂಪೇಟೆ ತಾಲೂಕು ಕಾರ್ಯ ನಿರ್ವಹಣಾಧಿಕಾರಿ ಕಛೇರಿಗಳಲ್ಲಿ ನಾಲ್ಕು ವರ್ಷಗಳಿಗಿಂತ ಹೆಚ್ಚಾಗಿ ಇಲ್ಲಿಯೇ ನೆಲೆಯೂರಿರುವ ಎಲ್ಲಾ ಸಿಬ್ಬಂದಿಗಳನ್ನು ಕೂಡಲೇ ವರ್ಗಾವಣೆ ಮಾಡುವಂತೆ ಕಾಳಯ್ಯ ಒತ್ತಾಯಿಸಿದರು.

ಪ್ರತಿಭಟನಾಕಾರರಿಂದ ಮನವಿ ಸ್ವೀಕರಿಸಿದ ತಹಸೀಲ್ದಾರ್ ಪಿ.ಸಿ.ಪ್ರವಿಣ್ ಕುಮಾರ್ ಮಾತನಾಡಿ, ಹಣ ಪಡೆಯುವುದು ಮತ್ತು ಕೊಡುವುದು ತಪ್ಪು, ಇದಕ್ಕೆ ಕಡಿವಾಣ ಹಾಕುವ ಪ್ರಯತ್ನ ಮಾಡಿದ್ದೇವೆ. ನಮ್ಮ ಕಛೇರಿ ಸಿಬ್ಬಂದಿಗಳಾಗಿದ್ದರೆ ನೇರವಾಗಿ ಹೇಳಿ, ತಪ್ಪು ಮಾಡಿದ್ದರೆ ತೋರಿಸಿ ಕೂಡಲೇ ಕ್ರಮ ಕೈಗೊಳ್ಳುವುದಾಗಿ ಆಶ್ವಾಸನೆ ನೀಡಿದರು.

ಸಾಮಾಜಿಕ ಕಾರ್ಯಕರ್ತರ ಕೂಟದ ಬಾಳೆಕುಟ್ಟಿರ ದಿನು ದೇವಯ್ಯ, ಬಿ.ಎಸ್. ಪೂಣಚ್ಚ, ಪಿ.ಕೆ.ಅಪ್ಪಣ್ಣ, ಮಂಡೆಪಂಡ ರೋಷನ್, ಎಂ.ಶಂಕರಿ ಪೊನ್ನಪ್ಪ, ಸಿ.ಪಿ.ಐ.ಎಂ. ಪಕ್ಷದ ಎ.ಮಹದೇವ್, ಹೆಚ್.ಪಿ. ರಮೇಶ್, ಎ.ಸಿ.ಸಾಬು, ರಮೇಶ್ ಶಾಜಿ, ರಮೇಶ್ ಮಯಮುಡಿ ಮಾತನಾಡಿದರು. ಪ್ರತಿಭಟನೆಯಲ್ಲಿ ಚಾಮಿಯಾಲ ಹಂಸ, ಕೊಳಮಂಡ ಮೂಸ, ವಿ.ಎಂ.ಗಣೇಶ್, ಪಿ.ಕೆ.ಕಾಳಪ್ಪ, ಎಂ.ಎಸ್.ನಂದ ಹಾಗೂ ಸಮಿತಿ ಕಾರ್ಯಕರ್ತರು ಭಾಗಮಿಸಿದ್ದರು.

ವರ್ಷಾಂತ್ಯದ ನೇಸರನನ್ನು ಬೀಳ್ಕೊಟ್ಟ ಪ್ರವಾಸಿಗರು



ಮಡಿಕೇರಿ, ಡಿ.31–ಹೊಸ ವರ್ಷಾಚರಣೆಯಲ್ಲಿ ಸಂಭ್ರಮಿಸಲು ಜಿಲ್ಲೆಗೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸಿದ್ದಾರೆ. ಹೀಗಾಗಿ ಕೊಡಗಿನಲ್ಲಿನ ಬಹುತೇಕ ಎಸ್ಟೇಟ್ ಸ್ಟೇ, ಹೋಂ ಸ್ಟೇ, ರೆಸಾರ್ಟ್, ಲಾಡ್ಜ್‌ಗಳು ಪ್ರವಾಸಿಗರಿಂದ ತುಂಬಿ ಹೋಗಿದೆ.

ಅಬ್ಬಿಫಾಲ್ಸ್, ಮಾಂದಲ್ ಪಟ್ಟಿ, ದುಬಾರೆ, ನಿಸರ್ಗಧಾಮದಲ್ಲಿಯೂ ಪ್ರವಾಸಿಗರ ಸಂಖ್ಯೆ ಎಂದಿಗಿಂತ ಹೆಚ್ಚಿತ್ತು. ಪ್ರಸಿದ್ಧ ಪ್ರವಾಸಿ ತಾಣ ರಾಜಾಸೀಟಿನಲ್ಲಿ ಪ್ರತಿ ವರ್ಷದಂತೆ ಈ ಬಾರಿಯೂ ಪ್ರವಾಸಿಗರು ವರ್ಷಾಂತ್ಯದ ಸೂರ್ಯಾಸ್ತಕ್ಕಾಗಿ ಕಾದು ಕುಳಿತಿದ್ದರು. ಕೆಂಬಣ್ಣ ಚೆಲ್ಲುತ್ತಾ ನೀಲಿ ಮೋಡಗಳ ನಡುವೆ ಮರೆಯಾಗುತ್ತಾ ಆಗೊಮ್ಮೆ ಈಗೊಮ್ಮೆ ಇಣುಕಿ ನೋಡುತ್ತಿದ್ದ. ಸಂಜೆಯಾಗುತ್ತಿದ್ದಂತೆಯೇ ದಟ್ಟವಾಗಿ ಕವಿದ ಮೋಡ ಮಂಜಿನ ಜುಗಲ್ ಬಂದಿಯ ನಡುವೆ ನೇಸರ ಬೆಟ್ಟ ಶ್ರೇಣಿಗಳ ನಡುವೆ ಮರೆಯಾದ.

ಪ್ರವಾಸಿಗರು ಏಕಕಾಲದಲ್ಲಿ ಇಂದಿನ ವರ್ಷಕ್ಕೆ ಗುಡ್ ಬೈ ಹೇಳುವ ಮೂಲಕ ವರ್ಷಾಂತ್ಯದ ನೇಸರನನ್ನು ಬೀಳ್ಕೊಟ್ಟರು. ಮಾತ್ರವಲ್ಲದೆ ಪ್ರಕೃತಿಯ ಮಡಿಲಲ್ಲಿ ಜಾರುತ್ತಿದ್ದ ಸೂರ್ಯನ ವಿಹಂಗಮ ದೃಶ್ಯವನ್ನು ಪ್ರವಾಸಿಗರು ಕಣ್ತುಂಬಿ ಕೊಂಡರು. ಮೊಬೈಲ್, ಕ್ಯಾಮರಾಗಳಲ್ಲಿ ಫೋಟೋ ತೆಗೆದುಕೊಂಡು ಸಂಭ್ರಮಿಸಿದರು. 2025ರ ಕೊನೆಯ ಸೂರ್ಯಾಸ್ಥದ ಬಳಿಕ ಪ್ರವಾಸಿಗರು ರಾಜಾಸೀಟ್‌ನಿಂದ ನಿರ್ಗಮಿಸಿದರು.

ಐವರು ಆರೋಪಿಗಳ ಬಂಧನ

16.97 ಗ್ರಾಂ ಎಂಡಿಎಂಎ ಮಾದಕ ವಸ್ತು ವಶ

ಮಡಿಕೇರಿ, ಡಿ.31–ನಿಷೇಧಿತ ಮಾದಕ ವಸ್ತು ಎಂಡಿಎಂಎ ಮಾರಾಟ ಮತ್ತು ಸಾಗಾಟ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಂಟಿಕೊಪ್ಪ, ಕುಶಾಲನಗರ ಪಟ್ಟಣ ಮತ್ತು ಗ್ರಾಮಾಂತರ ಠಾಣೆಯಲ್ಲಿ 3 ಪ್ರತ್ಯೇಕ ಪ್ರಕರಣಗಳಲ್ಲಿ 5 ಮಂದಿ ಆರೋಪಿಗಳನ್ನು ಬಂಧಿಸಿ, 16.97 ಗ್ರಾಂ ಎಂಡಿಎಂಎ ವಶಕ್ಕೆ ಪಡೆಯಲಾಗಿದೆ.

ಸುಂಟಿಕೊಪ್ಪ ಕೆಇಬಿ ರಸ್ತೆ ನಿವಾಸಿ ತೌಶಿದ್ ಎಸ್.ಎಂ.(24), ನೌಶಾದ್ ಎಸ್.ಎಂ(23), ಶ್ರೀರಾಮ ಕಾಲೋನಿಯ ಅಸ್ಲಾನ್(25), ಮೈಸೂರು ವಿದ್ಯಾರಣ್ಯಪುರಂ ನಿವಾಸಿ ಕೆ.ಸಿ. ಜೇವಿಯರ್(40), ಕುಶಾಲನಗರ ಗುಮ್ಮನಕೊಲ್ಲಿ ನಿವಾಸಿ ನೌಶೀಕ್(23) ಎಂಬವರೇ ಬಂಧಿತರಾಗಿದ್ದಾರೆ. ಈ ತಿಂಗಳಲ್ಲಿ ಮಾದಕ ವಸ್ತು ಬಳಕೆ ಮತ್ತು ಸೇವನೆ ಮಾಡಿದ 16 ಪ್ರಕರಣ ದಾಖಲಾಗಿದ್ದು, ಒಟ್ಟು 57 ಆರೋಪಿಗಳನ್ನು ಬಂಧಿಸಿ ಕ್ರಮ ಕೈಗೊಳ್ಳಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಹೇಳಿದ್ದಾರೆ.

ಭಾಸ್ಕರ್ ನಾಯಕ್ ನಿಧನ



ಕುಶಾಲನಗರ: ಪಟ್ಟಣದ ಹೋಟೆಲ್ ಉದ್ಯಮದ ರೂವಾರಿಗಳು, ವಿವಿಧ ಸಂಘ–ಸಂಸ್ಥೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ, ಇಂದಿರಾ ಬಡಾವಣೆಯ ನಿವಾಸಿ ಭಾಸ್ಕರ್ ನಾಯರ್(75) ಬುಧವಾರ ಬೆಳಿಗ್ಗೆ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಮೃತರು ಪತ್ನಿ, ಮೂವರು ಪುತ್ರಿ, ಸಹೋದರ–ಸಹೋದರಿಯರು, ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಇಂದಿರಾ ಬಡಾವಣೆಯಲ್ಲಿರುವ ಮೃತರ ಸ್ವಗೃಹಕ್ಕೆ ಮಾಜಿ ಶಾಸಕ ಅಪ್ಪಚ್ಚು ರಂಜನ್ ಅಂತಿಮ ದರ್ಶನ ಪಡೆದರು. ಬುಧವಾರ ಸಂಜೆ ಹಾರಂಗಿಯಲ್ಲಿರುವ ಮೃತರ ತೋಟದಲ್ಲಿ ಅಂತ್ಯಸಂಸ್ಕಾರ ನಡೆಯಿತು.

ಜ.4, ಲಯನ್ಸ್ ರೀಜನಲ್ ಮೀಟ್ 'ಬೆಸುಗೆ' ಸಮ್ಮೇಳನ

ನಾಪೋಕ್ಲು: ಲಯನ್ಸ್ ಕ್ಲಬ್ ವತಿಯಿಂದ ಜ.4ರಂದು ಲಯನ್ಸ್ ರೀಜನಲ್ ಮೀಟ್ 'ಬೆಸುಗೆ' ಎಂಬ ಅದ್ದೂರಿ ಸಮ್ಮೇಳನವನ್ನು ಕೊಡವ ಸಮಾಜದಲ್ಲಿ ಆಯೋಜಿಸಲಾಗಿದೆ ಎಂದು ಕೊಡಗು ಮತ್ತು ಪಿರಿಯಾಪಟ್ಟಣ ವಲಯದ 12 ಕ್ಲಬ್‌ಗಳ ಪ್ರಾಂತೀಯ ಅಧ್ಯಕ್ಷ ಲಯನ್ ಡಾ. ಕೋಟೆರ ಪಂಚಮ್ ತಿಮ್ಮಯ್ಯ ಹೇಳಿದರು.

ಲಯನ್ಸ್ ಕ್ಲಬ್ ರೆವಿನ್ಯೂ ಜಿಲ್ಲೆಗಳನ್ನು ಹೊಂದಿದ್ದು, ಇದರಲ್ಲಿ ಜಿಲ್ಲೆಯ ಲಯನ್ಸ್ ಕ್ಲಬ್‌ಗಳು ಭಾಗವಹಿಸುವುದರೊಂದಿಗೆ ಜ. 4ರ ಸಂಜೆ 4 ರಿಂದ 9 ರವರೆಗೆ ಅದ್ದೂರಿ ಸಮ್ಮೇಳನವನ್ನು ಆಯೋಜಿಸಲಾಗಿದೆ. ಸಮ್ಮೇಳನದಲ್ಲಿ ಲಿಯೋ ಕ್ಲಬ್ ನಾಪೋಕ್ಲು ಲಯನ್ಸ್ ಜೋನ್ ಅಧ್ಯಕ್ಷರು ಪದಾಧಿಕಾರಿಗಳು ಹಾಗೂ ಸದಸ್ಯರು ಭಾಗವಹಿಸಲಿದ್ದು, ಲಯನ್ಸ್ ಡಿಸ್ಟ್ರಿಕ್ಟ್ ಗವರ್ನರ್, ರೋಟೇರಿಯನ್ ಅಭಿನಂದನ್ ಎ.ಶೆಟ್ಟಿ ಮುಖ್ಯ ಭಾಷಣಕಾರರಾಗಿರುವರು. ಕಾರ್ಯಕ್ರಮದಲ್ಲಿ 12 ಕ್ಲಬ್‌ಗಳ ಸೇವೆಯನ್ನು ಪರಿಗಣಿಸಿ ಪುರಸ್ಕರಿಸಲಾಗುವುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಸಮ್ಮೇಳನ ಅಧ್ಯಕ್ಷೆ ಲಯನ್ ಕೆಟೋಳಿರ ರತ್ನ ಚರ್ಮಣ್ಣ, ಕಾರ್ಯದರ್ಶಿ ಲಯನ್ ಮುಕ್ಕಾಟಿರ ವಿನಯ್, ಖಜಾಂಚಿ ಲಯನ್ ಎಳ್ತಂಡ ಬಿ. ಬೋಪಣ್ಣ, ನಾಪೋಕ್ಲು ಲಯನ್ಸ್ ಕ್ಲಬ್ ಅಧ್ಯಕ್ಷ ಲಯನ್ ಮಾದೇಯಂಡ ಬಿ. ಕುಟ್ಟಪ್ಪ, ಕಾರ್ಯದರ್ಶಿ ಲಯನ್ ಅಪ್ಪುಮಣಿಯಂಡ ಬನ್ನಿ ಭೀಮಯ್ಯ, ಪದಾಧಿಕಾರಿಗಳು ಹಾಗೂ ಸದಸ್ಯರು ಉಪಸ್ಥಿತರಿದ್ದರು.

ಮಂಡ್ಯ ವಿವಿಧೆಡೆ ಶಾಸಕ ರವಿ ಗಣಿಗ ಹುಟ್ಟುಹಬ್ಬ

ಮಂಡ್ಯ, ಡಿ.31– ಮಂಡ್ಯದ ವಿವಿಧೆಡೆ ಶಾಸಕ ಪಿ.ರವಿಕುಮಾರ್ ಗಣಿಗ ಅವರ ಹುಟ್ಟುಹಬ್ಬವನ್ನು ಜಿಲ್ಲಾ ಕಾಂಗ್ರೆಸ್ ಮುಖಂಡರು ವಿವಿಧ ಸಮಾಜಮುಖಿ ಸೇವಾ ಕಾರ್ಯ ಹಾಗೂ ದೇವರಿಗೆ ವಿಶೇಷ ಪೂಜೆ ಸಲ್ಲಿಸುವ ಮೂಲಕ ಅರ್ಥಪೂರ್ಣವಾಗಿ ಆಚರಿಸಿದರು.

ಮುಡಾ ಅಧ್ಯಕ್ಷ ಬಿ.ಪಿ.ಪ್ರಕಾಶ್ ನೇತೃತ್ವದಲ್ಲಿ ಮುಖಂಡರು ಹಾಗೂ ಕಾರ್ಯಕರ್ತರು ವಿದ್ಯಾನಗರದಲ್ಲಿರುವ ಶ್ರೀವಿದ್ಯಾ ಗಣಪತಿ ದೇವಾಲಯದಲ್ಲಿ ದೇವರಿಗೆ ವಿಶೇಷ ಪೂಜೆ ಸಲ್ಲಿಸಿ ಪ್ರಾರ್ಥಿಸಿದರು.

ನಂತರ ಮಾತನಾಡಿದ ಮುಡಾ ಅಧ್ಯಕ್ಷ ಬಿ.ಪಿ.ಪ್ರಕಾಶ್, ಶಾಸಕ ರವಿಕುಮಾರ್ ಅವರಿಗೆ ಜನಸೇವೆ ಮಾಡಲು ದೇವರು ಇನ್ನಷ್ಟು ಹೆಚ್ಚಿನ ಶಕ್ತಿ ನೀಡಲಿ. ಭಗವಂತ ಅವರಿಗೆ ಆಯಸ್ಸು, ಆರೋಗ್ಯ ಕರುಣಿಸಲಿ ಎಂದು ಶುಭ ಹಾರೈಸಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರೂ ಆದ ಮೈಷುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್ ಮಾತನಾಡಿ, ಜನಪ್ರಿಯ ಶಾಸಕ ಪಿ.ರವಿಕುಮಾರ್ ಅವರಿಗೆ ಮತ್ತಷ್ಟು ಜನರ ಸೇವೆ ಮಾಡುವ ಶಕ್ತಿ ಲಭಿಸಲಿ ಎಂದು ಹುಟ್ಟುಹಬ್ಬದ ಶುಭಾಶಯ ಕೋರಿದರು.

ರಕ್ತದಾನ: ಜಿಲ್ಲಾ ಕಾಂಗ್ರೆಸ್ ಸಮಿತಿ ವಕ್ತಾರ ಸಿ.ಎಂ.ದ್ಯಾವಪ್ಪ ನೇತೃತ್ವದಲ್ಲಿ ಕಾಂಗ್ರೆಸ್ ಕಚೇರಿಯಲ್ಲಿ ರಕ್ತದಾನ ಶಿಬಿರ ಯಶಸ್ವಿಯಾಗಿ ನಡೆಯಿತು. ಈ ವೇಳೆ ರಾಜ್ಯ ಕೈಮಗ್ಗ ಅಭಿವೃದ್ಧಿ ಮಂಡಳಿ ನಿಗಮ ಅಧ್ಯಕ್ಷ ಬಿ.ನಾಗೇಂದ್ರ ಕುಮಾರ್ ಸೇರಿದಂತೆ ಇನ್ನಿತರರಿದ್ದರು.

ಕಾರ್ಮಿಕ ವಿಭಾಗದಿಂದ ಪೂಜೆ: ಜಿಲ್ಲಾ ಕಾಂಗ್ರೆಸ್ ಕಾರ್ಮಿಕರ ವಿಭಾಗದ ಜಿಲ್ಲಾಧ್ಯಕ್ಷ ರಾಮಕೃಷ್ಣ ನೇತೃತ್ವದಲ್ಲಿ ಕಾಂಗ್ರೆಸ್ ಮುಖಂಡರು ಕಾಳಿಕಾಂಭ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ನಂತರ ಮಾತನಾಡಿದ ಅವರು, ಶಾಸಕರಿಗೆ ಬಡವರ ಸೇವೆ ಮಾಡಲು ಮತ್ತಷ್ಟು ಅವಕಾಶ ಸಿಗಲಿ. ದೇವರು ಆಯಸ್ಸು, ಆರೋಗ್ಯ ಕರುಣಿಸಲಿ ಎಂದು ಶುಭ ಕೋರಿದರು.



ಶಾಸಕ ರವಿಕುಮಾರ್ ಹುಟ್ಟುಹಬ್ಬದ ಅಂಗವಾಗಿ ರಕ್ತದಾನ ಶಿಬಿರ ನಡೆಯಿತು.

ಅನ್ನದಾಸೋಹ ಸೇವಾ ಕಾರ್ಯ: ಡಿಸಿಸಿ ಬ್ಯಾಂಕ್ ನಿರ್ದೇಶಕ ಹೆಚ್.ಅಶೋಕ್ ನೇತೃತ್ವದಲ್ಲಿ ಮಮತೆಯ ಮಡಿಲು ನಿತ್ಯ ದಾಸೋಹ ಕೇಂದ್ರದಲ್ಲಿ ಜಿಲ್ಲಾ ಆಸ್ಪತ್ರೆ ಹೆರಿಗೆ ವಾರ್ಡ್ ಬಳಿ ಗರ್ಭಿಣಿಯರು, ಬಾಣಂತಿಯರು ಹಾಗೂ ರೋಗಿಗಳ ಸಂಬಂಧಿಕರಿಗೆ ಬೆಳಗಿನ ಉಪಹಾರ ವಿತರಣೆ ಮಾಡಲಾಯಿತು.

ನಂತರ ಮಾತನಡಿದ ಅವರು, ಶಾಸಕ ಪಿ.ರವಿಕುಮಾರ್ ಅವರು ಮಂಡ್ಯ ಕ್ಷೇತ್ರವನ್ನು ಮಾದರಿ ಕ್ಷೇತ್ರ ಮಾಡುವ ನಿಟ್ಟಿನಲ್ಲಿ ಉತ್ತಮವಾಗಿ ಕೆಲಸ ಮಾಡಲಿ ಎಂದರು.

ಹಣ್ಣು ಹಂಪಲು ವಿತರಣೆ: ಮುಡಾ ಮಾಜಿ ಅಧ್ಯಕ್ಷ ನಹೀಮ್ ಮತ್ತು ಮಾಜಿ ಯುವ ಕಾಂಗ್ರೆಸ್ ಅಧ್ಯಕ್ಷ ವಿಜಯ್ ಕುಮಾರ್ ನೇತೃತ್ವದಲ್ಲಿ ಜಿಲ್ಲಾ ಆಸ್ಪತ್ರೆ ಒಳರೋಗಿಗಳಿಗೆ ಹಣ್ಣು ಹಂಪಲು ವಿತರಿಸಲಾಯಿತು.

ನಂತರ ಮಾತನಾಡಿದ ನಹೀಮ್ ಮತ್ತು ವಿಜಯ್ ಕುಮಾರ್, ಶಾಸಕ ರವಿಕುಮಾರ್ ಅವರು ಜಿಲ್ಲೆಯಲ್ಲಿ ಅಭಿವೃದ್ಧಿ ಕೆಲಸಗಳಿಗೂ ಹೆಚ್ಚು ಅನುದಾನ ನೀಡಿದ್ದಾರೆ. ಎಲ್ಲಾ ಸಮಾಜದ ಜನರಿಗೂ ಸಹಾಯ ಮಾಡುತ್ತಿದ್ದಾರೆ. ಬಡವರ ಸೇವೆ ಮಾಡಲು ಮತ್ತಷ್ಟು ಅವಕಾಶ ಅವರಿಗೆ ಸಿಗಲಿ. ದೇವರು ಆಯಸ್ಸು, ಆರೋಗ್ಯ ಕರುಣಿಸಲಿ ಎಂದು ಶುಭ ಕೋರಿದರು.

ಕಾರ್ಯಕ್ರಮದಲ್ಲಿ ಮುಡಾ ಸದಸ್ಯರಾದ ಕಮಲಾರಾಜ್, ಗ್ಯಾರಂಟಿ ಸಮಿತಿ ವೀಣಾಶಂಕರ್, ಸಬ್ರಿನ್ ತಾಜ್, ಸುಧಾರಾಣಿ, ಮುಖಂಡರಾದ ಅಭಿಲಾಷ್, ದೇವರಾಜ್, ಶಿವರುದ್ರ, ವಿಜಯ್ ಕುಮಾರ್, ಜಾಕೀರ್ ಪಾಷಾ, ಯೋಗೇಶ್ ಮತ್ತಿತರರಿದ್ದರು.

ಶೋಭಾರಾಣಿ ಮಂಡ್ಯ ನೂತನ ಎಸ್ಪಿ

ಮಂಡ್ಯ, ಡಿ.31– ಮಂಡ್ಯ ಜಿಲ್ಲಾ ನೂತನ ಪೊಲೀಸ್ ವರಿಷ್ಠಾಧಿಕಾರಿಯಾಗಿ ಡಾ.ಶೋಭಾರಾಣಿ ಅವರನ್ನು ವರ್ಗಾವಣೆ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.



ಮಂಡ್ಯ ಎಸ್ಪಿಯಾಗಿದ್ದ ಮಲ್ಲಿಕಾರ್ಜುನ ಬಾಲದಂಡಿ ಅವರನ್ನು ಮೈಸೂರು ಎಸ್ಪಿಯಾಗಿ ವರ್ಗಾವಣೆ ಮಾಡಲಾಗಿದೆ. ಶೋಭಾರಾಣಿ ಅವರು ಬಳ್ಳಾರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದು, ಅವರನ್ನು ಮಂಡ್ಯಕ್ಕೆ ವರ್ಗಾಯಿಸಲಾಗಿದೆ. ಶೋಭಾರಾಣಿ ಅವರಿಗೆ ಮಂಡ್ಯ ಜಿಲ್ಲೆಯ ನಿಕಟ ಸಂಪರ್ಕವಿದ್ದು, ಇದೇ ಜಿಲ್ಲೆಯಲ್ಲಿ ಹಲವು ಠಾಣಾ ವ್ಯಾಪ್ತಿಯಲ್ಲಿ ಡಿವೈಎಸ್ಪಿ ಹಾಗೂ ಮಂಡ್ಯ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಯಾಗಿ ಕಾರ್ಯ ನಿರ್ವಹಿಸಿರುವ ಅನುಭವ ಇದೆ.

ಮಂಡ್ಯದಲ್ಲಿ ಕೈಗಾರಿಕೆ ಸ್ಥಾಪನೆ ವಿಚಾರದಲ್ಲಿ

'ಕೈ' ನಾಯಕರ ವಿರುದ್ಧ ಮಾಜಿ ಶಾಸಕರ ಆರೋಪ ಸರಿಯಲ್ಲ

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್ ಖಂಡನೆ

ಮಂಡ್ಯ, ಡಿ.31– ಕೈಗಾರಿಕೆ ಸ್ಥಾಪಿಸುವ ಸಂಬಂಧ ಜಿಲ್ಲೆಯ ಕೆಲವು ಮಾಜಿ ಶಾಸಕರು ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಹಾಲಿ ಶಾಸಕರ ಬಗ್ಗೆ ಅನಗತ್ಯ ಆರೋಪ ಮಾಡಿರುವುದು ಸರಿಯಲ್ಲ ಎಂದು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್ ಖಂಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಕೈಗಾರಿಕೆ ಸ್ಥಾಪನೆಗೆ ಜಾಗ ಕೊಡುವ ಸಂಬಂಧ ಸಚಿವರು, ಶಾಸಕರಿಗೆ ಆಸಕ್ತಿ ಇಲ್ಲ ಎಂದು ಹೇಳಿಕೆ ನೀಡುವುದು ಹಾಸ್ಯಾಸ್ಪದ. ಮಂಡ್ಯ ಶಾಸಕರು ಕಾಡಾ ಇಲಾಖೆ ವ್ಯಾಪ್ತಿಯಲ್ಲಿ 80 ಎಕರೆ ಜಾಗ ನೀಡಲು ಸಿದ್ಧರಿದ್ದೇವೆ ಎಂದು ದಾಖಲೆ ಸಮೇತ ಹೇಳಿದ್ದಾರೆ ಎಂದರು.

ಕಾಂಗ್ರೆಸ್ ಸರ್ಕಾರ ಬಂದಾಗಿನಿಂದ ನಮ್ಮ ಶಾಸಕರು ತಮ್ಮ ಕ್ಷೇತ್ರಗಳಿಗೆ ಅತಿ ಹೆಚ್ಚು ಅನುದಾನ ತಂದಿದ್ದಾರೆ. ಹೆಚ್.ಡಿ. ಕುಮಾರಸ್ವಾಮಿ ಅವರು 2 ಬಾರಿ ಮುಖ್ಯಮಂತ್ರಿಯಾಗಿದ್ದಾಗ ಜೆಡಿಎಸ್ ಶಾಸಕರು ತಮ್ಮ ಅವಧಿಯಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಮಾಡದೆ ಕಾಲಾಹರಣ ಮಾಡಿದ್ದಾರೆ ಎಂದು ಟೀಕಿಸಿದರು.



ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್ ಮಾತನಾಡಿದರು.

> ಕಳೆದ ಎರಡೂವರೆ ವರ್ಷಗಳಿಂದ ಮಂಡ್ಯ ಅಭಿವೃದ್ಧಿಯ ನಾಗಾಲೋಟದಲ್ಲಿ ಮುಂದುವರೆದಿದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಿನಿಂದ ಜಿಲ್ಲೆಯ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿಯೂ ಅಭಿವೃದ್ಧಿ ಕಾರ್ಯಗಳು ನಿರಂತರವಾಗಿ ನಡೆಯುತ್ತಿದೆ. ಕೇಂದ್ರ ಸಚಿವರು ಜಿಲ್ಲೆಯಲ್ಲಿ ಕೈಗಾರಿಕೆ ಸ್ಥಾಪಿಸುವ ಸಂಸ್ಥೆಯಿಂದ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಲು ಮುಂದಾಗಬೇಕು. ಈ ಮೂಲಕ ರಾಜ್ಯ ಸರ್ಕಾರದ ಸಹಕಾರದೊಂದಿಗೆ ಕೈಗಾರಿಕೆ ಸ್ಥಾಪಿಸಬೇಕು. ಈ ಸಂಬಂಧ ಕೇಂದ್ರ ಸಚಿವರಾಗಿ ಉನ್ನತ ಸ್ಥಾನದಲ್ಲಿದ್ದು ಜಿಲ್ಲಾ ಸಚಿವರ ಹಾಗೂ ಜಿಲ್ಲೆಯ ಎಲ್ಲಾ ಶಾಸಕರ ಸಭೆ ಕರೆದು ಚರ್ಚೆ ಮಾಡಲು ಏನು ಕಷ್ಟ ಎಂದು ಪ್ರಶ್ನಿಸಿದರು. **–ಹೆಚ್.ಬಿ.ರಾಮು, ಮಾಜಿ ಶಾಸಕ.**

ಮಾಜಿ ಶಾಸಕರಾದ ಸಿ.ಎಸ್.ಪುಟ್ಟರಾಜು, ಸುರೇಶ್‌ಗೌಡ ಅವರು ಸುಳ್ಳು ಹೇಳುವುದರಲ್ಲಿ ನಿಸ್ಸೀಮರು. ಕಳೆದ ಎರಡೂವರೆ ವರ್ಷಗಳಿಂದ ತಮ್ಮ ಕ್ಷೇತ್ರದ ಕಾರ್ಯಕರ್ತರಿಗೆ ನೈತಿಕ ಬೆಂಬಲ ನೀಡದೇ ಇದ್ದು, ಡಿಸಿಸಿ ಬ್ಯಾಂಕ್ ಚುನಾವಣೆಯಲ್ಲಿ ಸ್ಪರ್ಧಿಸಲು ಅರ್ಜಿ ಹಾಕಲಿಲ್ಲ. ಕಾಂಗ್ರೆಸ್ ಪಕ್ಷ ಜಿಲ್ಲೆಯ ಎಲ್ಲಾ ವರ್ಗದ ಕಾರ್ಯಕರ್ತರಿಗೆ ದಾಖಲೆಯ ಮಟ್ಟದ ಅಧಿಕಾರ ನೀಡಿದೆ ಎಂದರು.

ಜೆಡಿಎಸ್ ಅವಕಾಶವಾದಿ ಪಕ್ಷವಾಗಿದೆ. ರಾಜ್ಯ ರಾಜಕೀಯದಲ್ಲಿ ಅಧಿಕಾರಕ್ಕಾಗಿ ಒಮ್ಮೆ ಬಿಜೆಪಿಯೊಟ್ಟಿಗೆ ಇನ್ನೊಮ್ಮೆ ನಮ್ಮೊಂದಿಗೆ ಮೈತ್ರಿ ಮಾಡಿಕೊಂಡಿರುವುದನ್ನು ಇತಿಹಾಸ ತಿಳಿಸುತ್ತದೆ. ಜಿಲ್ಲೆಯಲ್ಲಿ ಕಾರ್ಖಾನೆ ಸ್ಥಾಪನೆ ಸಂಬಂಧ ಕಂಪನಿ ಮೂಲಕ ಸರ್ಕಾರಕ್ಕೆ ಅರ್ಜಿ ಸಲ್ಲಿಸಿ ಕಾನೂನಿನಂತೆ ನಡೆದುಕೊಳ್ಳಲಿ. ಅದನ್ನು ಬಿಟ್ಟು ಸುಳ್ಳಿನಿಂದ ಕೂಡಿದ ಕಪೋಲ ಕಲ್ಪಿತ ಸುದ್ದಿ ಹರಡುವುದನ್ನು ಬಿಡುವಂತೆ ಸಲಹೆ ನೀಡಿದರು.

ಮೈಷುಗರ್‌ಗೆ 300 ಕೋಟಿ ಆರ್ಥಿಕ ಶಕ್ತಿ ತುಂಬಲಾಗಿದೆ. ಮಾಜಿ ಅಧ್ಯಕ್ಷ ನಾಗರಾಜಪ್ಪ ಅವರಿಂದ 127 ಕೋಟಿ ಹಿಂಪಡೆಯಲು ಕ್ರಮ ವಹಿಸಲಾಗಿದೆ. 27 ಎಕರೆ ಭೂಮಿ ಪತ್ತೆ ಹಚ್ಚಲಾಗಿದೆ. 16 ಕೋಟಿ ವೆಚ್ಚದ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ. ಯಾವುದೇ ರೀತಿಯ ಆರೋಪ ಮಾಡುವ ಮೊದಲು ಮಾಜಿ ನಿರುದ್ಯೋಗಿ ಶಾಸಕರು ಮಾಹಿತಿ ಪಡೆದು ಮಾತನಾಡುವಂತೆ ತಾಕೀತು ಮಾಡಿದರು.

ಕಾಂಗ್ರೆಸ್ ಮುಖಂಡ ಬಿ.ನಾಗೇಂದ್ರ ಕುಮಾರ್ ಮಾತನಾಡಿ, ಜಿಲ್ಲೆಯಲ್ಲಿ ಅಭಿವೃದ್ಧಿ ಕಾರ್ಯವಾದರೆ ಅದರಿಂದ ಜೆಡಿಎಸ್‌ಗೆ ಹೆಸರು ಬರಲಿದೆ ಎಂಬ ಕಾರಣಕ್ಕೆ ಕಾಂಗ್ರೆಸ್ ಹಿಂಜರಿಯುತ್ತಿದೆ ಎಂದು ಶಾಸಕ ಹೆಚ್.ಡಿ. ಮಂಜು ಹೇಳಿದ್ದಾರೆ. 2013, 18ರಲ್ಲಿ ಕಾಂಗ್ರೆಸ್ ಅಧಿಕಾರಾವಧಿಯಲ್ಲಿ ನಡೆದ ಅಭಿವೃದ್ಧಿ ಬಗ್ಗೆ ರಾಜ್ಯದ ಜನತೆಗೆ ಗೊತ್ತಿದೆ. ಕೆ.ಆರ್. ಪೇಟೆ ಕ್ಷೇತ್ರವನ್ನು ಪ್ರಬುದ್ಧರು ಅಭಿವೃದ್ಧಿ ಪಡಿಸಿದ್ದಾರೆ. ಜಿಲ್ಲೆಯ ನಾಯಕರಾದ ಚಲುವರಾಯಸ್ವಾಮಿ ಅವರು ಅಭಿವೃದ್ಧಿಯ ದಾಹದೊಂದಿಗೆ ಜಿಲ್ಲೆಯ ಅಭಿವೃದ್ಧಿಗೆ ಮುಂದಾಗಿದ್ದಾರೆ ಎಂದರು.

ಗೋಷ್ಠಿಯಲ್ಲಿ ಕಾಂಗ್ರೆಸ್ ಜಿಲ್ಲಾ ಕಾರ್ಯಾಧ್ಯಕ್ಷ ಚಿದಂಬರ್, ಎಸ್ಸಿ ಎಸ್ಟಿ ವಿಭಾಗದ ಉಪಾಧ್ಯಕ್ಷ ವಿಜಯ್‌ಕುಮಾರ್, ಮುಡಾಧ್ಯಕ್ಷ ಬಿ.ಪಿ. ಪ್ರಕಾಶ್, ಮೂರ್ತಿ, ಕಿಸಾನ್ ಮೋರ್ಚಾ ಅಧ್ಯಕ್ಷ ಮೋಹನ್, ಪುಟ್ಟಸ್ವಾಮಿ ಇದ್ದರು.

ನಾಳೆ ವಿದ್ಯುತ್ ವ್ಯತ್ಯಯ

ನಾಗಮಂಗಲ, ಡಿ.31– ತಾಲೂಕಿನ ಬೆಳ್ಳೂರು ಉಪವಿಭಾಗ ಬೆಳ್ಳೂರು ಶಾಖಾ ವ್ಯಾಪ್ತಿಯಲ್ಲಿ ಜ.2ರಂದು ತುರ್ತು ಕಾರ್ಯ ಹಮ್ಮಿಕೊಂಡಿರುವ ಕಾರಣ ಆರಣಿ ಗ್ರಾಪಂ ವ್ಯಾಪ್ತಿಯ ಮುದಿಗೆರೆ, ಆರಣಿ, ಚಬ್ಬನಹಳ್ಳಿ, ಮಂಚೇನಹಳ್ಳಿ, ಎಂ.ಕೋಡಿಹಳ್ಳಿ, ಹೊನ್ನೇನಹಳ್ಳಿ, ಸಿದ್ದಾಪುರ, ಸಿದ್ದಾಪುರ ಪಾಳ್ಯ, ಸಿದ್ದರಹಟ್ಟಿ, ಶ್ರೀರಂಗಪುರ, ತಿಗಳನಹಳ್ಳಿ, ಅಡಕತನಹಳ್ಳಿ ಗ್ರಾಮಗಳಲ್ಲಿ ಬೆಳಗ್ಗೆ 11.30 ರಿಂದ ಸಂಜೆ 5.30ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ನಂಜೇದೇವನಪುರ ಬಳಿ ಗಂಡು ಹುಲಿ ಸೆರೆ

ಇನ್ನು ಐದು ಹುಲಿಗಳ ಸೆರೆಗೆ ಮುಂದುವರೆದ ಕಾರ್ಯಾಚರಣೆ

ಚಾಮರಾಜನಗರ, ಡಿ.31– ತಾಯಿ ಹುಲಿಯೊಂದಿಗೆ ನಾಲ್ಕು ಮರಿ ಹುಲಿಗಳು ಬೀಡು ಬಿಟ್ಟಿರುವ ಚಾಮರಾಜನಗರ ತಾಲೂಕಿನ ನಂಜೇದೇವನಪುರ ಸಮೀಪ ಗಂಡು ಹುಲಿ ಕಾಣಿಸಿಕೊಂಡಿದ್ದು, ಅರಣ್ಯ ಇಲಾಖೆ ಅಧಿಕಾರಿಗಳು ಹುಲಿಯನ್ನು ಯಶಸ್ವಿಯಾಗಿ ಸೆರೆ ಹಿಡಿದಿದ್ದಾರೆ.



ಸೆರೆ ಸಿಕ್ಕ ಹುಲಿ ಕಾಣಬಹುದು

ಅರಣ್ಯ ಇಲಾಖೆಯ ಡ್ರೋಣ್ ಕ್ಯಾಮರಾದಲ್ಲಿ ಮಂಗಳವಾರ ಕಾಣಿಸಿಕೊಂಡ 6 ವರ್ಷದ ಗಂಡು ಹುಲಿಯನ್ನು ಅಧಿಕಾರಿಗಳು ಮಾನಿಟರಿಂಗ್ ಮಾಡಿ ಮಂಗಳವಾರ ರಾತ್ರಿ 10.30ರ ವೇಳೆಗೆ ಹುಲಿ ಸೆರೆ ಕಾರ್ಯಾಚರಣೆ ಆರಂಭಿಸಿದರು. ಬಳಿಕ 5 ಸಾಕಾನೆಗಳೊಂದಿಗೆ ಗ್ರಾಮದ ಆನೆಮಡುವಿನ ಕೆರೆ ಬಳಿ ತೆರಳಿದಾಗ ನೀರು ಕುಡಿಯಲು ಬಂದ ಹುಲಿಗೆ ಪಶು ವೈದ್ಯಾಧಿಕಾರಿ ಡಾ.ಆದರ್ಶ್ ಅವರು ಅರವಳಿಕೆ ಚುಚ್ಚು ಮದ್ದು ನೀಡಿದರು. ಬಳಿಕ ಪ್ರಜ್ಞೆ ತಪ್ಪುತ್ತಿದ್ದಂತೆ ಅರಣ್ಯ ಸಿಬ್ಬಂದಿ ಹುಲಿಯನ್ನು ಸೆರೆ ಹಿಡಿದಿದ್ದಾರೆ.

ಮುಂದುವರಿದ ಕಾರ್ಯಾಚರಣೆ: ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ 100ಕ್ಕೂ ಅಧಿಕ ಸಿಬ್ಬಂದಿ ಸದ್ಯ ಒಂದು ಹುಲಿ ಸೆರೆ ಹಿಡಿದಿದ್ದು ಆಪರೇಷನ್ 5 ಟೈಗರ್ಸ್ ಕಾರ್ಯಾಚರಣೆ ಮುಂದುವರೆದಿದೆ. ಗ್ರಾಮದಲ್ಲಿ ಕಾಣಿಸಿಕೊಂಡಿದ್ದ ತಾಯಿ ಹುಲಿ ಹಾಗೂ 4 ಮರಿ ಹುಲಿಗಳು ಇನ್ನೂ ಸೆರೆ ಸಿಕ್ಕಿಲ್ಲ. ಡಿ.21ರಂದು ಅರಣ್ಯ ಇಲಾಖೆ ಡ್ರೋಣ್ ಕ್ಯಾಮರಾದಲ್ಲಿ 5 ಹುಲಿಗಳು ಒಟ್ಟಿಗೆ ಕಾಣಿಸಿಕೊಂಡಿತ್ತು. ಇದರಿಂದ ಎಚ್ಚೆತ್ತ ಅರಣ್ಯ ಇಲಾಖೆ ಗ್ರಾಮಗಳಲ್ಲಿ ಟಾಂಟಾಂ ಮಾಡಿಸಿ, ಎಚ್ಚರಿಕೆಯಿಂದ ಇರುವಂತೆ ಗ್ರಾಮಸ್ಥರಲ್ಲಿ ಜಾಗೃತಿ ಮೂಡಿಸಿದ್ದರು. 5 ಹುಲಿಗಳನ್ನು ಒಂದೇ ಬಾರಿಗೆ ಸೆರೆ ಹಿಡಿಯುವುದು ಸುಲಭದ ಕಾರ್ಯವಲ್ಲ. ಈ ಹಿನ್ನೆಲೆಯಲ್ಲಿ ಹುಲಿಗಳ ಸೆರೆಗೆ ವಿವಿಧ ಆಯಾಮಗಳಲ್ಲಿ ತಂತ್ರಗಾರಿಕೆ ರೂಪಿಸಿದ್ದರು. ಆದರೆ, ಇತ್ತೀಚಿನ ದಿನಗಳಲ್ಲಿ ಹುಲಿಗಳು ಕಾಣಿಸಿಕೊಂಡಿಲ್ಲದ ಕಾರಣ ಬೇರೆಡೆಗೆ ಹೋಗಿರುವ ಸಾಧ್ಯತೆ ಇದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

5 ಅಲ್ಲ, 6 ಹುಲಿಗಳು

ನಂಜೇದೇವನಪುರದಲ್ಲಿ ಡಿ.19ರಂದು ತಾಯಿ ಹುಲಿ ಹಾಗೂ 4 ಮರಿ ಹುಲಿಗಳು ಕಾಣಿಸಿಕೊಂಡು ಆತಂಕ ಉಂಟು ಮಾಡಿದ್ದವು. ಬಳಿಕ ಕಳೆದ 12 ದಿನಗಳಿಂದಲೂ ನಂಜೇದೇವನಪುರ, ಉಡಿಗಾಲ, ವೀರನಪುರ, ಕೆ.ಕೆ.ಹುಂಡಿ ಸೇರಿದಂತೆ 7 ಗ್ರಾಮಗಳಲ್ಲಿ ಬಿಳಿಗಿರಿರಂಗನ ಬೆಟ್ಟ ಹುಲಿ ಸಂರಕ್ಷಿತಾರಣ್ಯದ ಅಧಿಕಾರಿಗಳು ಕಾರ್ಯಾಚರಣೆ ನಡೆಸಿದ್ದರು. ಅಲ್ಲದೇ 100ಕ್ಕೂ ಹೆಚ್ಚು ಸಿಬ್ಬಂದಿ ಹಗಲು ರಾತ್ರಿ ಎನ್ನದೇ ಹುಲಿಗಳನ್ನು ಸೆರೆ ಹಿಡಿಯಬೇಕು ಎಂದು ಪಣ ತೊಟ್ಟಿದ್ದರು. ಆದರೆ, ಈ 5 ಹುಲಿಗಳು ಅಧಿಕಾರಿಗಳ ಕಣ್ತಪ್ಪಿಸಿಕೊಂಡು ಓಡಾಡುತ್ತಿದ್ದು, ಇನ್ನೂ ಪತ್ತೆಯಾಗಿಲ್ಲ. ಆದರೆ ಮಂಗಳವಾರ ರಾತ್ರಿ ಸೆರೆ ಸಿಕ್ಕಿರುವ ಹುಲಿಯೇ ಬೇರೆ ಎಂಬುದು ಖಾತರಿಯಾಗಿದೆ. ಹೀಗಾಗಿ ಗ್ರಾಮದಲ್ಲಿ ಇದ್ದದ್ದು 5 ಅಲ್ಲ 6 ಹುಲಿಗಳು ಎಂಬಂತಾಗಿದೆ. ಈ ಹುಲಿ ಕಲ್ಪುರದಲ್ಲಿ ಕಳೆದ ತಿಂಗಳು ಕ್ಯಾಮರಾ ಟ್ರ್ಯಾಪ್‌ನಲ್ಲಿ ಕ್ಯಾಪ್ಚರ್ ಆಗಿದ್ದ ದೊಡ್ಡ ಹುಲಿ ಎನ್ನಲಾಗಿದೆ.

ಗ್ಯಾರಂಟಿ ಯೋಜನೆ ರಾಷ್ಟ್ರಮಟ್ಟದ ವಿಶೇಷ ಕಾರ್ಯಕ್ರಮ

ಶಾಸಕ ಎ.ಆರ್.ಕೃಷ್ಣಮೂರ್ತಿ ಅಭಿಪ್ರಾಯ

ಚಾಮರಾಜನಗರ, ಡಿ.31– ಸಮಾಜದ ಎಲ್ಲಾ ವರ್ಗಗಳಿಗೂ ಸಾಮಾಜಿಕ ನ್ಯಾಯ ಹಾಗೂ ಆರ್ಥಿಕ ಸದೃಢತೆ ಒದಗಿಸುವ ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ರಾಷ್ಟ್ರ ಮಟ್ಟದಲ್ಲಿಯೇ ವಿಶೇಷ ಕಾರ್ಯಕ್ರಮ ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ತಿಳಿಸಿದರು.

ತಾಲೂಕಿನ ಸಂತೇಮರಹಳ್ಳಿ ಗ್ರಾಮದ ಎಪಿಎಂಸಿ ಆವರಣದಲ್ಲಿ ಜಿಲ್ಲಾ ಹಾಗೂ ತಾಪಂ ಮತ್ತು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸಹಯೋಗದಲ್ಲಿ ನಡೆದ ಹೋಬಳಿ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸಭೆ ಹಾಗೂ ಸಂವಾದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪಂಚ ಗ್ಯಾರಂಟಿ ಯೋಜನೆಗಳನ್ನು ಸಿಎಂ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರವು ಬಡವರು, ಮಹಿಳೆಯರ ಸಬಲೀಕರಣಕ್ಕಾಗಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ ಯಶಸ್ವಿಯೂ ಆಗಿದೆ. ಈ ಮಾದರಿಯ ಯೋಜನೆಗಳನ್ನು ದೇಶದ ಯಾವುದೇ ರಾಜ್ಯದಲ್ಲಿ ಜಾರಿಗೊಳಿಸಿಲ್ಲ ಎಂಬುದು ಗಮನಾರ್ಹ. 2013–18ರ ಅವಧಿಯಲ್ಲಿ ಜನತೆಗೆ ಭಾಗ್ಯಗಳ ಭಾಗ್ಯ ನೀಡಿದ ಸಿದ್ದರಾಮಯ್ಯ ಅವರು ಈ ಬಾರಿ ಅಧಿಕಾರಕ್ಕೆ ಬಂದಾಗ ಪಂಚ ಗ್ಯಾರಂಟಿ ಯೋಜನೆಗಳನ್ನು ಹಂತ ಹಂತವಾಗಿ ಜಾರಿಗೊಳಿಸಿದ್ದಾರೆ. ಇದಕ್ಕಾಗಿ ಬಜೆಟ್‌ನಲ್ಲಿ 56 ಸಾವಿರ ಕೋಟಿ ರೂ. ಮೀಸಲಿಟ್ಟಿದ್ದಾರೆ. ರಾಜ್ಯದ ಸರ್ವಜನರ ಅಭಿವೃದ್ಧಿಗೆ ಮುನ್ನುಡಿ ಬರೆದಿದ್ದಾರೆ ಎಂದರು.




ಕಾರ್ಯಕ್ರಮವನ್ನು ಶಾಸಕ ಎ.ಆರ್.ಕೃಷ್ಣಮೂರ್ತಿ ಉದ್ಘಾಟಿಸಿದರು.

ಶಕ್ತಿ ಯೋಜನೆಯಡಿ ಮಹಿಳೆಯರು ಚಾಮರಾಜನಗರದಿಂದ ಬೀದರ್‌ವರೆಗೂ ಉಚಿತ ಪ್ರಯಾಣ ಮಾಡುತ್ತಿದ್ದಾರೆ. ಗೃಹ ಜ್ಯೋತಿ ಯೋಜನೆಯಡಿ 200 ಯೂನಿಟ್‌ವರೆಗೂ ಉಚಿತವಾಗಿ ವಿದ್ಯುತ್ ಒದಗಿಸಲಾಗುತ್ತಿದೆ. ಹಸಿವು ಮುಕ್ತ ಕರ್ನಾಟಕದ ಉದ್ದೇಶ ಹೊಂದಿರುವ ಅನ್ನಭಾಗ್ಯ ಯೋಜನೆಯಡಿ ನೀಡಲಾಗುತ್ತಿರುವ 10 ಕೆಜಿ ಅಕ್ಕಿ ಪ್ರಮಾಣದಲ್ಲಿ 5 ಕೆಜಿ ಅಕ್ಕಿ ನೀಡಿ ಉಳಿದ 5 ಕೆಜಿ ಅಕ್ಕಿ ಬದಲಾಗಿ ಬೇಳೆ, ಅಡುಗೆ ಎಣ್ಣೆ ಸೇರಿದಂತೆ ಇತರೆ ಸಾಮಗ್ರಿಗಳನ್ನು ನೀಡುವ ಇಂದಿರಾ ಆಹಾರ ಕಿಟ್ ಜ.26 ರಿಂದ ಜಾರಿಯಾಗಲಿದೆ. ಯುವನಿಧಿ ಯೋಜನೆ ರಾಜ್ಯದ ನಿರುದ್ಯೋಗಿಗಳ ಪಾಲಿನ ಆಶಾಕಿರಣವಾಗಿದೆ. ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ರೂಪಿಸಿರುವ ಗೃಹಲಕ್ಷ್ಮೀ ಯೋಜನೆ ಅನುಷ್ಠಾನದಲ್ಲಿ ಚಾ.ನಗರ ಜಿಲ್ಲೆ ಮುಂಚೂಣಿಯಲ್ಲಿದೆ ಎಂದರು.

ಹೋಬಳಿ ವ್ಯಾಪ್ತಿಯ ಅಭಿವೃದ್ಧಿ ಸಂಬಂಧ ಸಂತೇಮರಹಳ್ಳಿಯಲ್ಲಿ ಎಳನೀರು ಮಾರುಕಟ್ಟೆ ಸ್ಥಾಪನೆಗೆ ನಬಾರ್ಡ್‌ಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಜಿಲ್ಲೆಗೆ 2ನೇ ಹಂತದ ಕೈಗಾರಿಕೆಗಳ ಸ್ಥಾಪನೆಗಾಗಿ ಭೋಗಾಪುರ, ಕುದೇರಿನಲ್ಲಿ ಗಾರ್ಮೆಂಟ್ಸ್ ತೆರೆಯಲು ಕೆಐಡಿಬಿ ಮುಂದಾಗಿದೆ. ಪಾಲಿಟೆಕ್ನಿಕ್ ಕಾಲೇಜು, ಸೋಲಾರ್ ಪ್ಲಾಂಟ್ ನಿರ್ಮಾಣದ ಚಿಂತನೆ ಇದೆ. ಉತ್ತಮ ರಸ್ತೆಗಳು ಹಾಗೂ ನೀರಾವರಿ ಯೋಜನೆಗಳು ಈ ಭಾಗದಲ್ಲಿ ಅನುಷ್ಠಾನಗೊಳ್ಳಲಿವೆ. ಕುದೇರಿನಲ್ಲಿ ರೇಷ್ಮೆ ನೂಲು ಬಿಚ್ಚಣಿಕೆದಾರರ ತರಬೇತಿ ಕೇಂದ್ರ ಪುನಶ್ಚೇತನಗೊಳಿಸಲಾಗುತ್ತದೆ. ಮಲ್ಲಹಳ್ಳಿ ಗೇಟ್ ಬಳಿ ಅಗ್ನಿಶಾಮಕ ಕೇಂದ್ರ ಆರಂಭವಾಗಲಿದೆ. ಅಲ್ಲದೇ 3 ಕರ್ನಾಟಕ ಪಬ್ಲಿಕ್ ಶಾಲೆಗಳು ಮಂಜೂರಾಗಿವೆ ಎಂದರು.

ಗ್ಯಾರಂಟಿ ಯೋಜನೆಗಳ ಜಿಲ್ಲಾಧ್ಯಕ್ಷ ಹೆಚ್.ವಿ.ಚಂದ್ರು, ತಾಲೂಕು ಅಧ್ಯಕ್ಷ ಸೋಮೇಶ್ವರ ಮಾತನಾಡಿದರು. ಈ ವೇಳೆ ಸಂತೇಮರಹಳ್ಳಿ ಗ್ರಾಪಂ ಅಧ್ಯಕ್ಷೆ ತಾಯಮಣಿ, ಉಪಾಧ್ಯಕ್ಷೆ ಹೇಮಲತಾ ಕುದೇರು ಗ್ರಾಪಂ ಅಧ್ಯಕ್ಷೆ ಸುಶೀಲಮ್ಮ, ಬಾಗಳಿ ಗ್ರಾಪಂ ಅಧ್ಯಕ್ಷೆ ರತ್ನಮ್ಮ, ತಾಪಂ ಇಓ ಗಿರಿಧರ್, ತಾಲೂಕು ಗ್ಯಾರಂಟಿ ಸದಸ್ಯ ಸುಕುಮಾರ್, ಚಿನ್ನಸ್ವಾಮಿ, ಆರ್.ರಾಜು, ಭಾಗ್ಯಮಯೂಖ, ಮಲ್ಲಿಕಾರ್ಜುನ, ಎಂ.ಕುಮಾರ್, ಸಿದ್ದಿಕ್ ಉಲ್ಲಾ, ರಮೇಶ್, ರಾಜೇಶ್, ಕುಮಾರಸ್ವಾಮಿ, ಗಣೇಶ್‌ಕುಮಾರ್, ಜಡೇಯಪ್ಪ, ರಂಗಸ್ವಾಮಿ, ಲಿಂಗಣ್ಣ ಪಿಡಿಓ ಮಮತಾ ಇದ್ದರು.

ವೀರಭದ್ರಪ್ಪ ನಿಧನ



ಯಳಂದೂರು: ಸಮಾಜ ಸೇವಕ ಹಾಗೂ ಯಳಂದೂರು ತಾಲೂಕು ಬೋರ್ಡ್ ಮಾಜಿ ಅಧ್ಯಕ್ಷರೂ ಆದ ದುಗ್ಗಹಟ್ಟಿ ವೀರಭದ್ರಪ್ಪ (93) ಬುಧವಾರ ನಿಧನರಾದರು. ಎಸ್‌ಡಿವಿಎಸ್ ವಿದ್ಯಾ ಸಂಸ್ಥೆ ಸಂಸ್ಥಾಪಕ ಅಧ್ಯಕ್ಷರಾಗಿದ್ದ ಮೃತರು ನಾಲ್ವರು ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ದುಗ್ಗಹಟ್ಟಿ ಗ್ರಾಮದಲ್ಲಿರುವ ಮೃತರ ಜಮೀನಿನಲ್ಲಿ ಸಂಜೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚಾಮರಾಜನಗರ ಜಿಲ್ಲಾಧಿಕಾರಿ, ಪೊಲೀಸ್ ವರಿಷ್ಠಾಧಿಕಾರಿ ವರ್ಗಾವಣೆ



ಶ್ರೀರೂಪಾ

ಚಾಮರಾಜನಗರ, ಡಿ.31– ಚಾಮರಾಜನಗರ ಜಿಲ್ಲಾಧಿಕಾರಿ ಶಿಲ್ಪಾನಾಗ್ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ ವರ್ಗಾವಣೆಯಾಗಿದ್ದು, ನೂತನ ಜಿಲ್ಲಾಧಿಕಾರಿಯಾಗಿ ಶ್ರೀರೂಪಾ ಹಾಗೂ ನೂತನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ಎಂ. ಮುತ್ತುರಾಜ್ ಅವರನ್ನು ನೇಮಕ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ನೂತನ ಜಿಲ್ಲಾಧಿಕಾರಿ ಶ್ರೀರೂಪಾ ಅವರು ಪ್ರಸ್ತುತ ಬೆಂಗಳೂರಿನ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವೆಗಳ ಇಲಾಖೆ ಆಯುಕ್ತರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಇದೀಗ ಅವರನ್ನು ಚಾಮರಾಜನಗರ ಜಿಲ್ಲಾಧಿಕಾರಿಯಾಗಿ ನಿಯೋಜಿಸಲಾಗಿದೆ. ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರನ್ನು ಬೆಂಗಳೂರಿನ ರೇಷ್ಮೆ ಬೆಳೆ ಅಭಿವೃದ್ಧಿ ರೇಷ್ಮೆ ಕೃಷಿ ನಿರ್ದೇಶಕರಾಗಿ ನಿಯೋಜಿಸಲಾಗಿದೆ.

ನೂತನ ಎಸ್‌ಪಿ ಮುತ್ತುರಾಜು: ಚಾಮರಾಜನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ಎಂ.ಮುತ್ತುರಾಜು ಅವರನ್ನು ನೇಮಕ ಮಾಡಿ ರಾಜ್ಯ ಸರ್ಕಾರ ಆದೇಶಿಸಿದೆ. ಮುತ್ತುರಾಜು ಅವರು ಪ್ರಸ್ತುತ ಬೆಂಗಳೂರು ಮೆಟ್ರೋ ಪಾಲಿಟನ್ ಟಾಸ್ಕ್ ಫೋರ್ಸ್ ಎಸ್ಪಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಇವರು 2014ರ ಸಾಲಿನ ಕರ್ನಾಟಕ ಬ್ಯಾಚ್‌ನ ಐಪಿಎಸ್ ಅಧಿಕಾರಿಯಾಗಿದ್ದಾರೆ. ಮುತ್ತುರಾಜು ಅವರು 2015ರಲ್ಲಿ ಚಾಮರಾಜನಗರ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದರು.



ಎಂ.ಮುತ್ತುರಾಜು

ಹಾಲಿ ಚಾಮರಾಜನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿದ್ದ ಡಾ. ಬಿ.ಟಿ. ಕವಿತಾ ಅವರನ್ನು ಬೆಂಗಳೂರಿನ ಸಿಐಡಿ ವಿಭಾಗದ ಎಸ್ಪಿಯಾಗಿ ವರ್ಗಾವಣೆ ಮಾಡಲಾಗಿದೆ.

ಶಿಕ್ಷಣ ಇಲಾಖೆಗೆ ಹೊಸ ವರ್ಷದ ಆರಂಭದಿಂದ ಶಿಕ್ಷಕರು, ಸಿಬ್ಬಂದಿಗೆ ಮೊಬೈಲ್ ಹಾಜರಾತಿ ಕಡ್ಡಾಯ

ಮೈಸೂರು, ಡಿ.31(ಎಸ್‌ಪಿಎನ್)– ದೇಶ ಈಗ ಡಿಜಿಟಲ್ ಕ್ರಾಂತಿಯ ಕಡೆಗೆ ಹೊರಳಿದೆ. ಈ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲೆಯ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರು, ಅಧಿಕಾರಿಗಳು ಸೇರಿದಂತೆ ಇತರೆ ಸಿಬ್ಬಂದಿಗೆ ಮೊಬೈಲ್(ಡಿಜಿಟಲ್) ಹಾಜರಾತಿಯನ್ನು ಜ.1ರಿಂದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಕಡ್ಡಾಯಗೊಳಿಸಿದೆ.

ಈ ಕುರಿತು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ಡಿಡಿಪಿಐ ಉದಯ್ ಕುಮಾರ್, ಜ.1 ರಿಂದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಶಿಕ್ಷಕರ ಹಾಜರಾತಿಯನ್ನು ಆನ್‌ಲೈನ್ ಕರ್ತವ್ಯ ಆ್ಯಪ್ ಮೂಲಕ ದಾಖಲಿಸುವ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಇದನ್ನು (KAAMS) Karnataka advanced attendance monitoring system) ಕರ್ನಾಟಕ ಸುಧಾರಿತ ಹಾಜರಾತಿ ಮೇಲ್ವಿಚಾರಣಾ ವ್ಯವಸ್ಥೆ ಎಂದು ಹೇಳುತ್ತೇವೆ. ಇದನ್ನು ಮೈಸೂರು, ಕಲಬುರಗಿ ಸೇರಿದಂತೆ ಕೆಲವೇ ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಜಾರಿಗೊಂಡಿದೆ.

ಮೈಸೂರು ಜಿಲ್ಲೆಯಲ್ಲಿ 8,261 ಶಿಕ್ಷಕರಿದ್ದಾರೆ. ಸೋಮವಾರ ಸಂಜೆಯವರೆಗೆ ಸುಮಾರು 5,500 ಶಿಕ್ಷಕರು ನೋಂದಣಿ ಮಾಡಿಕೊಂಡಿದ್ದು, ಇನ್ನೂ 2,761 ಶಿಕ್ಷಕರ ನೋಂದಣಿ ಬಾಕಿಯಿದೆ. ಈ ಕಾರ್ಯದಲ್ಲಿ ಶೇ.70 ರಷ್ಟು ಪ್ರಗತಿ ಸಾಧನೆ ಆಗಿದೆ. ಇದು ಜಿಪಿಎಸ್ ಆಧಾರಿತವಾಗಿ ಕೆಲಸ ನಿರ್ವಹಿಸುತ್ತದೆ. ತಾವು ಕೆಲಸ ಮಾಡುವ ಶಾಲೆಯ ವ್ಯಾಪ್ತಿಯಲ್ಲೇ ಶಿಕ್ಷಕರು ತಮ್ಮ ಹಾಜರಾತಿಯನ್ನು ಕೊಡಬೇಕಾಗುತ್ತದೆ.



ಮೈಸೂರು ಜಿಲ್ಲೆಯ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಮುಖ್ಯಶಿಕ್ಷಕರು, ಸಹಶಿಕ್ಷಕರು ಹಾಗೂ ಸಿಬ್ಬಂದಿ ವರ್ಗದವರು ಕಡ್ಡಾಯವಾಗಿ ಮೊಬೈಲ್ ಆಧಾರಿತ ಹಾಜರಾತಿ ತಂತ್ರಾಂಶವನ್ನು ಮೊಬೈಲ್‌ನಲ್ಲಿ ಡೌನ್‌ಲೋಡ್ ಮಾಡಿಕೊಂಡು ಎಲ್ಲಾ ಸಿಬ್ಬಂದಿ ತಮ್ಮ ಹೆಸರು ನೋಂದಾಯಿಸಿಕೊಂಡು ಪ್ರತಿ ದಿನದ ಹಾಜರಾತಿಯನ್ನು ಸದರಿ ತಂತ್ರಾಂಶದಲ್ಲಿಯೇ ಲಾಗಿನ್ ಹಾಗೂ ಲಾಗ್‌ಔಟ್ ಆಗುವುದರ ಮೂಲಕ ಹಾಜರಾತಿಯನ್ನು ಪ್ರಾಯೋಗಿಕವಾಗಿ 20.12.2025 ರಿಂದಲೇ ನಿರ್ವಹಿಸಬೇಕು. ಅಧಿಕೃತವಾಗಿ ಜ.1ರಿಂದ ಪಾಲನೆ ಮಾಡಿವುದು ಕಡ್ಡಾಯ ಎಂದು ಎಲ್ಲಾ ಶಾಲೆಯ ಮುಖ್ಯಶಿಕ್ಷಕರಿಗೆ ನಿರ್ದೇಶಿಸಲಾಗಿದೆ.

– ಉದಯ್‌ಕುಮಾರ್, ಡಿಡಿಪಿಐ, ಮೈಸೂರು ಜಿಲ್ಲಾ ಶಾಲಾ ಶಿಕ್ಷಣ ಇಲಾಖೆ

ಜಿಲ್ಲೆಯ ಬೇರೆ ಬೇರೆ ಶಾಲೆಗಳಲ್ಲಿ ಬೇರೆ ಬೇರೆ ಸಮಯ ನಿಗದಿಪಡಿಸಿದ್ದು, ಬೆಳಗ್ಗೆ 9:30 ರಿಂದ ಸಂಜೆ 4:30, ಬೆ. 10 ರಿಂದ ಸಂಜೆ 4 ಗಂಟೆ, ಹಾಗೂ ಬೆಳಗ್ಗೆ 9 ರಿಂದ 3:30 ಹೀಗೆ ಸಮಯ ಬೇರೆ ಬೇರೆಯಿದೆ. ಡಿಜಿಟಲ್ ಹಾಜರಾತಿಯಲ್ಲಿ ಬೆಳಗ್ಗೆ 10 ರಿಂದ ಸಂಜೆ 4:30ರವರೆಗೆ ಸಮಯ ನಿಗದಿಪಡಿಸಲಾಗಿದೆ.

ದಿನದ 7 ಗಂಟೆಗಳ ಕಾಲ ಶಿಕ್ಷಕರು ಶಾಲೆಯ ಆವರಣದಲ್ಲಿ ಇರಬೇಕು ಎಂಬುದು ಇಲಾಖೆ ಪ್ರಮುಖ ಉದ್ದೇಶವಾಗಿದೆ. ಪ್ರತಿದಿನ ಶಿಕ್ಷಕರು ಶಾಲೆಗೆ ಬರುವಾಗ ಹಾಗೂ ಹೋಗುವಾಗ ಹಾಜರಾತಿ ನೋಂದಣಿ ಮಾಡುವುದು ಕಡ್ಡಾಯ. ಶಾಲೆಗಳಲ್ಲಿ ಶಿಕ್ಷಕರ ಹಾಜರಾತಿ ಗಮನಿಸಲು ಶಾಲಾ ಶಿಕ್ಷಣ ಇಲಾಖೆಯಲ್ಲಿ ಅಧಿಕಾರಿಗಳ ಸಂಖ್ಯೆ ಕಡಿಮೆ. ಆಗಾಗ್ಗೆ ಶಾಲೆಗಳಿಗೆ ತೆರಳಿ ತಪಾಸಣೆ ಮಾಡುವುದು ಕಷ್ಟದ ಕೆಲಸ.

ಹಾಗಾಗಿ ಮೊಬೈಲ್ ಹಾಜರಾತಿ ವ್ಯವಸ್ಥೆಯಿಂದಾಗಿ ಎಲ್ಲಿ ಶಿಕ್ಷಕರ ಕೊರತೆಯಿದೆ. ಯಾವ ಶಾಲೆಯಲ್ಲಿ ಶಿಕ್ಷಕರ ಹಾಜರಾತಿಯಲ್ಲಿ ವ್ಯತ್ಯಾಸಗಳಾಗುತ್ತವೆ. ಯಾವ ಶಿಕ್ಷಕ, ಸಿಬ್ಬಂದಿ ದೈನಂದಿನ ಹಾಜರಾತಿಯನ್ನು ಸರಿಯಾಗಿ ಪಾಲಿಸುತ್ತಿಲ್ಲ ಎಂಬುದು ಎಲ್ಲವೂ ಜಿಲ್ಲಾ ಕೇಂದ್ರದಲ್ಲಿ ಇನ್ಮುಂದೆ ಮಾಹಿತಿ ಇರಲಿದೆ. ಇದರಿಂದ ಶಿಕ್ಷಕರು ತಮ್ಮ ಜವಾಬ್ದಾರಿಯಿಂದ ನುಣುಚಿಕೊಳ್ಳದೆ, ಶಿಕ್ಷಕರು ಶಾಲೆಯಲ್ಲಿ ಇರುವುದಕ್ಕೆ ಇದೊಂದು ಮಾನದಂಡವಾಗಲಿದೆ.

ಸಮಯ ಪರಿಪಾಲನೆಗೆ ಪ್ರಥಮ ಆದ್ಯತೆ: ಡಿಜಿಟಲ್ ಹಾಜರಾತಿಯಿಂದ ಎಸ್‌ಎಸ್‌ಎಲ್‌ಸಿ ಫಲಿತಾಂಶದ ಮೇಲೂ ಪರಿಣಾಮ ಬೀರುತ್ತದೆ. ಪ್ರೌಢಶಾಲೆಯಲ್ಲಿ ಒಂದಿಷ್ಟು ವಿಶೇಷ ತರಗತಿ ನಡೆಸಲು ನಾವು ಯೋಜಿಸುತ್ತಿದ್ದೇವೆ. ಆ ವಿಶೇಷ ತರಗತಿಗಳನ್ನು ನಿರ್ವಹಿಸುತ್ತಿದ್ದ ಶಿಕ್ಷಕರು ಎಷ್ಟು ಸಮಯದವರೆಗೆ ಶಾಲೆಯಲ್ಲಿದ್ದರು. ಆ ಶಾಲೆಯಲ್ಲಿ ನಿಜವಾಗಲೂ ವಿಶೇಷ ಹಾಗೂ ಹೆಚ್ಚುವರಿ ತರಗತಿಗಳು ನಡೆಯುತ್ತಿವೆಯಾ. ಅದೂ ಕೂಡಾ ಇಲಾಖಾ ಗಮನಕ್ಕೆ ಬರಲಿದೆ. ಇದರಿಂದ ಮಕ್ಕಳಿಗೆ ಪಾಠ–ಪ್ರವಚನ ಆಗಲಿದೆ. ಸುರಕ್ಷತೆಯೂ ಕೂಡಾ ಹೆಚ್ಚಾಗಲಿದೆ. ಶಿಕ್ಷಕರು ಇಲ್ಲದ ಶಾಲೆಯ ಕುರಿತು ಪೋಷಕರು ದೂರು ನೀಡಿದಾಗ, ನಾವು ಪಕ್ಕದ ಶಾಲೆಯಿಂದ ಶಿಕ್ಷಕರನ್ನು ನಿಯೋಜಿಸಬಹುದಾಗಿದೆ ಎನ್ನುತ್ತಾರೆ ಡಿಡಿಪಿಐ ಉದಯ್‌ಕುಮಾರ್.

ಕೋಗಿಲು ಬಡಾವಣೆ ಅಕ್ರಮ ತೆರವು ವಿವಾದದ ಬಳಿಕ ಕೇರಳ ಸಿಎಂ ಪಿಣರಾಯ್–ಕರ್ನಾಟಕ ಸಿಎಂ ಸಿದ್ದರಾಮಯ್ಯ ಮುಖಾಮುಖಿ



ಕೇರಳದ ವರ್ಕಲಾದಲ್ಲಿ ನಡೆದ 93ನೇ ಶಿವಗಿರಿ ತೀರ್ಥಯಾತ್ರೆ ಕಾರ್ಯಕ್ರಮದಲ್ಲಿ ಕೇರಳ ಸಿಎಂ ಪಿಣರಾಯಿ ವಿಜಯನ್, ಕರ್ನಾಟಕ ಸಿಎಂ ಸಿದ್ದರಾಮಯ್ಯ ಹಸ್ತಲಾಘವ ಮಾಡಿದರು.

ವರ್ಕಲಾ (ಕೇರಳ) ಡಿ.31(ಕೆಎಂಶಿ)– ಯಲಹಂಕದ ಕೋಗಿಲು ಲೇಔಟ್ ಕ್ರಾಸ್‌ನಲ್ಲಿನ ಅಕ್ರಮ ಗುಡಿಸಲುಗಳ ತೆರವು ಮಾಡಿದ ವಿಚಾರವನ್ನು ಕೇರಳ ಸಿಎಂ ಪಿಣರಾಯಿ ವಿಜಯನ್ 'ಬುಲ್ಡೋಜರ್ ಕ್ರಮ' ಎಂದು ಟೀಕೆ ಮಾಡಿದ್ದರು. ಇದರ ಬೆನ್ನಲ್ಲೇ ಈ ವಿಚಾರ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಾಗಿತ್ತು. ಈ ವಿಚಾರ ನಡೆದು ಒಂದು ವಾರದ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಬುಧವಾರ ಒಂದೇ ವೇದಿಕೆಯನ್ನು ಹಂಚಿಕೊಂಡು ಕೈಕುಲುಕಿದರು.

ಕೇರಳದ ವರ್ಕಲಾದಲ್ಲಿ ನಡೆಯುತ್ತಿರುವ 93ನೇ ಶಿವಗಿರಿ ತೀರ್ಥಯಾತ್ರೆ ಕಾರ್ಯಕ್ರಮದಲ್ಲಿ ಈ ಬೆಳವಣಿಗೆ ಸಂಭವಿಸಿದೆ. ಸಿದ್ದರಾಮಯ್ಯ ಭಾಷಣಕ್ಕೂ ಮೊದಲೇ ವಿಜಯನ್ ಕಾರ್ಯಕ್ರಮದಿಂದ ನಿರ್ಗಮಿಸಿದರು. ಅವರು ಹೊರಡುವ ಮುನ್ನ ಸಿದ್ದರಾಮಯ್ಯ ಅವರ ಬಳಿಗೆ ಹೋಗಿ ಆತ್ಮೀಯವಾಗಿ ಮಾತನಾಡಿದರು. ಸಚಿವ ಸಂಪುಟ ಸಭೆಯಲ್ಲಿ ಭಾಗವಹಿಸಲು ತಾವು ಹೊರಡಬೇಕಾಗಿರುವ ವಿಷಯವನ್ನು ವಿಜಯನ್ ಸಿದ್ದರಾಮಯ್ಯ ಅವರಿಗೆ ತಿಳಿಸಿದರು.

ನಂತರ ಮಾತನಾಡಿದ ಸಿಎಂ ಸಿದ್ದರಾಮಯ್ಯ, ವೈವಿಧ್ಯತೆ ನಡುವೆ ಮನುಷ್ಯರು ಒಟ್ಟಾಗಿ ಬಾಳುವ ಸಹೃದಯಿ ಭಾರತ ನಿರ್ಮಾಣ ನಾರಾಯಣ ಗುರುಗಳ ಗುರಿಯಾಗಿತ್ತು. ನೈತಿಕತೆ ಇಲ್ಲದ ಅಹಂಕಾರದ ಭಾಷೆಯಲ್ಲಿ ಕೋಮುವಾದ ಮಾತಾಡುವ ಬಗ್ಗೆ ಅವರು ಎಚ್ಚರಿಸಿದ್ದರು. ನಾರಾಯಣ ಗುರು ಅವರು ಕೇವಲ ಒಬ್ಬ ಸಂತ ಮಾತ್ರ ಆಗಿರಲಿಲ್ಲ. ಸಮಾನತೆ ಮತ್ತು ನೈತಿಕತೆಯ ಚಳವಳಿಯಾಗಿದ್ದರು.

ವಾಲ್ಮೀಕಿ ನಿಗಮ ಹಗರಣ ಪ್ರಕರಣ

ಮಾಜಿ ಸಚಿವ ನಾಗೇಂದ್ರ ಆಪ್ತರಿಬ್ಬರ ಮನೆ ಮೇಲೆ ಸಿಬಿಐ ದಾಳಿ

ಬೆಂಗಳೂರು, ಡಿ.31– ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದ ಹಗರಣ ಸಂಬಂಧ ಮಾಜಿ ಸಚಿವ ಹಾಗೂ ಶಾಸಕ ಬಿ.ನಾಗೇಂದ್ರ ಆಪ್ತರ ಮನೆ ಮೇಲೆ ಸಿಬಿಐ ದಾಳಿ ನಡೆಸಿದೆ. ಬೆಂಗಳೂರಿನಿಂದ ಆಗಮಿಸಿದ್ದ ನಾಲ್ವರು ಅಧಿಕಾರಿಗಳ ತಂಡ ಸ್ಥಳೀಯ ಪೊಲೀಸರಿಗೆ ಮಾಹಿತಿಯನ್ನು ಕೊಡದೆ ದಾಳಿ ನಡೆಸಿದೆ.

ನಾಗೇಂದ್ರ ಆಪ್ತರಾದ ತೇರು ಬೀದಿಯಲ್ಲಿರುವ ವಿಶ್ವನಾಥ್ ಮತ್ತು ಹುಸೇನ್ ನಗರದಲ್ಲಿರುವ ಮಾರುತಿ ಎಂಬುವರ ಮನೆ ಮೇಲೆ ದಾಳಿ ನಡೆದಿದೆ. ಈ ಇಬ್ಬರು ನಾಗೇಂದ್ರ ಅವರ ಬಳಿ ಕೆಲಸ ಮಾಡುತ್ತಿದ್ದರಂತೆ. ವಿಶ್ವನಾಥ್ ಅಕೌಂಟ್ಸ್ ನೋಡಿಕೊಳ್ಳುತ್ತಿದ್ದರು ಎನ್ನಲಾಗಿದೆ.

ದಾಳಿ ಸಂದರ್ಭದಲ್ಲಿ ವಿಶ್ವನಾಥ್ ಮನೆಯಲ್ಲಿ ಇರಲಿಲ್ಲ ಎಂದು ತಿಳಿದುಬಂದಿದೆ. ಹೀಗಾಗಿ ಅವರ ಸಹೋದರರು ಮತ್ತು ಕುಟುಂಬದ ಸದಸ್ಯರಿಂದ ಮಾಹಿತಿ ಪಡೆದ ಸಿಬಿಐ ಕೆಲಹೊತ್ತು ವಿಚಾರಣೆಗೂ ಒಳಪಡಿಸಿತು.

ಬ್ರೂಸ್‌ಪೇಟೆ ಪೊಲೀಸ್ ಠಾಣೆಗೆ ವಿಶ್ವನಾಥ್ ಸಹೋದರನನ್ನು ಕರೆತಂದ ಪೊಲೀಸರು ವಾಲ್ಮೀಕಿ ಹಗರಣದ ಬಗ್ಗೆ ಮಾಹಿತಿಯನ್ನು ಕಲೆ ಹಾಕಿದ್ದಾರೆ. ದಾಳಿ ಸಂದರ್ಭದಲ್ಲಿ ಮನೆಯಲ್ಲಿದ್ದ ಕೆಲವು ದಾಖಲೆಗಳನ್ನು ಸಿಬಿಐ ವಶಕ್ಕೆ ಪಡೆದುಕೊಂಡಿದೆ ಎಂದು ತಿಳಿದುಬಂದಿದೆ.

ಸಿಬಿಐ ಈವರೆಗೆ ಬ್ಯಾಂಕ್ ವಿಚಾರಕ್ಕೆ ಸೀಮಿತವಾಗಿ ತನಿಖೆ ನಡೆಸುತ್ತಿತ್ತು. ಹೀಗಾಗಿ ಸಿಬಿಐನಿಂದ ಸಮಗ್ರ ತನಿಖೆ ಕೋರಿ ಶಾಸಕರಾದ ಬಸನಗೌಡ ಪಾಟೀಲ್ ಯತ್ನಾಳ್, ರಮೇಶ ಜಾರಕಿಹೊಳಿ, ಮಾಜಿ ಶಾಸಕರಾದ ಅರವಿಂದ ಲಿಂಬಾವಳಿ ಮತ್ತು ಕುಮಾರ್ ಬಂಗಾರಪ್ಪ ರಿಟ್ ಅರ್ಜಿ ಸಲ್ಲಿಸಿದ್ದರು.

ಅರ್ಜಿಯ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠ, ತೀರ್ಪು ಕಾಯ್ದಿರಿಸಿತ್ತು. ಇಂದು ತೀರ್ಪು ಪ್ರಕಟಿಸಿದ ಹೈಕೋರ್ಟ್, ವಿಶೇಷ ತನಿಖಾ ತಂಡದ (ಎಸ್‌ಐಟಿ) ತನಿಖೆಯನ್ನು ರದ್ದುಗೊಳಿಸಿ, ಪ್ರಕರಣದ ಸಮಗ್ರ ತನಿಖೆ ನಡೆಸುವಂತೆ ಸಿಬಿಐಗೆ ಸೂಚಿಸಿತ್ತು.



ಪಿಎಚ್.ಡಿ ಪದವಿ

ಮೈಸೂರು: ಡಾ.ಪುಟ್ಟಸ್ವಾಮಿ ಅವರ ಮಾರ್ಗದರ್ಶನದಲ್ಲಿ ವಿಜಯ ಅವರು ಕನ್ನಡ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ 'ಆಧುನಿಕ ಕನ್ನಡ ಕವನಗಳಲ್ಲಿ ಗಾಂಧೀಜಿ ಚಿತ್ರಣ' ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಹಿರಿಯ ಪತ್ರಕರ್ತ ಶಿವಶಂಕರಸ್ವಾಮಿ ನಿಧನ



ಮೈಸೂರು, ಡಿ.31– ಮೈಸೂರಿನ ಹಿರಿಯ ಪತ್ರಕರ್ತ ಆರ್.ಶಿವಶಂಕರಸ್ವಾಮಿ(68) ಅವರು ವಿದ್ಯಾರಣ್ಯಪುರಂನಲ್ಲಿರುವ ತಮ್ಮ ನಿವಾಸದಲ್ಲಿ ಬುಧವಾರ ಮಧ್ಯಾಹ್ನ ನಿಧನರಾದರು.

'ವಾರದ ಮಿತ್ರ' ಪತ್ರಿಕೆ ಸಂಪಾದಕರಾಗಿದ್ದ ಇವರು, ಪತ್ನಿ ಹೇಮಾ, ಮಕ್ಕಳಾದ ಪ್ರದೀಪ್, ದೀಪಿಕಾ ಸೇರಿದಂತೆ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಶಿವಶಂಕರಸ್ವಾಮಿ ಪಾರ್ಥೀವ ಶರೀರವನ್ನು ಅವರ ನಿವಾಸದ ಬಳಿ ಅಂತಿಮ ದರ್ಶನಕ್ಕಿಡಲಾಗಿದ್ದು, ಗುರುವಾರ ಮಧ್ಯಾಹ್ನ 12 ಗಂಟೆ ಬಳಿಕ ಚಾಮುಂಡಿಬೆಟ್ಟ ತಪ್ಪಲಿನ ಚಿತಾಗಾರದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಇವರ ನಿಧನಕ್ಕೆ ಬಿಜೆಪಿ ಮುಖಂಡರೂ ಆದ ಚಿಂತಕ ರಘು ಕೌಟಿಲ್ಯ, ಮೈಸೂರು ನಗರ ಕಾಂಗ್ರೆಸ್ ಉಪಾಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ ಸಂತಾಪ ಸೂಚಿಸಿದ್ದಾರೆ.



ರುಕ್ಮಿಣಿ

ಮೈಸೂರು, ಡಿ.31–ಮೈಸೂರಿನ ಸರಸ್ವತಿಪುರಂ ನಿವಾಸಿ ನಿವೃತ್ತ ಪೋಸ್ಟ್ ಮಾಸ್ಟರ್ ಕೆಂಪಯ್ಯ ಅವರ ಪತ್ನಿ ರುಕ್ಮಿಣಿ (85) ಅವರು ಬುಧವಾರ ನಿಧನರಾದರು. ಮೃತರು ಪತಿ, ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ, ಅಂತ್ಯಕ್ರಿಯೆ ನಾಳೆ (ಜ.1)ಬೆಳಗ್ಗೆ 11.30ಕ್ಕೆ ಯಳಂದೂರು ತಾಲೂಕು ಮಂಬಳ್ಳಿ ಗ್ರಾಮದಲ್ಲಿ ನೆರವೇರಲಿದ ಎಂದು ಕುಟುಂಬದ ಮೂಲಗಳು ತಿಳಿಸಿವೆ

ಭ್ರಷ್ಟಾಚಾರ ರಹಿತ ವ್ಯವಸ್ಥೆ ಇನ್ನು ಕಷ್ಟ...

ಸಂವಾದದಲ್ಲಿ ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ವಿಷಾಧ



ಕೆ.ಆರ್.ನಗರ ತಾಲೂಕಿನ ಗಂಧನಹಳ್ಳಿ ಗ್ರಾಮದ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಆಯೋಜಿಸಿದ್ದ ಪ್ರೇರಣಾ ಸಂವಾದ ಕಾರ್ಯಕ್ರಮಕ್ಕೆ ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಚಾಲನೆ ನೀಡಿದರು.

> ವಿದ್ಯಾರ್ಥಿಗಳು ಮೊದಲು ಪ್ರಾಮಾಣಿಕತೆಗೆ ಒತ್ತು ನೀಡಬೇಕು, ತಮ್ಮ ಕಣ್ಮುಂದೆ ನಡೆಯುವ ಅನ್ಯಾಯಗಳ ವಿರುದ್ಧ ಧ್ವನಿ ಎತ್ತಿ ಹೋರಾಟ ಮಾಡಬೇಕು, ತಮ್ಮ ಜೀವನದಲ್ಲಿ ನ್ಯಾಯಯುತ ಸಂಪಾದನೆಗೆ ಆದ್ಯತೆ ನೀಡಬೇಕು, ಆಗ ಮಾತ್ರ ಸಮಾಜ ಸುಧಾರಣೆ ಮಾಡಲು ಸಹಕಾರಿಯಾಗುತ್ತದೆ.
> – ಎನ್.ಸಂತೋಷ್ ಹೆಗ್ಡೆ, ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ.

ಭೇರ್ಯ: ಭ್ರಷ್ಟಾಚಾರವೇ ಇಲ್ಲದ ವ್ಯವಸ್ಥೆ ನಿರ್ಮಾಣ ಮಾಡುವುದು ತುಂಬಾ ಕಷ್ಟಕರವಾದ ಕೆಲಸ ಎಂದು ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ವಿಷಾಧ ವ್ಯಕ್ತಪಡಿಸಿದರು.

ಕೆ.ಆರ್.ನಗರ ತಾಲೂಕಿನ ಗಂಧನಹಳ್ಳಿ ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲೆ ವಿಭಾಗದ ವತಿಯಿಂದ ಆಯೋಜಿಸಿದ್ದ 'ಮಾನವೀಯ ಮೌಲ್ಯಗಳು' ಕುರಿತು ವಿಶೇಷ ಉಪನ್ಯಾಸ ಹಾಗೂ ಪ್ರೇರಣಾ ಸಂವಾದ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ವಿದ್ಯಾರ್ಥಿಯೊಬ್ಬರು ಸಂವಾದದಲ್ಲಿ ಪಾರದರ್ಶಕತೆ ಹಾಗೂ ಭ್ರಷ್ಟಾಚಾರ ನಿರ್ಮೂಲನೆ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರ ನೀಡಿದ ಅವರು, ನನ್ನನ್ನು ಲೋಕಾಯುಕ್ತ ನ್ಯಾಯಮೂರ್ತಿಯನ್ನಾಗಿ ಮಾಡಿದ ಮುಖ್ಯ ಮಂತ್ರಿಯ ವಿರುದ್ಧವೇ ಪ್ರಕರಣ ದಾಖಲು ಮಾಡಿರುವೆ. ಅಲ್ಲದೆ ಇನ್ನು ಇಬ್ಬರು ಮುಖ್ಯ ಮಂತ್ರಿಗಳ ವಿರುದ್ಧವೂ ಪ್ರಕರಣ ದಾಖಲು ಮಾಡಿರುವುದು ಪಾರದರ್ಶಕತೆಗೆ ಸಾಕ್ಷಿಯಾಗಿದೆ ಎಂದು ತಮ್ಮ ಅನುಭವವನ್ನು ಹಂಚಿಕೊಂಡರು. ಸಮಾಜದಲ್ಲಿ ಪ್ರತಿಯೊಬ್ಬರೂ ಆರ್ಥಿಕ, ಶೈಕ್ಷಣಿಕ, ಸಾಮಾಜಿಕವಾಗಿ ಮುಂದೆ ಬರಬೇಕು, ನ್ಯಾಯಯುತವಾಗಿ ಸಂಪಾದನೆ ಮಾಡಬೇಕು. ಅಲ್ಲದೇ ಕ್ರಮಬದ್ಧವಾಗಿಯೂ ಇರಬೇಕು ಎಂದ ಅವರು ಸಮಾಜದಲ್ಲಿ ಪ್ರತಿಯೊಬ್ಬ ಮನುಷ್ಯನೂ ತಮ್ಮಂತೆ ಇತರರನ್ನು ಪ್ರೀತಿಸುವ ಮಾನವೀಯ ಮೌಲ್ಯಗಳನ್ನು ರೂಢಿಸಿಕೊಳ್ಳುವ ಮೂಲಕ ಉತ್ತಮ ಸಮಾಜದಲ್ಲಿ ಉತ್ತಮ ವಾತಾವರಣ ನಿರ್ಮಾಣ ಮಾಡಲು ಮುಂದಾಗಬೇಕು ಎಂದು ವಿದ್ಯಾರ್ಥಿಗಳಿಗೆ ಮೌಲ್ಯಗಳ ಬಗ್ಗೆ ಅರಿವು ಮೂಡಿಸಿದರು.

ಭಾರತದ ರಾಜಕೀಯ ವ್ಯವಸ್ಥೆಯನ್ನು ಸುಧಾರಿಸಲು ತಮ್ಮ ಸಲಹೆ ಏನು ಎಂದು ವಿದ್ಯಾರ್ಥಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಂತೋಷ್ ಹೆಗ್ಡೆ ಅವರು, ನಗುತ್ತಲೇ ಇದು ನನಗೆ ಇಷ್ಟವಿಲ್ಲದ್ದು ಎಂದು ಹೇಳಿದರು.

ಸಂವಾದ ಕಾರ್ಯಕ್ರಮಕ್ಕೆ ಕೆ.ಆರ್. ನಗರ, ಸಾಲಿಗ್ರಾಮ ಅವಳಿ ತಾಲೂಕಿನ ಮಿರ್ಲೆ, ಹೊಸ ಅಗ್ರಹಾರ, ಹಂಪಾಪುರ, ಚಿಕ್ಕವಡ್ಡಗುಡಿ, ಅಂಕನಹಳ್ಳಿ ಗ್ರಾಮಗಳ ಸರ್ಕಾರಿ ಪ್ರೌಢಶಾಲೆಯ ಸುಮಾರು 350ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಪ್ರಾಂಶುಪಾಲ ಗಂಗಾಧರಾಚಾರ್, ಬಿಇಒ ಆರ್.ಕೃಷ್ಣಪ್ಪ, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಸ್ವಾಮಿಗೌಡ, ಪ್ರೌಢಶಾಲೆ ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷ ಸೋಮಶೇಖರ್, ಗ್ರಾಮದ ಮುಖಂಡ ಗಾಂಧಿ ಶಿವಣ್ಣ, ಸಿಡಿಸಿ ಉಪಾಧ್ಯಕ್ಷ ರಘು, ಪ್ರಕಾಶ್, ಗ್ರಾಪಂ ಅಧ್ಯಕ್ಷೆ ಮಂಗಳಮ್ಮ, ಉಪಾಧ್ಯಕ್ಷ ಲೋಕೇಶ್, ಸದಸ್ಯ ಕುಮಾರ್, ಮೋಹನ ಕುಮಾರ್ ಚವಾಣ್, ಮುಖ್ಯ ಶಿಕ್ಷಕಿ ಕೆ.ಪಿ. ಅಶಾ, ಜಿ.ಜೆ.ಸೋಮಶೆಟ್ಟಿ, ರಮೇಶ್ ಇದ್ದರು.

ಜ.4, ಸರಗೂರಲ್ಲಿ ಹನುಮ ಜಯಂತಿ ಉತ್ಸವ

ಶಾಂತಿ-ಸೌಹಾರ್ದತೆಯಿಂದ ಆಚರಿಸುವಂತೆ ಶಾಂತಿ ಸಭೆಯಲ್ಲಿ ತಹಸೀಲ್ದಾರ್ ಸೂಚನೆ



ಹನುಮ ಜಯಂತಿ ಹಿನ್ನೆಲೆಯಲ್ಲಿ ನಡೆದ ಶಾಂತಿ ಸಮಿತಿ ಸಭೆ.

ಸರಗೂರು: ಪಟ್ಟಣದಲ್ಲಿ ಜ.4 ರಂದು ಹನುಮ ಜಯಂತಿ ಸೇವಾ ಟ್ರಸ್ಟಿನಿಂದ ನಡೆಸಲುದ್ದೇಶಿಸಿರುವ ಶ್ರೀ ಹನುಮ ಜಯಂತಿ ಉತ್ಸವವನ್ನು ಶಾಂತಿ, ಸೌಹಾರ್ದತೆಯಿಂದ ಆಚರಿಸುವಂತೆ ತಹಸೀಲ್ದಾರ್ ಮೋಹನಕುಮಾರಿ ತಿಳಿಸಿದ್ದಾರೆ.

ಹನುಮ ಜಯಂತಿ ಹಿನ್ನೆಲೆಯಲ್ಲಿ ಸರಗೂರು ಪೊಲೀಸ್ ಠಾಣೆ ಆವರಣದಲ್ಲಿ ನಡೆದ ಶಾಂತಿ ಸಮಿತಿ ಸಭೆಯಲ್ಲಿ ಅವರು ಮಾತನಾಡಿದರು. ಜ.4 ರಂದು ಪಟ್ಟಣದಲ್ಲಿ ಹನುಮ ಜಯಂತಿ ಶೋಭಾಯಾತ್ರೆ ಹಿನ್ನೆಲೆಯಲ್ಲಿ ಮದ್ಯದ ಅಂಗಡಿಗಳನ್ನು ಸಂಪೂರ್ಣವಾಗಿ ಬಂದ್ ಮಾಡಿಸಲಾಗುತ್ತದೆ. ಪಟ್ಟಣದ ರಾಷ್ಟ್ರೀಯ ಹೆದ್ದಾರಿಗಳಲ್ಲಿ ವಾಹನಗಳ ಸಂಚಾರ ವ್ಯವಸ್ಥೆಗೂ ಧಕ್ಕೆಯಾಗದಂತೆ ಮೆರವಣಿಗೆಗೆ ಅನುಮತಿ ನೀಡಲಾಗಿದೆ ಎಂದು ಅವರು ಸಭೆಯಲ್ಲಿ ತಿಳಿಸಿದರು.

ಪಟ್ಟಣಕ್ಕೆ ದಿನನಿತ್ಯ ಬಂದು ಹೋಗುವ ಜನರಿಗೆ ತೊಂದರೆಯಾಗದಂತೆ ಎಚ್ಚರಿಕೆ ವಹಿಸಿ ಕಾರ್ಯಕ್ರಮಗಳನ್ನು ನಡೆಸುವಂತೆ ಅವರು ತಾಕೀತು ಮಾಡಿದರು.

ಈ ಹಿಂದಿನ ವರ್ಷದಂತೆ ಪಟ್ಟಣದಲ್ಲಿ ಹನುಮ ಜಯಂತಿಯ ಉತ್ಸವಾಚರಣೆಗಳನ್ನು ನಡೆಸಲು ಅನುಮತಿ ನೀಡಲಾಗುತ್ತಿದೆ. ಅಹಿತಕರ ಘಟನೆಗಳು ನಡೆಯದಂತೆ ಎಚ್ಚರಿಕೆ ವಹಿಸಿ, ಕಾನೂನು ನೀತಿ ನಿಯಮಾವಳಿಗಳ ಪರಿಮಿತಿಯಲ್ಲಿಯೇ ಅದ್ದೂರಿಯಾಗಿ ಕಾರ್ಯಕ್ರಮ ನಡೆಸಲು ಸಲಹೆ ನೀಡಿದರು.

ಉಪ ನಿರೀಕ್ಷಕ ಆರ್.ಕಿರಣ್ ಮಾತನಾಡಿ ಹನುಮ ಜಯಂತಿಯಲ್ಲಿ ಎಲ್ಲಾ ಜನಾಂಗದ ಮುಖಂಡರುಗಳು ಯಾವುದೇ ಭಿನ್ನಾಭಿಪ್ರಾಯ ಇಲ್ಲದೆ ಪಾಲ್ಗೊಂಡು ಶಾಂತಿ ಕಾಪಾಡಬೇಕು. ಮೆರವಣಿಗೆ ನಡೆಯುವಾಗ ಸಾರ್ವಜನಿಕರಿಗೆ ಮತ್ತು ಸುಗಮ ಸಂಚಾರಕ್ಕೆ ತೊಂದರೆ ಆಗದಂತೆ ನೋಡಿಕೊಳ್ಳಬೇಕು. ಬಂಟಿಂಗ್ಸ್, ಬ್ಯಾನರ್ ಕಟ್ಟಲು ಸಂಬಂಧಪಟ್ಟ ಇಲಾಖೆಯಿಂದ ಅನುಮತಿ ಪಡೆಯಬೇಕು. ನಿಗಧಿತ ಅವಧಿಯೊಳಗೆ ಮೆರವಣಿಗೆ ಮುಕ್ತಾಯ ಮಾಡಬೇಕು ಎಂದು ತಿಳಿಸಿದರು.

ಹನುಮ ಜಯಂತಿ ಸೇವಾ ಸಮಿತಿ ಮುಖಂಡರು ಮಾತನಾಡಿ, ಕಳೆದ ಆರು ವರ್ಷಗಳಿಂದಲೂ ಈ ಜಯಂತಿ ಉತ್ಸಾಚರಣೆ ನಡೆಸಿಕೊಂಡು ಬರಲಾಗುತ್ತಿದೆ. ವಿವಿಧ ಸಮಿತಿಗಳನ್ನು ರಚನೆ ಮಾಡಿಕೊಂಡು, ಸಮಿತಿಯ ಉಸ್ತುವಾರಿಯಲ್ಲಿ ನಡೆಸಲಾಗುತ್ತಿದೆ ಎಂದು ಸಭೆಯ ಗಮನಕ್ಕೆ ತಂದರು. ಸಭೆಯಲ್ಲಿ ಕ್ರೈಂ ಬ್ರಾಂಚ್ ಪಿಎಸ್ಐ ಗೋಪಾಲ್, ಎಎಸ್ಐ ಕೃಷ್ಣಕುಮಾರ್, ಸಿಬ್ಬಂದಿಗಳಾದ ಇಮ್ರಾನ್ ಅಹಮದ್, ಚಂದ್ರು, ಹನುಮ ಜಯಂತಿ ಸೇವಾ ಸಮಿತಿ ಅಧ್ಯಕ್ಷ ಹಾಗೂ ಮುಖಂಡರು ಇದ್ದರು.

ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನಿಂದ 11 ಕೋಟಿ ಸಾಲ



ತಾಲೂಕು ಪ್ರಾಥ ಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷ ಹಾಗೂ ರಾಜ್ಯ ನಿರ್ದೇಶಕ ಕೆಂಪಯ್ಯನಹುಂಡಿ ಮಹಾದೇವಣ್ಣ ಅವರು ಬ್ಯಾಂಕಿನ ನೂತನ ವರ್ಷದ ದಿನದರ್ಶಿಕೆಯನ್ನು ಬಿಡುಗಡೆ ಮಾಡಿದರು.

ತಿ.ನರಸೀಪುರ, ಡಿ.31– ನಮ್ಮ ಬ್ಯಾಂಕಿನ ವತಿಯಿಂದ 2024–25ನೇ ಸಾಲಿನಲ್ಲಿ ಕೋಳಿ ಮತ್ತು ಕುರಿ ಸಾಕಣೆ, ದ್ವಿಚಕ್ರ ವಾಹನ ಸಾಲ ಸೇರಿದಂತೆ ವಿವಿಧ ರೀತಿಯ ಸಾಲವಾಗಿ 11 ಕೋಟಿ ರೂ.ಗಳನ್ನು ವಿತರಣೆ ಮಾಡಲಾಗಿದೆ ಎಂದು ತಾಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷ ಹಾಗೂ ರಾಜ್ಯ ನಿರ್ದೇಶಕ ಕೆಂಪಯ್ಯನಹುಂಡಿ ಮಹಾದೇವಣ್ಣ ತಿಳಿಸಿದರು

ಪಟ್ಟಣದ ಬ್ಯಾಂಕಿನ ಆವರಣದಲ್ಲಿ ನಡೆದ ಸಂಘದ ಸದಸ್ಯರ ಸಭೆಯ ನಂತರ ಸಂಘದ ನಿರ್ದೇಶಕರ ಸಮಕ್ಷಮದಲ್ಲಿ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮದಲ್ಲಿ ತಾಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಹೊರ ತಂದಿರುವ 2026ನೇ ವರ್ಷದ ನೂತನ ವರ್ಷದ ಕ್ಯಾಲೆಂಡರ್ ಅನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು ಮುಂಬರುವ 2025–26ನೇ ಸಾಲಿನ ಆರ್ಥಿಕ ವರ್ಷದಲ್ಲಿ ಮತ್ತಷ್ಟು ಹೆಚ್ಚಿನ ಸಾಲ ವಿತರಣೆ ಮಾಡಲು ಚಿಂತನೆ ನಡೆಸಲಾಗಿದೆ.ರೈತರೂ ಸಹ ಸಕಾಲದಲ್ಲಿ ತಾವು ಪಡೆದ ಸಾಲ ಮರುಪಾವತಿ ಮಾಡಿ ಸಂಘಕ್ಕೆ ಆರ್ಥಿಕ ಬಲ ತುಂಬುವ ಕೆಲಸಕ್ಕೆ ಮುಂದಾಗಬೇಕಿದೆ ಎಂದು ಮನವಿ ಮಾಡಿದರು.

ಈ ವೇಳೆ ಬ್ಯಾಂಕಿನ ಉಪಾಧ್ಯಕ್ಷ ಎನ್.ಎನ್. ಮಹದೇವಸ್ವಾಮಿ, ಮಾಜಿ ಅಧ್ಯಕ್ಷರಾದ ಕೆ.ವಜ್ರೇಗೌಡ, ಎಂ.ಎಸ್ ಶಿವಮೂರ್ತಿ, ನಿರ್ದೇಶಕರಾದ ಎಂ.ಮಲ್ಲಿಕಾರ್ಜುನ ಸ್ವಾಮಿ, ಎನ್.ಅನಿಲ್‌ಕುಮಾರ್, ಎನ್.ಲಿಂಗಪ್ಪಾಜಿ, ಎಂ.ನಾಗರತ್ನ, ಮಹದೇವ, ರಾಜಮಣಿ ನಾಗೇಶ್, ಎಸ್.ಮಹೇಶ್, ಟಿ.ಎಸ್.ಪ್ರಸನ್ನ, ಆರ್.ಮಹೇಶ್, ಸೋಮಣ್ಣ, ಎಂ.ಕೆ. ಶಿವಕುಮಾರ್, ಜಿಲ್ಲಾ ವ್ಯವಸ್ಥಾಪಕ ಎಸ್.ಎಂ.ಮುತ್ತುರಾಜ್, ಪ್ರಭಾರ ವ್ಯವಸ್ಥಾಪಕ ಎನ್.ಮಹೇಶ್ ಹಾಜರಿದ್ದರು.

ಪ್ರತಿಯೊಬ್ಬರಿಗೂ ದಿನದರ್ಶಿಕೆ ಬಹಳ ಮುಖ್ಯ



ಮಲ್ಕುಂಡಿ: ಪ್ರತಿಯೊಬ್ಬರಿಗೂ ದಿನದರ್ಶಿಕೆ ಬಹಳ ಮುಖ್ಯವಾಗಿದೆ ಎಂದು ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಎಂ.ಸಿ.ಉಮೇಶ್ ಹೇಳಿದರು.

ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ವರ್ಷದ ಕ್ಯಾಲೆಂಡರ್ ಅನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು ಯಾವುದೇ ಕಾರ್ಯ ನಿರ್ವಹಿಸಲು ಮತ್ತು ಹಬ್ಬ ಹರಿದಿನ ತಿಳಿಯಲು ಪ್ರತಿಯೊಬ್ಬರಿಗೂ ದಿನದರ್ಶಿಕೆ ಬಹಳ ಮುಖ್ಯ ಎಂದ ಅವರು ರೈತರು ಹೈನುಗಾರಿಕೆಯಲ್ಲಿ ಮುಂಬಾರಲು ಸಂಘಕ್ಕೆ ಗುಣಮಟ್ಟದ ಹಾಲನ್ನು ಶೇಖರಣೆ ಮಾಡಿದಾಗ ಸಂಘವು ಹೆಚ್ಚಿನ ಲಾಭ ಕಾಣಬಹುದು ಎಂದು ತಿಳಿಸಿದರು.

ಈ ವೇಳೆ ತಾಪಂ ಮಾಜಿ ಸದಸ್ಯ ಎಸ್.ಬಸವರಾಜ್, ಗ್ರಾಪಂ ಮಾಜಿ ಸದಸ್ಯ ಎಂ.ಎನ್.ಸತೀಶ್, ಹುರ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕ ಎಂ.ಪುಟ್ಟಸ್ವಾಮಿ, ಸಂಘದ ಉಪಾಧ್ಯಕ್ಷೆ ಗೌರಮ್ಮ, ನಿರ್ದೇಶಕರುಗಳಾದ ನಿಂಗಣ್ಣ, ಮಹೇಶ್, ಪುಟ್ಟಸ್ವಾಮಿ, ಮಹದೇವಗೌಡ, ಸುವರ್ಣಮ್ಮ, ಗೌರಮ್ಮ, ಶಿವಕುಮಾರ್, ಸಿಇಓ ಮುತ್ತುರಾಜ್ ಸೇರಿದಂತೆ ಪ್ರಮುಖರು ಹಾಜರಿದ್ದರು.

ಕುವೆಂಪು ಜಯಂತಿ, ಹೊಸ ವರ್ಷ ಆಗಮನದ ಹಿನ್ನೆಲೆ

ಪೌರ ಕಾರ್ಮಿಕರಿಗೆ ಹೊಸ ಬಟ್ಟೆ ನೀಡಿ ಸನ್ಮಾನ




ಪೌರಕಾರ್ಮಿಕರಿಗೆ ಶಾಲು ಹೊದಿಸಿ ಹೊಸ ಬಟ್ಟೆ ನೀಡಿ ಸನ್ಮಾನಿಸಲಾಯಿತು.

ಹುಣಸೂರು, ಡಿ.31– ಕನ್ನಡ ರಾಜ್ಯೋತ್ಸವ ಜಿಲ್ಲಾ ಪ್ರಶಸ್ತಿ ಪುರಸ್ಕೃತರಾದ ಹಾಗೂ ಕರ್ನಾಟಕ ದಲಿತ ಮಹಿಳಾ ಒಕ್ಕೂಟದ (ಅಂಬೇಡ್ಕರ್ ವಾದ) ಸಂಚಾಲಕರಾದ ಮಹದೇವಮ್ಮ ಕಟ್ಟೆಮಳವಾಡಿ ಅವರು ಹೊಸ ವರ್ಷದ ಹಿನ್ನೆಲೆಯಲ್ಲಿ ಪೌರ ಕಾರ್ಮಿಕರಿಗೆ ಶಾಲು ಹೊದಿಸಿ ಹೊಸ ಬಟ್ಟೆ ನೀಡಿ ಸನ್ಮಾನಿಸಿದರು.

ಕುವೆಂಪು ಅವರ ಜನ್ಮ ದಿನಾಚರಣೆ ಹಾಗೂ ಹೊಸ ವರ್ಷದ ಆಗಮನದ ಹಿನ್ನೆಲೆ ಯಲ್ಲಿ ಹೊಸ ಬಸ್ ನಿಲ್ದಾಣವನ್ನು ಶುಚಿಯಾಗಿರಿಸುವ ಕಾಯಕದಲ್ಲಿ ಕಳೆದ ಏಳೆಂಟು ವರ್ಷಗಳಿಂದಲೂ ನಿರಂತರವಾಗಿ ಕರ್ತವ್ಯ ನಿರ್ವಹಿಸುತ್ತಿರುವ ಪೌರ ಕಾರ್ಮಿಕರಾದ ಮಂಜುಳಾ, ಸಂತೋಷ್, ಮಹೇಶ್, ವಿದ್ಯಾ ಹಾಗೂ ಇನ್ನೂ 10 ಮಂದಿ ಪೌರ ಕಾರ್ಮಿಕರ ಸೇವೆ ಯನ್ನು ಗುರುತಿಸಿ ಬುಧವಾರ ಎಲ್ಲರಿಗೂ ಬಟ್ಟೆ ಮತ್ತು ಸಿಹಿ ತಿಂಡಿ ವಿತರಿಸಲಾಯಿತು.

ಕೆಎಸ್‌ಆರ್‌ಟಿಸಿ ನಿಯಂತ್ರಣಾಧಿಕಾರಿ ಕಾಳೇಗೌಡ, ಸಂಚಾರ ನಿಯಂತ್ರಕ ಬಸವರಾಜ್, ಕುಮಾರಸ್ವಾಮಿ, ಕೆಂಡಗಣಪ್ಪ ಹಾಗೂ ಇತರೆ ಚಾಲಕರು ನಿರ್ವಾಹಕರ ಸಮ್ಮುಖದಲ್ಲಿ ಎಲ್ಲಾ ಪೌರ ಕಾರ್ಮಿಕರಿಗೂ ಹೊಸ ವಸ್ತ್ರಗಳನ್ನು ನೀಡಿ, ಸಿಹಿ ತಿನ್ನಿಸಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ದಲಿತ ಹಿರಿಯ ಮುಖಂಡ ಹಾಗೂ ಜಿಲ್ಲಾ ಸೋಶಿಯಲ್ ಕೊರಂ ಸಮಿತಿಯ ಅಧ್ಯಕ್ಷ ಜೆ. ಮಹದೇವ್, ಅಹಿಂದ ಜನಜಾಗೃತಿಯ ನಗರಾಧ್ಯಕ್ಷ ಸೋಮಣ್ಣ ತಾಲೂಕು ಅಲ್ಪಸಂಖ್ಯಾತರ ಕಲ್ಯಾಣಾಭಿವೃದ್ಧಿ ಸಮಿತಿಯ ಅಧ್ಯಕ್ಷ ಡೇವಿಡ್ ರತ್ನಪುರಿ ಮುಂತಾದವರು ಹಾಜರಿದ್ದರು.

ಜಿಲ್ಲಾ ಮಟ್ಟಕ್ಕೆ ಆಯ್ಕೆಯಾದ ಭರತನಾಟ್ಯ ಕಲಾವಿದೆ ವಿಶಾಖ



ಹೆಚ್.ಡಿಕೋಟೆ ಭರತನಾಟ್ಯದಲ್ಲಿ ಹೆಚ್.ಎನ್. ವಿಶಾಖ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ

ಪಟ್ಟಣದ ಸೆಂಟ್ ಮೇರಿಸ್ ಶಾಲೆಯ ಆವರಣದಲ್ಲಿ ನಡೆದ ತಾಲೂಕು ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮದಲ್ಲಿ ಭರತನಾಟ್ಯದಲ್ಲಿ ತಾಲೂಕಿಗೆ ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಪಟ್ಟಣದ ಸೇಂಟ್ ಮೇರಿಸ್ ಶಾಲೆ ಚರ್ಚ್ ಕ್ಯಾಂಪಸ್‌ನಲ್ಲಿ ಎಂಟನೇ ತರಗತಿ ಓದುತ್ತಿರುವ ವಿಶಾಖ ಜೀ ಕನ್ನಡ ಡ್ರಾಮಾ ಜೂನಿಯರ್ಸ್ ಸೀಸನ್ 5ನಲ್ಲಿ ಫೈನಲ್‌ಗೆ ಆಯ್ಕೆಯಾಗಿದ್ದರು. ಇದರೊಂದಿಗೆ ಕೆಲವು ಚಲನಚಿತ್ರಗಳಲ್ಲಿಯೂ ನಟಿಸುತ್ತಿದ್ದು, ಮಂಗಳವಾರ ನಡೆದ ತಾಲೂಕು ಮಟ್ಟದ ಕಾರಂಜಿ ಕಾರಂಜಿಯಲ್ಲಿ ತಾಲೂಕಿಗೆ ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿ ತಾಲೂಕಿಗೆ ಕೀರ್ತಿ ತಂದಿದ್ದಾರೆ.

ಮೂಗೂರಲ್ಲಿ ವಿಜೃಂಭಣೆಯ ವಧೆ ಉತ್ಸವ




ಮೂಗೂರು: ಜ.3 ರಿಂದ 7 ರವರೆವಿಗೆ ಜರುಗಲಿರುವ ಇಲ್ಲಿನ ಶ್ರೀ ತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವದ ನಿಮಿತ್ತ ಬುಧವಾರ ವಧೆ ಉತ್ಸವವು ಬಹಳ ಸಡಗರದಿಂದ ನಡೆಯಿತು.

ಡಿ.24ರಂದು ಅಸ್ಥನ ಅಂಕುರಾರ್ಪಣೆಯ ಮೂಲಕ ಜಾತ್ರೆಗೆ ಸಾಂಕೇತಿಕವಾಗಿ ಚಾಲನೆ ದೊರೆತ್ತಿದ್ದು ಅಮ್ಮ ನವರ 6 ದಿನಗಳ ಮೌನ ವ್ರತದೊಂದಿಗೆ ಮೂಕಾಸುರನೆಂಬ ರಾಕ್ಷಸನನ್ನು ಸಂಹಾರ ಮಾಡಲು ತಪ್ಪಸಿನ ಮೂಲಕ ದೇವಾನುದೇವತೆಗಳ ಅನುಗ್ರಹ ಪಡೆಯುವ ಆಚರಣೆಯೇ ವಧೆ ಉತ್ಸವ.

ಬೆಳಗಿನ ಜಾವ ಅಮ್ಮನವರಿಗೆ ದೇಗುಲದಲ್ಲಿ ಪೂರ್ಣಾಭಿಷೇಕ, ಹೂವಿನ ಅಲಂಕಾರದಿಂದ ವಿಶೇಷ ಪೂಜೆ ನಡೆಯಿತು. ಗ್ರಾಮದ ಅಂಬೇಡ್ಕರ್ ಬಡಾವಣೆಯ ಹೆಬ್ರೆ ಮನೆಯಿಂದ ಮುಖಂಡರೊಡನೆ ಹೊರಟ ಹೆಬ್ರೆಯು ಹೆತ್ತವ್ವ ಕಲ್ಲಿನ ಬಳಿ ಹಾಗೂ ದುಬ್ಲಮ್ಮ ನವರ ದೇಗುಲದಲ್ಲಿ ಕಂಕಣಧಾರಿ ಅರ್ಚಕರು ಪೂಜೆ ಸಲ್ಲಿಸಿ ಶ್ರೀ ತ್ರಿಪುರ ಸುಂದರಿ ಅಮ್ಮ ನವರ ದೇಗುಲಕ್ಕೆ ನಡೆ ಮಡಿಯಲ್ಲಿ ಆಗಮಿಸುವ ಮಾರ್ಗದುದ್ದಕ್ಕೂ ಮಹಿಳೆಯರು ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಅಲ್ಲಲ್ಲೇ ಹೂ ಅಕ್ಕಿ ಎಣ್ಣೆ ಎರೆದು ನಮಿಸಿದರು. ದೇಗುಲದ ಬಳಿ ಆಗಮಿಸುತ್ತಿದ್ದಂತೆ ರೈತರು ತಮ್ಮ ಜಮೀನಿನಿಂದ ತಂದು ದೇಗುಲದ ಮುಂದೆ ರಾಶಿ ಹಾಕಿದ ಭತ್ತದ ಹುಲ್ಲಿಗೆ ಅಗ್ನಿ ಸ್ಪರ್ಶ ಮಾಡಲಾಯಿತು. ಹೆಬ್ರೆಗಳ ಸಮೇತ ದೇಗುಲ ಪ್ರವೇಶಿಸಿ ಕಂಕಣಧಾರಿ ಅರ್ಚಕರು ದೀಪಾರತಿ, ಕುಂಭಾರತಿ, ಪಂಚಾರತಿ, ವಿವಿಧ ಬಗೆಯ ಮಂಗಳಾರತಿಯನ್ನು ನೆರವೇರಿಸಿದರು.

ಸಂಜೆ ಮಂಟಪ ಪೂಜೆ: ಸಹೋದರ ಬಸ್ತಿ ಗುಡಿ ಭೈರಪ್ಪನಿಗೆ ವಸ್ತ್ರ ನೀಡಿ ಬಸದಿ ಬಳಿ ಅಮ್ಮನವರ ಪಂಜಿನ ಸೇವೆ ಪೂಜೆ ಸಲ್ಲಿಸಿದರು, ಬಳಿಕ ಕಣಿಯರ ಮಂಟಪ ಎಂದೇ ಕರೆಯಲ್ಪಡುವ ದೊಡ್ಡ ಕೆರೆ ಬಳಿ ಕಣಿಯರ ಸಮುದಾಯ ಕುಟುಂಬಸ್ಥರು ಮಂಟಪದಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ಬಳಿಕ ಮುಖ್ಯ ರಸ್ತೆಯ ಮೂಲಕ ಉತ್ಸವ ನಡೆಸಲಾಯಿತು. ಈ ಸಂದರ್ಭದಲ್ಲಿ ಗ್ರಾಮದ ಎಲ್ಲಾ ಸಮುದಾಯದ ಮುಖಂಡರು ಪಾಲ್ಗೊಂಡಿದ್ದರು.

ದೆಹಲಿ ಪೆರೇಡ್‌ಗೆ ಆಯ್ಕೆ



ಮೈಸೂರು: ಜೆಎಸ್‌ಎಸ್ ಮಹಿಳಾ ಕಾಲೇಜಿನ ತೃತೀಯ ಬಿಎಸ್ಸಿಯಲ್ಲಿ ವ್ಯಾಸಂಗ ಮಾಡುತ್ತಿರುವ ಎನ್‌ಸಿಸಿ ಕೆಡೆಟ್ ಸೀನಿಯರ್ ಅಂಡರ್ ಆಫೀಸರ್ ಸಿ.ಸಾಂಚ್ ಮಂದಣ್ಣ ಇವರು ಜ.26ರಂದು ನವ ದೆಹಲಿಯಲ್ಲಿ ನಡೆಯಲಿರುವ RDC ಗಣರಾಜ್ಯೋತ್ಸವ ಪಥಸಂಚಲನಕ್ಕೆ ಆಯ್ಕೆಯಾಗಿದ್ದಾರೆ. ಇವರಿಗೆ ಕಾಲೇಜಿನ ಪ್ರಾಂಶುಪಾಲರು, ಎನ್‌ಸಿಸಿ ಅಧಿಕಾರಿಗಳು, ಅಧ್ಯಾಪಕರು ಮತ್ತು ಅಧ್ಯಾಪಕೇತರರು ಶುಭಕೋರಿದ್ದಾರೆ.

ಸಹಕಾರ ಸಂಘದ ಕ್ಯಾಲೆಂಡರ್ ಬಿಡುಗಡೆ



ತಿ.ನರಸೀಪುರ ಪಟ್ಟಣದಲ್ಲಿ ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ವತಿಯಿಂದ ಹೊರತಂದಿರುವ ಹೊಸ ವರ್ಷದ ದಿನದರ್ಶಿಕೆಯನ್ನು ಬಿಡುಗಡೆ ಮಾಡಲಾಯಿತು.

ತಿ.ನರಸೀಪುರ, ಡಿ.31– ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ವತಿಯಿಂದ ಹೊರತರಲಾಗಿರುವ ನೂತನ ವರ್ಷದ ದಿನದರ್ಶಿಕೆಯನ್ನು ಸಂಘದ ಅಧ್ಯಕ್ಷ ಟಿ.ಪಿ.ಸುಬ್ರಹ್ಮಣ್ಯ ಬಿಡುಗಡೆ ಮಾಡಿದರು.

ಸಂಘದ ಕಚೇರಿಯಲ್ಲಿ ನಡೆದ ಸರಳ ಸಮಾರಂಭದಲ್ಲಿ ದಿನದರ್ಶಿಕೆ ಬಿಡುಗಡೆ ಮಾಡಿ ಮಾತನಾಡಿದ ಅವರು ಸಂಘವು ಪ್ರಸಕ್ತ ವರ್ಷದಲ್ಲಿ ಉತ್ತಮ ವ್ಯವಹಾರದೊಂದಿಗೆ ಸುಸ್ಥಿತಿಯಲ್ಲಿ ಮುಂದುವರೆದಿದೆ. ರೈತರು ಸಂಘದ ಷೇರುದಾರರು ಸಹಕಾರ ಸಂಘದ ಅಭಿವೃದ್ಧಿಗಾಗಿ ತಮ್ಮ ಕೊಡುಗೆ ನೀಡುತ್ತಾ ಬಂದಿದ್ದಾರೆ. ಹಾಗಾಗಿ ಸಂಘವು ಅಭಿವೃದ್ಧಿ ಹೊಂದಲು ಸಾಧ್ಯವಾಗಿದೆ ಎಂದರು.

ಮುಂಬರುವ ಆರ್ಥಿಕ ವರ್ಷದಲ್ಲಿ ರೈತರ ಅನುಕೂಲಕ್ಕಾಗಿ ಭತ್ತ ಸಂಗ್ರಹಿಸಿಡಲು ಬೃಹತ್ ಗೋದಾಮು ನಿರ್ಮಾಣ ಮಾಡುವ ಗುರಿಯನ್ನು ಆಡಳಿತ ಮಂಡಳಿ ಹೊಂದಿದೆ, ಶವ ಸಾಗಿಸುವ ವಾಹನದ ತಯಾರಿಕಾ ಕಾರ್ಯ ಅಂತಿಮ ಹಂತದಲ್ಲಿದ್ದು ಶೀಘ್ರದಲ್ಲೇ ಸಾರ್ವಜನಿಕ ಸೇವೆಗೆ ಸಮರ್ಪಿಸಲಾಗುತ್ತದೆ ಎಂದರು.

ಈ ವೇಳೆ ಸಂಘದ ಉಪಾಧ್ಯಕ್ಷ ಮಲ್ಲಣ್ಣ ನಿರ್ದೇಶಕರುಗಳಾದ ರಂಗಸಮುದ್ರ ಟಿ.ವಾಸುದೇವ, ವೈ.ಎಸ್.ರಾಮಸ್ವಾಮಿ, ಬಿ.ಎಸ್. ಮಹೇಶ್, ಎಂ.ಎಂ.ಜಯಣ್ಣ ಎಂ.ಎಸ್.ಬಸವರಾಜು, ಎಂ.ಕೆ.ಮಹೇಶ್, ಕೆ.ಎಂ.ಸುನಿಲ್, ಡಿ.ಕೋಮಲ ಕುಮಾರಸ್ವಾಮಿ, ಎಸ್.ನಿರ್ಮಲ ರಂಗಸ್ವಾಮಿ, ಶಿವಲಿಂಗೇಗೌಡ, ಕಾರ್ಯದರ್ಶಿ ಜಿ.ರಘುನಂದನ್, ಸಿಬ್ಬಂದಿಗಳಾದ ಟಿ.ಜಿ.ಸುಮಿತ್ರ, ಎನ್.ಮಹೇಶ್, ಡಿ.ಪಿ.ಸಂದೇಶ್ ಹಾಜರಿದ್ದರು.

ಡಾ.ಡಿ.ವೀರೇಂದ್ರ ಹೆಗ್ಗಡೆಯವರಿಗೆ ಆಮಂತ್ರಣ



ಪಿರಿಯಾಪಟ್ಟಣ ತಾಲೂಕು ಬೆಟ್ಟದಪುರ ಸಮೀಪದ ಭುವನಹಳ್ಳಿಯ ಪ್ರಖ್ಯಾತ ಪಂಡಿತರಾದ ದಿ.ಡಿ.ಪದ್ಮನಾಭ ಶರ್ಮಾರವರ 100ನೆಯ ವರ್ಷದ ಜನ್ಮ ಶತಮಾನೋತ್ಸವ ಫೆಬ್ರವರಿ ತಿಂಗಳಲ್ಲಿ ಆಚರಿಸಲು ನಿರ್ಧರಿಸಿದ್ದು, ಅದರ ಅಂಗವಾಗಿ ಕಾರ್ಯಕ್ರಮಕ್ಕೆ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆಯವರಿಗೆ ಆಮಂತ್ರಣ ನೀಡಲಾಯಿತು.

ಶ್ರೀ ಲಕ್ಷ್ಮೀ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ವೈಕುಂಠ ದರ್ಶನ



ಹುಣಸೂರು, ಡಿ.31– ನಗರದ ಹಾಲಗೆರೆಯಲ್ಲಿರುವ ಶ್ರೀ ಲಕ್ಷ್ಮಿ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ 3ನೇ ವರ್ಷದ ವೈಕುಂಠ ಏಕಾದಶಿ ವಿಶೇಷ ಪೂಜೆ ಮತ್ತು ಜಾತ್ರಾ ಮಹೋತ್ಸವ ನಡೆಯಿತು.

ಶ್ರೀವಾರಿಯವರಿಗೆ ಬ್ರಾಹ್ಮಿ ಮುಹೂರ್ತದಲ್ಲಿ ಸುಪ್ರಭಾತ ಸೇವೆ, ಅಭಿಷೇಕ, ಕಲಾಕರ್ಷಣೆ, ಗೋಪೂಜೆ, ವೈಕುಂಠ ದ್ವಾರ ಪೂಜೆ, ಅಷ್ಟಬಲಿ ಪೂಜೆ, ಶ್ರೀವಾರಿಯವರ ಪ್ರಾಂಗಣ ಉತ್ಸವ, ಉಯ್ಯಾಲೆಯಲ್ಲಿ ಪ್ರತಿಷ್ಠಾಪಿಸಿ ಮಹಾ ಮಂಗಳಾರತಿ ನಂತರ ಭಕ್ತಾದಿಗಳಿಗೆ ವೈಕುಂಠದ್ವಾರ ಪ್ರವೇಶ, ಕಲ್ಪಿಸಿ ಭಕ್ತಾದಿಗಳಿಗೆ ಪ್ರಸಾದ ವಿನಿ ಯೋಗ ನಡೆಯಿತು.

ಮಧ್ಯಾಹ್ನ ಫಲಹಾರ ಸೇವಾ ಪೂಜೆ, ಸಂಜೆ ಶ್ರೀವಾರಿಯವರಿಗೆ ಪ್ರಾಕಾರೋತ್ಸವ, ನಂತರ ಶಯನೋತ್ಸವ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ನಂತರ ಆಶೀರ್ವಚನ ನಡೆಯಿತು. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಶ್ರೀವಾರಿ ದರ್ಶನ ಪಡೆದು, ವೈಕುಂಠದ್ವಾರ ಪ್ರವೇಶಿಸಿ, ಪೂಜೆ ಸಲ್ಲಿಸಿ ಪ್ರಸಾದ ಸ್ವೀಕರಿಸಿದರು.

ನಗರದ ಕೋಟೆ ಸರ್ಕಲ್ ಬಳಿ ಇರುವ ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದಲ್ಲಿ ಸಹ ವಿಶೇಷವಾಗಿ ವೈಕುಂಠದ್ವಾರ ನಿರ್ಮಿಸಿ ಪೂಜೆ ಸಲ್ಲಿಸಿ ಭಕ್ತರಿಗೆ ಲಾಡು ಪ್ರಸಾದ ವಿನಿಯೋಗ ಮಾಡಲಾಯಿತು.

ಹುಣಸೂರು ತಾಲೂಕು ಕಟ್ಟೆಮಳಲವಾಡಿಯಲ್ಲಿರುವ ಪುರಾಣ ಪ್ರಸಿದ್ಧ ಶ್ರೀ ವೆಂಕಟೇಶ್ವರ ದೇವಸ್ಥಾನದಲ್ಲಿ ವೈಕುಂಠ ದ್ವಾರ ನಿರ್ಮಿಸಿ ಪೂಜೆ ಸಲ್ಲಿಸಿ, ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಲಾಯಿತು. ತಾಲೂಕಿನ ವಿವಿದೆಡೆಗಳಲ್ಲಿರುವ ದೇವಸ್ಥಾನಗಳಲ್ಲಿ ವೈಕುಂಠ ಮಹಾ ದ್ವಾರವನ್ನು ಪ್ರವೇಶಿಸಿ ಸಾವಿರಾರು ಭಕ್ತರು ದೇವರ ದರ್ಶನ ಪಡೆದು, ಪ್ರಸಾದ ಸ್ವೀಕರಿಸಿದರು. ಬೆಳಗಿನಿಂದ ಸಂಜೆಯವರೆಗೂ ಸಾರ್ವಜನಿಕರು ದೇವರ ದರ್ಶನ ಪಡೆದರು.

ಸಂಘಟನೆಯ ಕೊರತೆಯಿಂದ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿರುವ ವಿಪ್ರ ಸಮಾಜ



ಬ್ರಾಹ್ಮಣ ಕ್ಷೇಮಾಭಿವೃದ್ಧಿ ಸಂಘದ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು.

ನಂಜನಗೂಡು: ಬ್ರಾಹ್ಮಣ ಸಮುದಾಯದ ಬಂಧುಗಳು ನಿಮ್ಮ ಮಕ್ಕಳಿಗೆ ಕಡ್ಡಾಯವಾಗಿ ನೈತಿಕ ಶಿಕ್ಷಣ ಮತ್ತು ನಮ್ಮ ದೇಶದ ಧಾರ್ಮಿಕ ಸಂಸ್ಕೃತಿಯನ್ನು ತಿಳಿಸುವ ಮೂಲಕ ನಮ್ಮ ಧಾರ್ಮಿಕ ಸಂಸ್ಕೃತಿಯ ಸಂರಕ್ಷಣೆಗೆ ಮುಂದಾಗಬೇಕು ಎಂದು ಕಂಠದಾನ ಕಲಾವಿದೆ ಕುಮುದವಲ್ಲಿ ತಿಳಿಸಿದರು.

ಪಟ್ಟಣದ ಯಾತ್ರಿ ಭವನ ಕಲ್ಯಾಣ ಮಂಟಪದಲ್ಲಿ ನಂಜನಗೂಡು ಬ್ರಾಹ್ಮಣ ಕ್ಷೇಮಾಭಿವೃದ್ಧಿ ಸಂಘದಿಂದ ಏರ್ಪಡಿಸಲಾಗಿದ್ದ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಮತ್ತು ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ವಿಪ್ರ ಸಮಾಜವು ಸಂಘಟನೆಯ ಕೊರತೆಯಿಂದ ಹಲವಾರು ಸಮಸ್ಯೆಗಳನ್ನು ಎದುರಿಸುವಂತಾಗಿದೆ, ಆದ್ದರಿಂದ ವಿಪ್ರ ಸಂಘಟನೆಗಳು ಎಲ್ಲರನ್ನೂ ಒಗ್ಗೂಡಿಸಿಕೊಂಡು ಸಮಾಜ ಮುಖಿಯಾಗಿ ಕೆಲಸ ಮಾಡಿದಾಗ ಮಾತ್ರ ವಿಪ್ರರ ಏಳಿಗೆ ಸಾಧ್ಯ, ಜೊತೆಗೆ ನಿಮ್ಮ ಮಕ್ಕಳಿಗೆ ನಮ್ಮ ದೇಶದ ಸಂಸ್ಕೃತಿ, ಮತ್ತು ನೈತಿಕ ಶಿಕ್ಷಣ, ಮಾನವೀಯ ಮೌಲ್ಯಗಳ ಗುಣವನ್ನು ಬಿತ್ತಿ ಬೆಳೆಸಬೇಕು, ಆ ಮೂಲಕ ನಮ್ಮ ದೇಶದ ಧಾರ್ಮಿಕ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಕಾರ್ಯಕ್ಕೆ ಮುಂದಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ನೂತನ ವರ್ಷದ ದಿನದರ್ಶಿಕೆಯನ್ನು ಡಾ.ಲಕ್ಷ್ಮೀದೇವಿ ಬಿಡುಗಡೆ ಮಾಡಿದರು. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕ ಪಡೆದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಗೌರವಿಸಲಾಯಿತು.

ಇದೇ ಸಂದರ್ಭದಲ್ಲಿ ಸಾಯಿತಿ ಎಸ್.ಎಲ್. ವರಲಕ್ಷ್ಮಿ ಅವರಿಗೆ ವಿಪ್ರ ಸಾಹಿತ್ಯ ರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಸಮಾರಂಭದಲ್ಲಿ ಬಾಲಕೃಷ್ಣಯ್ಯ, ಪ್ರಥಮ ದರ್ಜೆ ಗುತ್ತಿಗೆದಾರರಾದ ಯು.ಎನ್. ಪದ್ಮನಾಭ ರಾವ್, ವಿಶ್ವೇಶ್ವರ ಜೋಯಿಸ್, ಸತ್ಯಪ್ರಸಾದ್, ನಾರಾಯಣ ರಾವ್, ಉಪಾಧ್ಯಾಯ ಸಹಕಾರ ಸಂಘದ ಸತೀಶ್. ಎಸ್.ದಳವಾಯಿ, ಮಹಾಲಕ್ಷ್ಮಿ, ಗೋವರ್ಧನ್, ಉಮೇಶ್ ಶರ್ಮ, ಗೋಪಿನಾಥ್, ಸಂಘದ ಅಧ್ಯಕ್ಷ ಗೋಪಾಲ ರಾವ್, ಪ್ರಧಾನ ಕಾರ್ಯದರ್ಶಿ ಎಂ.ಎ.ರಂಗನಾಥನ್, ಕೇಶವಮೂರ್ತಿ, ಸದಾನಂದ, ಪವಿತ್ರ, ಸುಪ್ರಿಯ ಇದ್ದರು.

ಮಂಜು ಮುತ್ತಿದ ಮೈಸೂರಿನ ಒಂದು ಸುಂದರ ನೋಟ




ಮಂಜು ಮುಸುಕಿದ ವಾತಾವರಣದಲ್ಲಿ ಮೈಸೂರು ವಿವಿ ಕ್ರಾಫರ್ಡ್ ಭವನ (ಎಡಚಿತ್ರ). ಮಾನಸಗಂಗೋತ್ರಿಯ ಕುಕ್ಕರಹಳ್ಳಿಕೆರೆ ರಸ್ತೆಯ ವಿಹಂಗಮ ನೋಟ.

- ಮುದ ನೀಡುವ ಆಹ್ಲಾದಕರ ವಾತಾವರಣ
- ಶೀತ ಗಾಳಿ ಇದ್ದರೂ ವಾಯುವಿಹಾರಕ್ಕೆ ರಸ್ತೆಗಿಳಿದರು
- ಮುಂಜಾನೆ ಲೈಟ್ ಹಾಕಿಕೊಂಡು ವಾಹನ ಚಾಲನೆ
- ದಟ್ಟ ಮಂಜಿನಿಂದ ಮುಂದಿನ ದೃಶ್ಯ ಮಬ್ಬು... ಮಬ್ಬು..

ಮೈಸೂರು, ಡಿ.31(ಬಿಎಲ್‌ಯು)– ಮುಂಜಾನೆ ಮಂಜು ಮುಸುಕಿದ ವಾತಾವರಣ, ಚುಮು ಚುಮು ಚಳಿ, ಊಟಿ, ಮಲೆನಾಡಿನ ಅನುಭವ, ಹೊದ್ದು ಬೆಚ್ಚಗೆ ಮಲಗಬೇಕು ಎಂದು ಮನಸು ಹಾತೊರೆದರೂ ವಾಯು ವಿಹಾರಕ್ಕೆ ಹೋಗಲೇಬೇಕೆಂಬ ಪ್ರತಿದಿನದ ಶಿಸ್ತಿನ ದಿನಚರಿ. ಇದು ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಡಿಸೆಂಬರ್ ತಿಂಗಳ ಕೊನೆಯ ದಿನವಾದ ಇಂದು ಕಂಡು ಬಂದ ದೃಶ್ಯ.

ಡಿಸೆಂಬರ್ ತಿಂಗಳ ಶೀತ ಗಾಳಿ ಒಂದು ರೀತಿ ಮೈಸೂರು ಜನರಿಗೆ ಮುದ ನೀಡುತ್ತಿದೆ. ಚಳಿ ಸ್ವಲ್ಪ ಮಟ್ಟಿಗೆ ಕಸಿವಿಸಿ ಎಂದರೂ ಆಹ್ಲಾದಕರ ಎನಿಸುತ್ತದೆ. ಈ ಹಿನ್ನೆಲೆಯಲ್ಲಿ ಬಹಳಷ್ಟು ಜನ ಚಳಿ ಇದ್ದರೂ ಪ್ರತಿದಿನ ವಾಯುವಿಹಾರಕ್ಕೆ ಹೋಗುವುದನ್ನು ರೂಢಿ ಮಾಡಿಕೊಂಡಿದ್ದಾರೆ.

ಡಿಸೆಂಬರ್ ತಿಂಗಳ ಚಳಿಗಾಲವಾದ ಇಂದು ಮೈಸೂರಿನ ತಾಪಮಾನ ಸಾಮಾನ್ಯ ದಿನಕ್ಕಿಂತ ಕಡಿಮೆಯಾಗಿಯೇ ಇತ್ತು. ರಾತ್ರಿ 12ರಿಂದ ಮುಂಜಾನೆ 7 ಗಂಟೆ ತನಕ ಮಂಜು ಮುಸುಕಿದ ವಾತಾವರಣವಿದ್ದು, 10ರಿಂದ 12 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ. ಸೂರ್ಯೋದಯವಾಗುತ್ತಿದ್ದಂತೆ ಉಷ್ಣಾಂಶ ಹೆಚ್ಚಾಗಲಿದ್ದು, ಗರಿಷ್ಠ 28 ರಿಂದ 30 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ.

ಮೈಸೂರನ್ನು ಸಾಂಸ್ಕೃತಿಕ ನಗರಿ, ಪಾರಂಪರಿಕ ನಗರಿ, ಉದ್ಯಾನನಗರಿ ಎಂದೆಲ್ಲಾ ಕರೆಯಲಾಗುತ್ತದೆ. ಮುಂಜಾನೆ ವೇಳೆ ಮಂಜು ಮುಸುಕಿನ ವಾತಾವರಣದಲ್ಲಿ ಮೈಸೂರಿನ ಜಿಲ್ಲಾಧಿಕಾರಿ ಕಚೇರಿ, ವಿಶ್ವವಿದ್ಯಾನಿಲಯ, ಅರಮನೆ ಸೇರಿದಂತೆ ಇತರೆ ಪಾರಂಪರಿಕ ಕಟ್ಟಡಗಳ ಅತ್ಯಾಕರ್ಷಕವಾಗಿರುತ್ತವೆ.

ಮೈಸೂರಿನ ಪಾರಂಪರಿಕ ಕಟ್ಟಡವನ್ನು ಆವರಿಸಿಕೊಂಡಿರುವುದನ್ನು ನೋಡಿದಾಗ ಅದರ ಸೌಂದರ್ಯ ಮತ್ತಷ್ಟು ಇಮ್ಮಡಿಗೊಳ್ಳುತ್ತದೆ. ಒಂದಕ್ಕಿಂತ ಒಂದು ಮನಸೂರೆಗೊಳಿಸುತ್ತದೆ.

ಸಾಮಾನ್ಯವಾಗಿ ಮುಂಜಾನೆ ವೇಳೆ ಲೈಟ್ ಹಾಕಿಕೊಂಡು ಮೈಸೂರು ಜನರು ಸಂಚಾರ ಮಾಡುವುದಿಲ್ಲ. ಆದರೆ ದಟ್ಟ ಮಂಜು ಆವರಿಸಿದ್ದ ಕಾರಣ ಎದುರಿನ ದೃಶ್ಯ ಮಬ್ಬಾಗಿತ್ತು. ಇದರಿಂದ ಪ್ರತಿ ವಾಹನ ಸವಾರರು ಹೆಡ್ ಲೈಟ್ ಹಾಕಿಕೊಂಡು ಹೋಗುವುದು ಸಾಮಾನ್ಯವಾಗಿತ್ತು.

ಹಸಿರಿನಿಂದ ಕಂಗೊಳಿಸುವ ಮರಗಳಿಂದ ಆವೃತ್ತವಾಗಿರುವ ಮಾನಸಗಂಗೋತ್ರಿಯ ಕುಕ್ಕರಹಳ್ಳಿ ಕೆರೆ ರಸ್ತೆಯನ್ನು ಮುಂಜಾನೆ ನೋಡಿದರೆ ಬೆಟ್ಟಗುಡ್ಡಗಳಿಂದ ಆವೃತ್ತವಾಗಿರುವ ಮಲೆನಾಡನ್ನು ನೋಡಿದಷ್ಟೇ ಅನುಭವವಾಗುತ್ತದೆ. ಎಂತಹ ಚಳಿ, ಮಳೆ ಇದ್ದರೂ ಕೆಲವರು ವಾಯು ವಿಹಾರ ಬಿಟ್ಟಿರಲಾರರು. ಮಂಜು ಮಸುಕಿದ ವಾತಾವರಣದಲ್ಲಿ ಶೀತಗಾಳಿ ಇದ್ದರೂ ಇಂದು ವಾಯುವಿಹಾರಕ್ಕೆ ಹೋಗುವುದೇ ಬೇಡ, ಮನೆಯಲ್ಲೆ ಬೆಚ್ಚಗೆ ಮಲಗಿ ಬಿಡೋಣ ಎಂಬಂತೆ ಭಾಸವಾಗುತ್ತಿತ್ತು. ಆದರೆ ಶೀತಗಾಳಿ ಹೆಚ್ಚಾಗಿದ್ದರೂ ಕೆಲವರು ವಾಯು ವಿಹಾರಕ್ಕೆ ರಸ್ತೆಗಿಳಿದಿದ್ದ ದೃಶ್ಯ ಸಾಮಾನ್ಯವಾಗಿತ್ತು. ಮೈಸೂರಿನ ಎಂ.ಜಿ. ರಸ್ತೆಯಲ್ಲಿ ತರಕಾರಿ ಮಾರಾಟಕ್ಕೆ ರೈತರು ರಾತ್ರಿ ಇಲ್ಲ ಮುಂಜಾನೆ ಬರುತ್ತಾರೆ. ಆ ವೇಳೆ ಅಲ್ಲೇ ಬೆಂಕಿ ಕಾಯುವ ದೃಶ್ಯ ಕೂಡ ಕಂಡು ಬರುತ್ತಿದೆ.

ಸೈಬಿರಿಯನ್ ಶೀತಗಾಳಿ, ಲಾ ನಿನಾ ಪರಿಣಾಮ ಮಂಜು ಮುಸುಕು



“ಸೈಬಿರಿಯನ್ ಶೀತಗಾಳಿ, ಲಾ ನಿನಾ ಪರಿಣಾಮ ಹಾಗೂ ಸ್ಥಳಿಯ ವಾತಾವರಣದ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ತಾಪಮಾನ ಕಡಿಮೆ ಪ್ರಮಾಣದಲ್ಲಿದೆ. ಇದರಿಂದ ಮೈಸೂರಿನಲ್ಲಿ ಮುಂಜಾನೆ ಮಂಜು ಮುಸುಕಿದ ವಾತಾವರಣ ಸಾಮಾನ್ಯವಾಗಿದೆ. ಸ್ಥಳಿಯ ಹವಾಮಾನದ ಪ್ರಕಾರ ಜನವರಿ ತಿಂಗಳಾಂತ್ಯದವರೆಗೆ ಮೈಸೂರಿನಲ್ಲಿ ಇದೇ ವಾತಾವರಣ ಮುಂದುವರೆಯಲಿದೆ. ಬಂಗಾಳಕೊಲ್ಲಿಯಲ್ಲಿ ಗಾಳಿಯ ಅಧಿಕ ಒತ್ತಡ ಹಾಗೂ ಅರಬ್ಬಿ ಸಮುದ್ರದಲ್ಲಿ ಸಣ್ಣ ಪ್ರಮಾಣದ ವಾಯುಭಾರ ಕುಸಿತದ ಕಾರಣ ಮೈಸೂರು, ಮಂಡ್ಯ, ಚಾಮರಾಜನಗರ ಸೇರಿದಂತೆ ಇತರೆ ಕರಾವಳಿ ಪ್ರದೇಶಗಳಲ್ಲಿ ಶೀತ ವಾತಾವರಣ ಸಾಮಾನ್ಯವಾಗಿರುತ್ತದೆ. ಶೀತಗಾಳಿ ಅತಿ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಮಂಜು ಆವರಿಸುವುದು ಸಾಮಾನ್ಯವಾಗಿರುತ್ತದೆ. **–ಡಾ.ಜಿ.ವಿ.ಸುಮಂತ್‌ಕುಮಾರ್,** ತಾಂತ್ರಿಕ ಅಧಿಕಾರಿ, ಕೃಷಿ ಹವಾಮಾನ ಕ್ಷೇತ್ರ ವಿಭಾಗ, ನಾಗನಹಳ್ಳಿ, ಮೈಸೂರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಾರ್ಕ್ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
45 ಫೇಸ್ ದಿ ಇಯರ್ (ಕ)	3 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಧುರಂಧರ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಡೆವಿಲ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಡೆವಿಲ್ (ಕ)	4 ಪ್ರದರ್ಶನಗಳು
ರಾಜಕಮಲ್	
45 (ಕ)	4 ಪ್ರದರ್ಶನಗಳು
ಸಂಗಂ	
ಮಾರ್ಕ್ (ಕ)	5 ಪ್ರದರ್ಶನಗಳು
ಲಿಡೋ	
ಅಖಂಡ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಮಾದೇವ (ಕ)	4 ಪ್ರದರ್ಶನಗಳು

ಸಿಎಂ ಸಿದ್ದರಾಮಯ್ಯರಿಂದ ಕ್ಯಾಲೆಂಡರ್ ಬಿಡುಗಡೆ...



ಕರ್ನಾಟಕ ಹಾಲು ಮಹಾಮಂಡಳ ಹೊರತಂದಿರುವ 2026ನೇ ವರ್ಷದ ಕ್ಯಾಲೆಂಡರ್ ಅನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಕಾವೇರಿ ನಿವಾಸದಲ್ಲಿ ಬಿಡುಗಡೆಗೊಳಿಸಿದರು. ಈ ಸಂದರ್ಭದಲ್ಲಿ ಪಶು ಸಂಗೋಪನಾ, ರೇಷ್ಮೆ ಸಚಿವ ಕೆ.ವೆಂಕಟೇಶ, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಂಜುಂ ಪರ್ವೇಜ್, ಕಹಾಮದ ಆಡಳಿತಾಧಿಕಾರಿ ಟಿ.ಹೆಚ್.ಎಂಕುಮಾರ್ ಹಾಗೂ ವ್ಯವಸ್ಥಾಪಕ ನಿರ್ದೇಶಕ ಬಿ.ಶಿವಸ್ವಾಮಿ, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಉಪಸ್ಥಿತರಿದ್ದರು.

ಅಕ್ರಮ ವಲಸಿಗರಿಗೆ ಮನೆ ನೀಡುವ ನಿರ್ಧಾರಕ್ಕೆ ಖಂಡನೆ

ಮೈಸೂರು,ಡಿ.31(ಎಂಟಿವೈ)– ಬೆಂಗಳೂರಿನ ಕೋಗಿಲು ಬಡಾವಣೆಯ ಅಕ್ರಮ ವಲಸಿಗರಿಗೆ ಬೈಯ್ಯಪ್ಪನಹಳ್ಳಿಯಲ್ಲಿ ಮನೆ ಹಂಚಿಕೆ ಮಾಡಲು ಸರ್ಕಾರ ನಿರ್ಧರಿಸಿರುವುದು ಖಂಡನೀಯ. ವಲಸಿಗರಿಗೆ ಮನೆ ನೀಡುವುದಕ್ಕಿಂತ ವಸತಿಹೀನ ಕನ್ನಡಿಗರಿಗೆ ಮನೆ ನೀಡಲು ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಕಸ್ತೂರಿ ಕರ್ನಾಟಕ ನ್ಯಾಯಪರ ವೇದಿಕೆ ಸಂಸ್ಥಾಪಕ ರಾಜ್ಯಾಧ್ಯಕ್ಷ ಗಿರೀಶ್ ಶಿವಾರ್ಚಕ ಒತ್ತಾಯಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹೊರ ರಾಜ್ಯಗಳಿಂದ ಬಂದವರು ಬೆಂಗಳೂರಿನಲ್ಲಿ ಆಟೋ, ಕಾರು ಚಾಲಕರಾಗಿ, ಹೋಟೆಲ್‌ಗಳಿಂದ ಹಿಡಿದು ಕಟ್ಟಡ ನಿರ್ಮಾಣ, ಕಾರ್ಖಾನೆ, ಭದ್ರತಾ ಸಂಸ್ಥೆ, ಬೀದಿ ಬದಿ ವ್ಯಾಪಾರ ಹಾಗೂ ಇನ್ನಿತರ ಕ್ಷೇತ್ರಗಳಲ್ಲಿ ಸಿಂಹಪಾಲು ಉದ್ಯೋಗ ತಮ್ಮದಾಗಿಸಿಕೊಂಡಿದ್ದಾರೆ. ಇದರಿಂದಾಗಿ ಕನ್ನಡಿಗರ ಉದ್ಯೋಗಕ್ಕೆ ಕುತ್ತು ಬಂದಿದೆ. ಇನ್ನಾದರೂ ಸರ್ಕಾರ ಕನ್ನಡಿಗರ ಉದ್ಯೋಗ ಭದ್ರತೆಯತ್ತ ಗಮನ ಹರಿಸಬೇಕು. ಕೋಗಿಲು ಬಡಾವಣೆಯಲ್ಲಿ ಅಕ್ರಮವಾಗಿ ನೆಲೆಸಿರುವ ವಲಸಿಗರಿಗೆ ಮನೆ ಕೊಡುವ ನಿರ್ಧಾರದಿಂದ ಹಿಂದೆ ಸರಿಯಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಕಸ್ತೂರಿ ಕರ್ನಾಟಕ ನ್ಯಾಯಪರ ವೇದಿಕೆ ಪದಾಧಿಕಾರಿಗಳಾದ ಪ್ರಕಾಶ್, ಕುಮಾರ್ ರಾಜೇಅರಸ್, ಸಂತೋಷ್, ಸಚಿನ್ ದೀಕ್ಷಿತ್, ಕೃಷ್ಣಮೂರ್ತಿ, ಧನಂಜಯ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರಿಗೆ ಆಗಮಿಸಿದ ಆದಿಯೋಗಿ ರಥ ಯಾತ್ರೆ

ಸರಸ್ವತಿಪುರಂನ ಶ್ರೀ ಕೃಷ್ಣಧಾಮದಲ್ಲಿ ಭಕ್ತಿ ಭಾವದ ಸ್ವಾಗತ



ಮೈಸೂರಿಗೆ ಆಗಮಿಸಿದ ಆದಿಯೋಗಿ ರಥಯಾತ್ರೆಯನ್ನು ಸರಸ್ವತಿಪುರಂನ ಶ್ರೀ ಕೃಷ್ಣಧಾಮದಲ್ಲಿ ಸ್ವಾಗತಿಸಲಾಯಿತು.

ಮೈಸೂರು, ಡಿ.31(ಬಿಎಲ್‌ಯು)– ಈಶಾ ಫೌಂಡೇಷನ್ ಆಯೋಜಿಸಿರುವ ಆದಿಯೋಗಿ ರಥಯಾತ್ರೆಯು ಇಂದು ಸಾಂಸ್ಕೃತಿಕ ನಗರಿ ಮೈಸೂರಿಗೆ ಆಗಮಿಸಿತು. ಭಕ್ತಿ ಭಾವ, ಧಾರ್ಮಿಕತೆ ಹಾಗೂ ಆಧ್ಯಾತ್ಮಿಕತೆಯ ಸಂದೇಶ ಸಾರುವ ರಥಯಾತ್ರೆ ಮೈಸೂರಿಗೆ ಆಗಮಿಸಿದಾಗ ಸ್ಥಳಿಯರು ಭಕ್ತಿಭಾವದಿಂದ ಸ್ವಾಗತಿಸಿದರು.

ಉಡುಪಿಯಿಂದ ಮಡಿಕೇರಿ ಮೂಲಕ ಮೈಸೂರಿನ ಇಲವಾಲದ ವಿವೇಕಾನಂದ ಫಾರ್ಮ್ ಹಾಲ್‌ನಲ್ಲಿದ್ದ ರಥಯಾತ್ರೆ ಮೈಸೂರಿಗೆ ಇಂದು ಪ್ರವೇಶಿಸಿತು.

ಮಂಗಳವಾದ್ಯದೊಂದಿಗೆ ಆಗಮಿಸಿದ ಆದಿಯೋಗಿ ರಥ ಯಾತ್ರೆಯನ್ನು ಮೈಸೂರಿನ ಸರಸ್ವತಿಪುರಂನ ಶ್ರೀ ಕೃಷ್ಣಧಾಮದಲ್ಲಿ ಅದ್ದೂರಿಯಾಗಿ ಬರಮಾಡಿಕೊಳ್ಳಲಾಯಿತು. ಆದಿಯೋಗಿಯ ದರ್ಶನ ಪಡೆದ ಭಕ್ತರು ವಿಶೇಷ ಪೂಜೆ ಕೂಡ ಸಲ್ಲಿಸಿದರು. ತರುವಾಯ ರಥ ಯಾತ್ರೆಯನ್ನು ಮುನ್ನಡೆಸುತ್ತಿರುವವರಿಗೆ ಶ್ರೀ ಕೃಷ್ಣಧಾಮದಲ್ಲಿ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು. ಇಂದು ಸಂಜೆವರೆಗೆ ಮೈಸೂರಿನ ಹಲವು ಸ್ಥಳಗಳಲ್ಲಿ ಸಾಗಿದ ರಥಯಾತ್ರೆ ರಾತ್ರಿ ವೇಳೆಗೆ ಮೈಸೂರಿನ ಚಾಮುಂಡಿಬೆಟ್ಟದ ಪಾದದಲ್ಲಿರುವ ಸುತ್ತೂರು ಶಾಖಾ ಮಠಕ್ಕೆ ಆಗಮಿಸಿತು.

ನಾಳೆ ಬೆಳಿಗ್ಗೆ ಸುತ್ತೂರು ಮಠದಿಂದ ಹೊರಡುವ ಆದಿಯೋಗಿ ರಥಯಾತ್ರೆಯು ಮಂಡ್ಯ, ಮದ್ದೂರು, ಚನ್ನಪಟ್ಟಣ, ರಾಮನಗರ, ಬೆಂಗಳೂರು, ಚಿಕ್ಕಬಳ್ಳಾಪುರದ ಮೂಲಕ ತಮಿಳುನಾಡಿನ ಹೊಸೂರಿಗೆ ಆಗಮಿಸಲಿದೆ. ತಮಿಳುನಾಡಿನಲ್ಲೂ ಹಲವು ಸ್ಥಳಗಳಲ್ಲಿ ಸಾಗುವ ರಥ ಯಾತ್ರೆಯು ಮಹಾ ಶಿವರಾತ್ರಿ ಮುನ್ನ ದಿನವಾದ ಫೆ.13ರಂದು ಕೊಯ ಮತ್ತೂರಿನ ಈಶಾ ಫೌಂಡೇಷನ್‌ನಲ್ಲಿ ಸಮಾಪ್ತಿಗೊಳಿಸಲಿದೆ. ಈ ಮೂಲಕ ಸಾವಿರ ಕಿಲೋ ಮೀಟರ್ ಸಾಗುವ ರಥಯಾತ್ರೆಯು ಧಾರ್ಮಿಕ ಹಾಗೂ ಆಧ್ಯಾತ್ಮಿಕತೆ ಬಗ್ಗೆ ಸಂದೇಶ ನೀಡಲಿದೆ. ಧಾರ್ಮಿಕತೆ ಹಾಗೂ ಆಧ್ಯಾತ್ಮಿಕೆಯನ್ನು ಆರಾಧಿಸುವ ಭಕ್ತರು ಸಾವಿರ ಕಿಲೋ ಮೀಟರ್‌ವರೆಗೆ ಕಾಲ್ನಡಿಗೆಯಲ್ಲೆ ರಥವನ್ನು ಮುನ್ನಡೆಸಲಿದ್ದಾರೆ.

ಕಾನೂನು ವಿಶ್ವವಿದ್ಯಾನಿಲಯದ ಪ್ರಾದೇಶಿಕ ಕಚೇರಿ ತೆರೆಯಲು ಆಗ್ರಹ

ಕಾನೂನು ಸಚಿವ ಹೆಚ್.ಕೆ.ಪಾಟೀಲ್‌ಗೆ ಮನವಿ ಸಲ್ಲಿಸಿದ ಶಾಸಕ ದಿನೇಶ್ ಗೂಳಿಗೌಡ



ಹುಬ್ಬಳ್ಳಿಯಲ್ಲಿರುವ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯದ ಪ್ರಾದೇಶಿಕ ಕಚೇರಿಯನ್ನು ಮೈಸೂರಲ್ಲಿ ಸ್ಥಾಪಿಸುವಂತೆ ಶಾಸಕ ದಿನೇಶ್ ಗೂಳಿಗೌಡ ಅವರು ಕಾನೂನು ಸಚಿವ ಹೆಚ್.ಕೆ.ಪಾಟೀಲ್ ಅವರಿಗೆ ಮನವಿ ಮಾಡಿದ್ದಾರೆ.

ಮೈಸೂರು, ಡಿ.31(ಬಿಎಲ್‌ಯು)– ಹುಬ್ಬಳ್ಳಿಯಲ್ಲಿರುವ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯದ ಪ್ರಾದೇಶಿಕ ವಲಯ ಕಚೇರಿಯನ್ನು, ಶೈಕ್ಷಣಿಕ ಕಾಶಿಯೆಂದೇ ಪ್ರಖ್ಯಾತವಾಗಿರುವ ಮೈಸೂರಿನಲ್ಲಿ ಸ್ಥಾಪಿಸಬೇಕು ಎಂದು ಶಾಸಕರೂ ಆದ ಕಾನೂನು ವಿಶ್ವವಿದ್ಯಾನಿಲಯದ ಸಲಹಾ ಮಂಡಳಿಯ ಉಪಾಧ್ಯಕ್ಷ ದಿನೇಶ್ ಗೂಳಿಗೌಡ ಅವರು ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಈ ಸಂಬಂಧ ಕಾನೂನು ಸಚಿವ ಹೆಚ್.ಕೆ.ಪಾಟೀಲ್ ಅವರನ್ನು ಖುದ್ದು ಭೇಟಿ ಮಾಡಿ, ಮನವಿ ಸಲ್ಲಿಸಿದ್ದಾರೆ.

ವಿಶ್ವವಿದ್ಯಾನಿಲಯದ ಕೇಂದ್ರ ಕಚೇರಿ ಹುಬ್ಬಳ್ಳಿಯಲ್ಲಿದ್ದು, ರಾಜ್ಯಾದ್ಯಾಂತ 176 ಕಾನೂನು ಕಾಲೇಜುಗಳು ಇದರ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಒಟ್ಟಾರೆ 30 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಮೂರು ವರ್ಷ ಹಾಗೂ ಐದು ವರ್ಷ ಅವಧಿಯ ಪಠ್ಯಕ್ರಮದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ವಿಶ್ವವಿದ್ಯಾನಿಲಯದ ಅರ್ಧದಷ್ಟು ಕಾನೂನು ಕಾಲೇಜುಗಳು ಮೈಸೂರು, ಬೆಂಗಳೂರು, ಮಂಡ್ಯ, ಹಾಸನ ಹಾಗೂ ಚಾಮರಾಜನಗರ ಸೇರಿದಂತೆ ಹಳೇ ಮೈಸೂರು ಪ್ರಾಂತ್ಯದಲ್ಲೇ ಇವೆ.

ಈ ಮೂಲಕ ವಿಶ್ವವಿದ್ಯಾನಿಲಯದ ಶೇಕಡ 50ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಳೇ ಮೈಸೂರು ಪ್ರಾಂತ್ಯದವರೇ ಆಗಿದ್ದಾರೆ. ಇವರೆಲ್ಲರೂ ತಮ್ಮ ಶೈಕ್ಷಣಿಕ ದಾಖಲಾತಿ, ಅಂಕಪಟ್ಟಿ ಸೇರಿದಂತೆ ಆಡಳಿತಾತ್ಮಕ ಕೆಲಸಗಳಿಗೆ ಪ್ರತಿ ಬಾರಿ ದೂರದ ಹುಬ್ಬಳ್ಳಿಗೆ ಹೋಗ ಬೇಕಾದ ಅನಿವಾರ್ಯ ಪರಿಸ್ಥಿತಿ ಇದೆ ಎಂದು ದಿನೇಶ್ ಗೂಳಿಗೌಡರು, ಕಾನೂನು ಸಚಿವ ಹೆಚ್.ಕೆ.ಪಾಟೀಲ್ ಅವರಿಗೆ ಪರಿಸ್ಥಿತಿಯನ್ನು ಮನವರಿಕೆ ಮಾಡಿಕೊಟ್ಟಿದ್ದಾರೆ. ಹಳೆ ಮೈಸೂರು ಪ್ರಾಂತ್ಯದ ವಿದ್ಯಾರ್ಥಿಗಳು ಹುಬ್ಬಳ್ಳಿಗೆ ಹೋದರೆ ಅವರಿಗೆ ಆರ್ಥಿಕವಾಗಿ ಹೊರೆಯಾಗುತ್ತದೆ, ಜೊತೆಗೆ ಸಮಯದ ವ್ಯಯ ಕೂಡ ಆಗುತ್ತದೆ ಎಂದು ತಿಳಿಸಿದ್ದಾರೆ.

ವಾಸ್ತವ ಪರಿಸ್ಥಿತಿಯನ್ನು ಅರಿತು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯದ ಪ್ರಾದೇಶಿಕ ವಲಯ ಕಚೇರಿಯನ್ನು ಮೈಸೂರಿನಲ್ಲಿ ಸ್ಥಾಪಿಸುವುದು ಸೂಕ್ತ. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಮೈಸೂರಿನಲ್ಲಿ ಪ್ರಾದೇಶಿಕ ವಲಯ ಕಚೇರಿಯನ್ನು ಶೀಘ್ರವೇ ತೆರೆಯಬೇಕು ಎಂದು ಮನವಿ ಮಾಡಿದ್ದಾರೆ. ಇದೇ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೂ ದಿನೇಶ್ ಗೂಳಿಗೌಡ ಪತ್ರ ಬರೆದಿದ್ದಾರೆ.

ಸನ್ಮಾನ...



ಭಾರತೀಯ ಜೀವ ವಿಮಾ ನಿಗಮದ ವಿಜಯ ನಗರ ಶಾಖೆಯ ಅಭಿವೃದ್ಧಿ ಅಧಿಕಾರಿ ಟಿ.ಎಸ್.ಸುರೇಶ್ ನಿವೃತ್ತಿ ಹೊಂದಿದ ಹಿನ್ನೆಲೆಯಲ್ಲಿ ಅವರನ್ನು ಸನ್ಮಾನಿಸಲಾಯಿತು. ಶಾಖಾಧಿಕಾರಿ ಮೋಹನ್‌ಕುಮಾರ್, ಅಖಿಲ ಭಾರತ ಜೀವ ವಿಮಾ ನಿಗಮದ ನಿವೃತ್ತ ನೌಕರರ ಸಂಘದ ಜಂಟಿ ಕಾರ್ಯದರ್ಶಿ ಸೀತಾರಾಮ ಭಟ್, ಮೈಸೂರು ವಿಭಾಗದ ಅಧ್ಯಕ್ಷ ಪಾರ್ಥಸಾರಥಿ, ಪ್ರಧಾನ ಕಾರ್ಯದರ್ಶಿ ಪಿ.ಪುಟ್ಟಸ್ವಾಮಿ, ಜಂಟಿ ಕಾರ್ಯದರ್ಶಿಗಳಾದ ಶಂಕರಪ್ಪ ಮತ್ತು ಬೂಕನಕೆರೆ ವಿಜೇಂದ್ರ ಸೇರಿದಂತೆ ಸಿಬ್ಬಂದಿ ವರ್ಗ ಹಾಜರಿದ್ದರು.



ಶಾಸಕರಿಗೆ ಸನ್ಮಾನ...

ಶಾಸಕ ಟಿ.ಎಸ್.ಶ್ರೀವತ್ಸ ಅವರನ್ನು ಮೈಸೂರು ನಗರ ಬಿಜೆಪಿ ಪ್ರಧಾನ ಕಾರ್ಯದರ್ಶಿಯಾಗಿ ನೇಮಕಗೊಂಡ ವಿ.ಸೋಮಸುಂದರ ಸನ್ಮಾನಿಸಿದರು. ಈ ವೇಳೆ ಕೆ.ಆರ್.ಕ್ಷೇತ್ರದ ಅಧ್ಯಕ್ಷ ಗೋಪಾಲ್‌ರಾಜೇ ಅರಸ್, ಪ್ರಧಾನ ಕಾರ್ಯದರ್ಶಿ ಜಯರಾಮ್, ಜಯಶಂಕರ್, ನಗರ ಉಪಾಧ್ಯಕ್ಷ ವಿಶ್ವೇಶ್ವರಯ್ಯ, ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಗೋಕುಲ್ ಗೋವರ್ಧನ್, ಎನ್.ಪ್ರದೀಪ್‌ಕುಮಾರ್, ರಾಜೇಶ್ ಜಾದವ್, ವಿನಯ್ ಪಾಂಚಜನ್ಯ, ಮಂಜುನಾಥ್, ಹೇಮಂತ್‌ಕುಮಾರ್, ಕೀರ್ತಿ ಇನ್ನಿತರರಿದ್ದರು.

ಮನು ಧರ್ಮಶಾಸ್ತ್ರದಲ್ಲಿನ ಉಲ್ಲೇಖ ಹುಸಿಯಾಗಿಸಿದ ಹೆಣ್ಣು ಮಕ್ಕಳು!

ಶಾಲಾ ಶಿಕ್ಷಣ ಇಲಾಖೆ(ಪದವಿಪೂರ್ವ) ಉಪನಿರ್ದೇಶಕಿ ಎಂ.ಪಿ.ನಾಗಮ್ಮ ಪ್ರಶಂಸೆ



ಜೆಎಸ್‌ಎಸ್ ಮಹಿಳಾ ಪದವಿ ಪೂರ್ವ ಕಾಲೇಜಿನ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳ ಸಮಾರೋಪದಲ್ಲಿ ಸುತ್ತೂರು ಶ್ರೀ ಶಿವರಾತ್ರಿ ರಾಜೇಂದ್ರ ಶ್ರೀಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಾಯಿತು.

ಮೈಸೂರು, ಡಿ.31(ಎಂಕೆ)– ಮನು ಧರ್ಮಶಾಸ್ತ್ರದಲ್ಲಿದ್ದ ನಿರ್ಬಂಧವನ್ನು ಹೆಣ್ಣು ಮಕ್ಕಳು ಸುಳ್ಳೆಂದು ನಿರೂಪಿಸಿ, ಎಲ್ಲಾ ಕ್ಷೇತ್ರದಲ್ಲಿಯೂ ಸಾಧನೆ ಮಾಡಿದ್ದಾರೆ ಎಂದು ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ಉಪ ನಿರ್ದೇಶಕರಾದ ಎಂ.ಪಿ.ನಾಗಮ್ಮ ಹೇಳಿದರು.

ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಪದವಿ ಪೂರ್ವ ಕಾಲೇಜು ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳ ಸಮಾರೋಪ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹೆಣ್ಣು ಮಕ್ಕಳಿಗೆ ಸ್ವಾತಂತ್ರ್ಯ ಕೊಡಬಾರದು. ಬಾಲ್ಯದಲ್ಲಿ ತಂದೆ, ಯೌವ್ವನದಲ್ಲಿ ಗಂಡ ಮತ್ತು ವೃದ್ಧಾಪ್ಯದಲ್ಲಿ ಮಕ್ಕಳ ಆಶ್ರಯದಲ್ಲಿರಬೇಕು. ಅವಳು ಯಾವುದೇ ಸ್ವಾತಂತ್ರ್ಯಕ್ಕೆ ಅರ್ಹಳಲ್ಲ ಎಂದು ಮನು ಧರ್ಮಶಾಸ್ತ್ರದಲ್ಲಿತ್ತು. ಆದರೆ, ಇವತ್ತು ಯಾವುದಕ್ಕೆಲ್ಲಾ ನಿಷಿದ್ಧ ಎನ್ನಲಾಗುತ್ತಿತ್ತೋ ಆ ಎಲ್ಲಾ ಕ್ಷೇತ್ರಗಳಿಗೂ ಹೆಣ್ಣು ಎಂಟ್ರಿಯಾಗಿದ್ದಾಳೆ ಎಂದರು.

ಪ್ರಸ್ತುತ ದಿನಗಳಲ್ಲಿ ಮುಖ್ಯವಾಗಿ ಓದಿನ ಜೊತೆಗೆ ಉತ್ತಮ ಹವ್ಯಾಸ ಮತ್ತು ಅಭ್ಯಾಸಗಳನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಬೇಕಿದೆ. ಉತ್ತಮ ಸ್ನೇಹಿತರು, ಉತ್ತಮ ಪುಸ್ತಕಗಳನ್ನು ಓದುವುದರ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿಯೂ ತೊಡಗಿಕೊಂಡು ಕೌಶಲ್ಯತೆ ವೃದ್ಧಿಸಿಕೊಳ್ಳಬೇಕು. ಹಾಗೆಯೇ ಪರೀಕ್ಷೆಯಲ್ಲೂ ಉತ್ತಮ ಅಂಕಗಳನ್ನು ಪಡೆದು ಉನ್ನತ ವಿದ್ಯಾಭ್ಯಾಸ ಮಾಡಬೇಕು ಎಂದು ವಿದ್ಯಾರ್ಥಿನಿಯರಿಗೆ ಕರೆ ನೀಡಿದರು.

ಮೊದಲು ಮಾನವರಾಗಿ: ಅಧ್ಯಯನ ಮತ್ತು ಹವ್ಯಾಸಗಳ ಮೂಲಕ ವಿದ್ವಾಂಸರಾಗಿ, ರಾಷ್ಟ್ರಕವಿ ಕುವೆಂಪು ಅವರಂತೆ ಕವಿಗಳಾಗಿ, ಕಲಾವಿದರಾಗಿ, ಕ್ರೀಡಾಪಟುಗಳಾಗಿ ಅದೆಲ್ಲದಕ್ಕೂ ಮೊದಲು ಮಾನವರಾಗಿ, ಮಾನವೀಯತೆ ಗುಣಗಳನ್ನು ಮೈಗೂಡಿಸಿಕೊಳ್ಳಿ ಎಂದು ಕಿವಿಮಾತು ಹೇಳಿದರು.

ಮೈಸೂರು ವಿವಿ ಜೆನಿಟಿಕ್ಸ್ ಮತ್ತು ಜಿನೋಮಿಕ್ಸ್ ಅಧ್ಯಯನ ವಿಭಾಗದ ನಿರ್ದೇಶಕರಾದ ಪ್ರೊ.ಸುತ್ತೂರು ಎಸ್.ಮಾಲಿನಿ ಮಾತನಾಡಿ, ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ವಿದ್ಯಾರ್ಥಿಗಳನ್ನು ಕ್ರಿಯಾಶೀಲರನ್ನಾಗಿಸುವುದಲ್ಲದೆ ಮಾನಸಿಕ ಮತ್ತು ದೈಹಿಕ ಆರೋಗ್ಯ ಕಾಪಾಡಲು ಮುಖ್ಯ ಔಷಧಿಯಾಗಿವೆ. ಹದಿಹರಯದ ವಯಸ್ಸು ವಿದ್ಯಾರ್ಥಿಗಳಲ್ಲಿ ಪ್ರೀತಿ, ವ್ಯಾಮೋಹ, ಆಕರ್ಷಣೆ ಕಡೆಗೆ ಸೆಳೆಯಲಿದ್ದು, ಮೊಬೈಲ್ ಅದರ ಮೂಲವಾಗಿದೆ. ಆದ್ದರಿಂದ ಮೊಬೈಲ್‌ಗೆ ದಾಸರಾಗದೆ, ಪೋಷಕರಿಗೆ ಮಾದರಿ ಮಕ್ಕಳಾಗಬೇಕೆಂದು ಕರೆ ನೀಡಿದರು

ಬಹುಮಾನ ವಿತರಣೆ: ಬಳಿಕ ವಿವಿಧ ಸಾಂಸ್ಕೃತಿಕ ಮತ್ತು ಕ್ರೀಡೆಗಳಲ್ಲಿ ವಿಜೇತರಾದ ವಿದ್ಯಾರ್ಥಿನಿಯರಿಗೆ ಅಂತರ ರಾಷ್ಟ್ರೀಯ ಖೋ–ಖೋ ಕ್ರೀಡಾಪಟು ವೀಣಾ ಕುರುಬೂರು ಬಹುಮಾನ ವಿತರಿಸಿ ಅಭಿನಂದಿಸಿದರು.

ಜೆಎಸ್‌ಎಸ್ ಮಹಿಳಾ ಪದವಿ ಕಾಲೇಜು ಪ್ರಾಂಶುಪಾಲ ಡಾ.ರೇಚಣ್ಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜು ಪ್ರಾಂಶುಪಾಲ ಟಿ.ಗುರುಪಾದಸ್ವಾಮಿ, ಕಲಾವಿದ ಹೆಚ್.ಅಶ್ವಿನ್, ಸಂಚಾಲಕರಾದ ಕೆ.ಎಂ.ಶೋಭ, ಶಿವರಕುಮಾರಸ್ವಾಮಿ, ಕನ್ನಡ ವಿಭಾಗದ ಮುಖ್ಯಸ್ಥ ಹೆಚ್.ಬಿ.ಶ್ರೀಧರ್, ವಿದ್ಯಾರ್ಥಿನಿಯರಾದ ಬಿ.ಕೆ.ದೇವಕಿ, ಖುಷಿ, ಅಮೂಲ್ಯ, ಛಲನ, ಸಾನಿಕ ಮತ್ತಿತರರಿದ್ದರು.

ವೀರ ಮಡಿವಾಳರ ಸಂಘದ ಕ್ಯಾಲೆಂಡರ್ ಬಿಡುಗಡೆ




ಮೈಸೂರು ತಾಲೂಕು ವೀರ ಮಡಿವಾಳರ ಸಂಘದ ಕ್ಯಾಲೆಂಡರ್ ಬಿಡುಗಡೆ.


ಮೈಸೂರು,ಡಿ.31(ಎಂಟಿವೈ)– ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮೈಸೂರು ತಾಲೂಕು ವೀರ ಮಡಿವಾಳರ ಸಂಘದ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಮಡಿವಾಳ ಮಾಚೀದೇವರ ಅಭಿವೃದ್ಧಿ ನಿಗಮದ ಅಧ್ಯಕ್ಷರೂ ಆದ ರಾಜ್ಯ ಮಡಿವಾಳ ಸಂಘದ ಅಧ್ಯಕ್ಷ ಸಿ.ನಂಜಪ್ಪ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಿದರು.

ಬಳಿಕ ಮಾತನಾಡಿದ ಅವರು, ರಾಜ್ಯ ಸರ್ಕಾರ ಮಡಿವಾಳ ಸಮುದಾಯ ಅಭಿವೃದ್ಧಿಗಾಗಿ ನೆರವು ನೀಡುವ ನಿಟ್ಟಿನಲ್ಲಿ ಮಡಿವಾಳ ಮಾಚೀದೇವರ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಿದೆ. ನಿಗಮದಿಂದ ದೊರೆಯುವ ಸೌಲಭ್ಯವನ್ನು ಸಮುದಾಯದ ಬಡ ಜನರಿಗೆ ತಲುಪಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿರುವುದಾಗಿ ತಿಳಿಸಿದ ಅವರು, ಜಿಲ್ಲಾ ಸಂಘ ಸಹ ಅಂತಹ ಸೌಲಭ್ಯಗಳ ಬಗ್ಗೆ ಸಮುದಾಯದಲ್ಲಿ ಅರಿವು ಮೂಡಿಸುವ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ಈ ವೇಳೆ ಮೈಸೂರು ತಾಲೂಕು ವೀರ ಮಡಿವಾಳರ ಸಂಘದ ಪದಾಧಿಕಾರಿಗಳಾದ ಮಾದುರಾಜು ಮಡಿವಾಳ, ಚನ್ನಕೇಶವ, ಜಯರಾಂ, ದುದ್ದಗೆರೆ ಶಿವಣ್ಣ, ಸಿದ್ದಪ್ಪಾಜಿ, ರಮ್ಮನಹಳ್ಳಿ ಮಹದೇವಸ್ವಾಮಿ, ಮಹೇಶ್, ಪ್ರಕಾಶ್ ಕೂಡ್ನಹಳ್ಳಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.









ಸ್ಥಾಪನೆ : 1919 Ph- 2520894, 4259665

ಶ್ರೀ ಕೃಷ್ಣರಾಜೇಂದ್ರ ಸಹಕಾರ ಬ್ಯಾಂಕ್ ನಿಯಮಿತ

ಎನ್.ಮಾಧವರಾವ್ ವೃತ್ತ, ಮೈಸೂರು–570004

ಪ್ರಕಟಣೆ

ಬ್ಯಾಂಕಿನ ಸದಸ್ಯರುಗಳಿಗೆ ಹಾಗೂ ಠೇವಣಿದಾರರಿಗೆ ಹೊಸ ವರ್ಷದ ಶುಭಾಶಯಗಳು

1. 2026 ನೇ ಸಾಲಿನ ಬ್ಯಾಂಕಿನ ವಾಲ್ ಕ್ಯಾಲೆಂಡರ್‌ಗಳನ್ನು ವಿತರಿಸಲಾಗುತ್ತಿದೆ.
2. ಚಿನ್ನಾಭರಣಗಳ ಮೇಲೆ ಶೇ 9.5 ರಂತೆ ಗ್ರಾಂಗೆ ರೂ. 8000/– ರಂತೆ ಶೀಘ್ರವಾಗಿ ಸಾಲ ನೀಡಲಾಗುತ್ತಿದೆ.
3. ಮನ ಹಾಗೂ ನಿವೇಶನಗಳ ಮೇಲೆ, ಮನೆ/ನಿವೇಶನ ಕೊಳ್ಳುವ ಉದ್ದೇಶಕ್ಕೆ ಶೇ 12.5ರಂತೆ ಗರಿಷ್ಠ 40 ಲಕ್ಷ ಶೀಘ್ರವಾಗಿ ಸಾಲ ನೀಡಲಾಗುತ್ತಿದೆ. (ಸುಸ್ತಿ ಬಡ್ಡಿ ಪಾವತಿಸದೇ ಸರಿಯಾಗಿ ಕಂತುಗಳನ್ನು ಕಟ್ಟಿದವರಿಗೆ ಬಡ್ಡಿಯಲ್ಲಿ 1% ರಿಯಾಯಿತಿ ನೀಡಲಾಗುವುದು.)
4. ಠೇವಣಿಗಳ ಮೇಲೆ ಗರಿಷ್ಠ ಶೇ 7% ರಂತೆ ಹಾಗೂ ಹಿರಿಯ ನಾಗರೀಕರಿಗೆ ಶೇ 7.5% ರಂತೆ ಬಡ್ಡಿ ನೀಡಲಾಗುತ್ತಿದೆ.

ಶ್ರೀ ಡಿ.ಬಸವರಾಜು (ಬಸಪ್ಪ),	ಶ್ರೀಮತಿ ಹೆಚ್ ಎನ್.ಸರ್ವಮಂಗಳ,	ಶ್ರೀ ಡಿ. ಅನಂತವೀರಪ್ಪ,
ಅಧ್ಯಕ್ಷರು	ಉಪಾಧ್ಯಕ್ಷರು	ಪ್ರ. ವ್ಯವಸ್ಥಾಪಕರು

ನಿರ್ದೇಶಕರುಗಳಾದ: ನಂಪಿದ್ದಪ್ಪ, ಜಿ.ಎಂ.ಪಂಚಾಕ್ಷರಿ, ಹೆಚ್.ವಿ.ಭಾಸ್ಕರ್, ಎಂ.ಡಿ.ಪಾರ್ಥಸಾರಥಿ(ಪಾತಿ), ಪ್ರತಿಧ್ವನಿಪ್ರಸಾದ್, ಟಿ.ವಿ. ಗಣೇಶಮೂರ್ತಿ, ಶ್ರೀಮತಿ ಬಿ. ನಾಗಜ್ಯೋತಿ, ನವೀನ್ ಕುಮಾರ್ ಎಂ.ಎನ್., ಎಂ.ಎಸ್. ಅರುಣ್ ಸಿದ್ದಪ್ಪ, ಹೆಚ್.ವಾಸು, ಶಿವಪ್ರಕಾಶ್ ಎಂ.

